ವಿಚಾರ ಪತ್ನಿ
ಶರಣೆ ನೀಲಾಂಬಿಕೆಯವರು



■ ಡಾ. ಕಲ್ಯಾಣಮ್ಮ ಲಂಗೋಟಿ

॥ ಓಂ ಶ್ರೀಗುರು ಬಸವಲಿಂಗಾಯ ನಮಃ ॥

ವಿಚಾರಪತ್ನಿ

ಶರಣೆ ನೀಲಾಂಬಿಕೆಯವರು

ಲೇಖಕರು

ಡಾ. ಕಲ್ಯಾಣಮ್ಮ ಲಂಗೋಟಿ ಎಂ.ಎ.,ಪಿಎಚ್.ಡಿ.

ಶರಣ ಸಾಹಿತಿಗಳು, ನಿವೃತ್ತ ಕನ್ನಡ ಪ್ರಾಧ್ಯಾಪಕಿಯರು

ರಾಮದುರ್ಗ-೫೯೧ ೧೨೩. ಜಿ॥ ಬೆಳಗಾವಿ

೨೦೧೬

ಜಗಜ್ಯೋತಿ ಬಸವೇಶ್ವರ ಅನುಭಾವಪೀಠ

ರಾಮದುರ್ಗ-೫೯೧ ೧೨೩. ಜಿ॥ ಬೆಳಗಾವಿ

ವಿಚಾರಪತ್ನಿ
ಶರಣೆ ನೀಲಾಂಬಿಕೆಯವರು

ಲೇಖಕರು : **ಡಾ. ಕಲ್ಯಾಣಮ್ಮ ಲಂಗೋಟಿ** ಎಂ.ಎ.,ಪಿಎಚ್.ಡಿ.
ನಿವೃತ್ತ ಕನ್ನಡ ಪ್ರಾಧ್ಯಾಪಕಿ
ರಾಮದುರ್ಗ-೫೯೧ ೧೨೩. ಜಿ॥ ಬೆಳಗಾವಿ

ಪ್ರಕಾಶಕರು : **ಜಗಜ್ಯೋತಿ ಬಸವೇಶ್ವರ ಅನುಭಾವಪೀಠ**
ರಾಮದುರ್ಗ-೫೯೧ ೧೨೩. ಜಿ॥ ಬೆಳಗಾವಿ

ಪ್ರಥಮ ಮುದ್ರಣ : ೨೦೧೬

ಪ್ರತಿಗಳು : ೧೦೦೦

ಪುಟಗಳು : iv + ४४ = ४८

ಪೇಪರ ಬಳಸಿದ್ದು : ಮ್ಯಾಪ್ಲಿಥೋ ಮತ್ತು ಆರ್ಟ ಕಾರ್ಡ ಕವ್ಹರ ೨೫೦ ಜಿ.ಎಸ್.ಎಂ.

ಬೆಲೆ : **ಮೂವತ್ತು ರೂಪಾಯಿಗಳು** **₹ ೩೦/-**

ಮುಖಪುಟ ವಿನ್ಯಾಸ : ಶ್ರೀ ರವೀಂದ್ರ ವಿಶ್ವಜ್ಞ, ಧಾರವಾಡ.

ಮುದ್ರಕರು : **ಶ್ರೀ ಹುಚ್ಚೇಶ್ವರ ಆಫ್‌ಸೆಟ್ ಪ್ರಿಂಟರ್ಸ**
ರಾಮದುರ್ಗ-೫೯೧ ೧೨೩. ಜಿ॥ ಬೆಳಗಾವಿ
ದೂರವಾಣಿ : ೦೮೩೩೫ - ೨೪೧೦೬೩

॥ ಓಂ ಶ್ರೀಗುರು ಬಸವಲಿಂಗಾಯ ನಮಃ ॥

ಲೇಖಕಿಯ ನಿವೇದನೆ

ಪ್ರಾಚೀನ ಭಾರತದ ಸಮಾಜೋ-ಧಾರ್ಮಿಕ ಇತಿಹಾಸದಲ್ಲಿ ದ್ರಾವಿಡರದು 'ಮಾತೃಪ್ರಧಾನ ಸಂಸ್ಕೃತಿ'ಯಾದರೆ, ಆರ್ಯರದು 'ಪಿತೃ ಪ್ರಧಾನ ಸಂಸ್ಕೃತಿ'ಯಾಗಿದೆ. ಒಂದು ಸಂಸ್ಕೃತಿಯಲ್ಲಿ ಪುರುಷ ಗೌಣವಾಗಿದ್ದರೆ, ಇನ್ನೊಂದು ಸಂಸ್ಕೃತಿಯಲ್ಲಿ ಮಹಿಳೆ ಗೌಣವಾಗಿದ್ದಾಳೆ.

ಇಂತಹ ಭೇದ ಸಂಸ್ಕೃತಿ, ಸಮಾಜ, ಧರ್ಮವನ್ನು ನಿರಸನಗೈದು ಸ್ತ್ರೀ-ಪುರುಷ ಸಮಾನತೆಯ, ಸಮಾನಗೌರವದ, ಸಮ-ಶ್ರಮ ಸಂಸ್ಕೃತಿಯನ್ನು ವಿಶ್ವಗುರು ಬಸವಣ್ಣನವರು ಹುಟ್ಟು ಹಾಕಿದರು. ವರ್ಣಭೇದ-ವರ್ಗಭೇದ-ಆಶ್ರಮಭೇದ-ಲಿಂಗಭೇದ-ಜಾತಿಭೇದಗಳಿಲ್ಲದ ಸರ್ವಸಮಾನತೆಯ ಧರ್ಮ-ಸಮಾಜ-ಸಂಸ್ಕೃತಿಯನ್ನು ೧೨ನೇ ಶತಮಾನದ ಕಲ್ಯಾಣ ರಾಜ್ಯದಲ್ಲಿ ರೂಪಿಸಿದರು.

ಬಸವಣ್ಣನವರ ಧರ್ಮಪತ್ನಿಯರಲ್ಲಿ ಗಂಗಾಂಬಿಕೆ ಕ್ರಿಯಾಶಕ್ತಿಯಾಗಿದ್ದರೆ, ನೀಲಾಂಬಿಕೆ ಜ್ಞಾನಶಕ್ತಿಯಾಗಿದ್ದಳು. ಬಸವಣ್ಣನವರ ಬಾಳಿನಲ್ಲಿ ನೀಲಾಂಬಿಕೆಯು 'ವಿಚಾರಪತ್ನಿ'ಯಾಗಿ ಕಾರ್ಯನಿರ್ವಹಿಸಿದ್ದನ್ನು ಕಾಣುತ್ತೇವೆ.

ದಾಂಪತ್ಯ ಜೀವನದಲ್ಲಿ ಶರಣ ದಾಸಿಮಯ್ಯನವರು ಹೇಳುವಂತೆ- 'ಸತಿ-ಪತಿಗಳೊಂದಾದ ಭಕ್ತಿಯು ಹಿತವಾಗಿಪ್ಪುದು ಶಿವಂಗೆ' ಎಂಬಂತೆ ಬದುಕಿದವರು ಬಸವಾದಿ ಶರಣರು. ಶರಣರದು ಗೃಹಸ್ಥ ಜೀವನ ಆದರ್ಶದ ಬಾಳುವೆಯಾಗಿದೆ. ದಾಂಪತ್ಯ ಜೀವನದ ಪ್ರಾರಂಭದಲ್ಲಿದ್ದ ಕಾಮವು ಅನಂತರ ಪ್ರೇಮವಾಗಿ, ವಾತ್ಸಲ್ಯವಾಗಿ ಉದಾತ್ತೀಕರಣಗೊಳ್ಳುತ್ತ ಹೋಗುತ್ತದೆ. 'ಬಸವ ಎನಗೆ ಶಿಶುವಾದ, ಆನು ಬಸವಂಗೆ ಶಿಶುವಾದೆ' ಎಂಬ ನೀಲಾಂಬಿಕೆಯ ಮಾತಿನಲ್ಲಿ ನಾವು ಮನಗಾಣುತ್ತೇವೆ.

ಇಂತಹ ಶರಣೆ ನೀಲಾಂಬಿಕೆಯ ಜೀವನ-ಸಾಧನೆ ಕುರಿತು ಈ ಪುಸ್ತಕದಲ್ಲಿ ಚಿತ್ರಿಸಲು ಪ್ರಯತ್ನಿಸಿದ್ದೇನೆ. ಆಧುನಿಕ ಯುಗದ ಯುವಕ-ಯುವತಿಯರು ಆದರ್ಶ ಶರಣ-ದಾಂಪತ್ಯ ಜೀವನ ಬಾಳುವಂತಾಗಲಿ ಎಂಬುದೇ ನನ್ನ ಕಳಕಳಿಯ ನಿವೇದನೆಯಾಗಿದೆ.

ಶರಣು-ಶರಣಾರ್ಥಿಗಳು.

'ಬಸವ ಸಂಜಾತೆ'

ಡಾ. ಕಲ್ಯಾಣಮ್ಮ ಲಂಗೋಟಿ

ಪರಿವಿಡಿ

ವಿಚಾರಪತ್ನಿ ಶರಣೆ ನೀಲಾಂಬಿಕೆಯವರು

॥ ಓಂ ಶ್ರೀಗುರು ಬಸವಲಿಂಗಾಯ ನಮಃ॥

ವಿಚಾರಪತ್ನಿ
ಶರಣೆ ನೀಲಾಂಬಿಕೆಯವರು

೧. ಪ್ರಸ್ತಾವನೆ :

ಜಗತ್ತಿನ ಇತಿಹಾಸದಲ್ಲಿ ಭಾರತದೇಶವು ತುಂಬಾ ಪ್ರಾಚೀನಕಾಲದಿಂದಲೂ ಆದಿ ದ್ರಾವಿಡ ಜನಾಂಗದ ಶೈವಧರ್ಮ–ನಾಗರಿಕತೆ–ಸಂಸ್ಕೃತಿಯನ್ನು ಹೊಂದಿದ ಸುಂದರ ದೇಶವಾಗಿತ್ತು ಎಂದು ಪೌರ್ವಾತ್ಯ ಮತ್ತು ಪಾಶ್ಚಿಮಾತ್ಯ ಇತಿಹಾಸಜ್ಞರು ಹೇಳಿದ್ದಾರೆ. ಹರಪ್ಪಾ–ಮಹೇಂಜೋದಾರೋ ಪ್ರಾಂತದ ಉತ್ಖನನದಿಂದ ಕಂಡು ಬಂದಿರುವ ಐತಿಹ್ಯಗಳಿಂದ ಸಿಂಧೂನದಿಯ ದಡದ ಮೇಲೆ ಈ ಶೈವಧರ್ಮ ಪರಂಪರೆಯ ಸಂಸ್ಕೃತಿ–ನಾಗರಿಕತೆಯು ವ್ಯಾಪಕವಾಗಿ ಹರಡಿತ್ತು ಎಂದು ತಿಳಿದು ಬರುತ್ತದೆ.

ದ್ರಾವಿಡ ಸಂಸ್ಕೃತಿಯ ಆರಾಧ್ಯ ದೇವರು ಶಿವ ಮತ್ತು ಪಾರ್ವತಿಯರು. ಇವರ ಪರಿವಾರ ಶಿವಗಣಂಗಳು. ಆ ಕಾಲದಲ್ಲಿ 'ಮಾತೃ ಪ್ರಧಾನ ಸಂಸ್ಕೃತಿ' ಕುಟುಂಬ–ಸಮಾಜ ಜೀವನದಲ್ಲಿ ಆಚರಣೆಯಲ್ಲಿತ್ತು. ಸ್ತ್ರೀಯರು ವಿಶೇಷವಾದ ಗೌರವವನ್ನು ಹೊಂದಿದ್ದರು.

ಮಧ್ಯ ಏಶಿಯಾದಿಂದ ಸಂಚರಿಸುತ್ತ ಬಂದ ಆರ್ಯರು ವಿಶಾಲವಾದ, ಸಮೃದ್ಧವಾದ ಸಿಂಧೂ, ಗಂಗಾ, ಯಮುನಾ, ಸರಸ್ವತಿ ಮುಂತಾದ ನದಿಗಳ ಸಮೃದ್ಧ ಮುಖಜ ಭೂ ಪ್ರದೇಶವನ್ನು ವ್ಯಾಪಿಸಿದರು. ಆಗ ಆರ್ಯರ ವೈದಿಕ ಧರ್ಮ ಸಂಸ್ಕೃತಿಯು ಹರಡತೊಡಗಿತು. ಈ ಆರ್ಯ ಸಂಸ್ಕೃತಿಯು ' ಪಿತೃ ಪ್ರಧಾನ' ಸಂಸ್ಕೃತಿಯನ್ನು ಹೊಂದಿದ್ದುದರಿಂದ ಸ್ತ್ರೀಯರು ಸೀಮಿತವಾದ ಹಕ್ಕುಗಳನ್ನು ಹೊಂದಿದ್ದರು. ಸ್ಮೃತಿಗಳ ಕಾಲದಲ್ಲಿ, ವೇದೋಪನಿಷತ್ತುಗಳ ಜ್ಞಾನ ಪ್ರಧಾನ ವ್ಯವಸ್ಥೆ ಪಕ್ಕಕ್ಕೆ ಸರಿದು, ಕರ್ಮ ಕಾಂಡದ ಧಾರ್ಮಿಕ ಕಾನೂನು ರಚನೆಯಾಗಿ, ಸ್ತ್ರೀಯರು ಧರ್ಮ ಸಂಸ್ಕಾರ, ದೇವರ ಪೂಜೆಗಳಿಂದ ವಂಚಿತರಾದರು. ಸ್ತ್ರೀಯರ ಸ್ವಾತಂತ್ರ್ಯ ಹರಣವಾಗಿ ಅವಳು ಸಂಪೂರ್ಣವಾಗಿ ಪುರುಷರು ದೌರ್ಜನ್ಯಕ್ಕೊಳಗಾಗಿ ದಾಸ್ಯತ್ವ ಸ್ವೀಕರಿಸುವಂತಾಯ್ತು.

ಮನು ಮಹಾಶಯನು ತನ್ನ 'ಮನುಸ್ಮೃತಿ' ಎಂಬ ಧಾರ್ಮಿಕ ಸಂವಿಧಾನದಲ್ಲಿ ಹೇಳುತ್ತಾನೆ.

ಬಾಲಯಾ ಯುವತ್ಯಾ ವಾ ವೃದ್ಧಯಾ ವಾ ಪಿಯೋಷ್ಯಿತಾ ।
ನ ಸ್ವಾತಂತ್ರೇಣ ಕರ್ತವ್ಯಂ ಕಿಂಚಿತ್ಕಾರ್ಯಂ ಗೃಹೇಷ್ವಪಿ ॥
[ಮನುಸ್ಮೃತಿ ಅ-೫ ಶ್ಲೋಕ-೧೪೭]

ಅಂದರೆ "ಬಾಲಕಿ, ಯುವತಿ, ಮುದುಕಿ ಅಥವಾ ಹೆಂಗಸು ಮನೆಯಲ್ಲಿ ತನ್ನ ಯಜಮಾನನ್ನು ಕೇಳದೆ ಸ್ವತಂತ್ರವಾಗಿ ಯಾವುದೇ ಕೆಲಸವನ್ನು ಮಾಡಕೊಡದು." ನ ಸ್ತ್ರೀ ಸ್ವಾತಂತ್ರ್ಯಮ್ ಅರ್ಹತಿ ಸ್ತ್ರೀಯರು ಸ್ವಾತಂತ್ರ್ಯಕ್ಕೆ ಅರ್ಹರಲ್ಲ ಎಂಬುದು ಸ್ಮೃತಿಕಾರನು ರಚಿಸಿದ ಧಾರ್ಮಿಕ ಕಾನೂನು ಆಚರಣೆಗೆ ಬಂದುದರಿಂದಾಗಿ, ಸಾವಿರಾರು ವರುಷಗಳಿಂದ ಸ್ತ್ರೀಯರು ಪರಾಧೀನರಾದರು.

ಚಾತುರ್ವರ್ಣ ಧರ್ಮ-ಸಮಾಜ ವ್ಯವಸ್ಥೆಯಲ್ಲಿ ಬ್ರಾಹ್ಮಣ-ಕ್ಷತ್ರೀಯ ವೈಶ್ಯ- ಶೂದ್ರ ನಾಲ್ಕೂ ವರ್ಣದ ಸ್ತ್ರೀಯರನ್ನು ಶೂದ್ರಾತಿ-ಶೂದ್ರರಂತೆ ಧಾರ್ಮಿಕ ಸಂಸ್ಕಾರ ನೀಡದೆ, ಸಾಮಾಜಿಕ ಸಮಾನತೆ ನೀಡದೆ, ಅವರನ್ನು ಭೋಗವಸ್ತುವಾಗಿ ಪುರುಷ ಪ್ರಧಾನ ಕುಟುಂಬ-ಸಮಾಜ-ಧರ್ಮ ವ್ಯವಸ್ಥೆಯು ಪರಿಗಣಿಸಿತು. 'ಹೆಣ್ಣು ಹುಟ್ಟಿದರೆ ಹುಣ್ಣು ಹುಟ್ಟಿದಂತೆ, ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ, ಎಂಬಂತಹ ಮಾತುಗಳು ಪ್ರಚಲಿತಗೊಂಡವು.

ಹೆಣ್ಣನ್ನು ಮೇಲ್ಜಾತಿಯ ಸವರ್ಣೀಯರು 'ದಾನದ ವಸ್ತು' ವೆಂಬಂತೆ ಪರಿಗಣಿಸಿದರು. ಅನ್ನದಾನ, ವಸ್ತ್ರದಾನ, ಹಿರಣ್ಯದಾನ, ಗೋದಾನ, ಭೂದಾನ ದಂತೆಯೇ **'ಕನ್ಯಾದಾನ'**ವೆಂಬುದನ್ನು ಜಾರಿಗೆ ತಂದರು. ಕನ್ಯೆಯನ್ನು ಮದುವೆ ಕಾಲಕ್ಕೆ ಧಾರೆಯೆರೆದು ಕೈತೊಳೆದುಕೊಂಡರು. ಇನ್ನೂ ಶೂದ್ರ-ಪಂಚಮ ವರ್ಣಗಳ ಕನ್ಯೆಯರನ್ನು ದೇವದಾಸಿ, ವೇಶ್ಯೆಯರನ್ನಾಗಿಸಿ ದೇವರ ಹೆಸರಿನಲ್ಲಿ ಸವರ್ಣೀಯರು ಭೋಗಕ್ಕೆ ಬಳಸಿಕೊಳ್ಳುತ್ತಿದ್ದರು. ಮದುವೆಯಾದ ಪತ್ನಿಗೆ 'ಗಂಡನ ಸೇವೆಯಲ್ಲದೆ ಪೂಜೆ, ಹೋಮ, ಯಾಗ, ಉಪವಾಸ, ಜಪ, ಒಂದೂ ಬೇಡ' (ಮ.ಸ್ಮೃ.ಅ-೫ ಶ್ಲೋಕ ೧೫೫) ಎಂದು ಕಾನೂನು ಜಾರಿಗೆ ತಂದರು.

ಧಾರ್ಮಿಕ ಸಂಸ್ಕಾರ (ಉಪನಯನ)ದಿಂದ ವಂಚಿತರಾದ ಎಲ್ಲ ವರ್ಣಗಳ ಸ್ತ್ರೀಯರು ಹಾಗೂ ಶೂದ್ರಾತಿ ಶೂದ್ರ ಸ್ತ್ರೀ-ಪುರುಷರು ಸಹಜವಾಗಿಯೇ ವಿದ್ಯೆಯಿಂದಲೂ ವಂಚಿತರಾದರು. ಗುರುಕುಲಗಳಲ್ಲಿ ಬ್ರಾಹ್ಮಣ-ಕ್ಷತ್ರಿಯ, ವೈಶ್ಯವರ್ಣ-ಜಾತಿಗಳ ಬಾಲಕರಿಗೆ ಮಾತ್ರ ಪ್ರವೇಶ ಕಲ್ಪಿಸಿ, ಬ್ರಾಹ್ಮಣ ಬಾಲಕರು ವೇದಾಧ್ಯಯನ, ಕ್ಷತ್ರಿಯ ಬಾಲಕರು ಶಸ್ತ್ರಾಭ್ಯಾಸ, ವೈಶ್ಯ ಬಾಲಕರು ಅರ್ಥಶಾಸ್ತ್ರ-ಲೆಕ್ಕಶಾಸ್ತ್ರ-ವ್ಯವಹಾರ ಅಧ್ಯಯನಕ್ಕೆ ಸೀಮಿತರಾದರು. ಇಲ್ಲಿ ಯಾವ ಜಾತಿಯ ಬಾಲಕಿಯರಿಗೂ ಯಾವುದೇ ರೀತಿಯ ವಿದ್ಯೆಗೆ ಅವಕಾಶವಿರಲಿಲ್ಲ. ' ವಿದ್ಯಾಹೀನ

ಮಾನವಾಃ ಪಶು ಸಮಾನಃ' ಎಂಬ ಉಕ್ತಿಯು ವೇದ ಗ್ರಂಥಗಳಲ್ಲಿ ಉಳಿಯಿತೇ ವಿನಃ ಆಚರಣೆಗೆ ಬರಲಿಲ್ಲ. ಅದೇ ರೀತಿಯಲ್ಲಿ ಸರ್ವೇಜನಾಃ ಸುಖಿನೋಭವಂತು ಎಂಬುದಾಗಲೀ, ಯತ್ರ ನಾರ್ಯಸ್ತು ಪೂಜ್ಯಂತೇ ತತ್ರ ರಮಂತೇ ದೇವತಾಃ ಎಂಬುದಾಗಲೀ, ಬಾಯಿಮಾತಿನಲ್ಲಿ ಉಳಿದವೇ ವಿನಹ ಕೃತಿಯಲ್ಲಿ ಬರಲೇ ಇಲ್ಲ.

‘ಬ್ರಾಹ್ಮಣಾಃ ಭೂಸುರಃ’ ಎಂದು ತಮ್ಮನ್ನು ತಾವೇ ಪ್ರಶಂಸಿಸಿಕೊಂಡು, ‘ರಾಜಾಃ ಪ್ರತ್ಯಕ್ಷ ದೇವತಾಃ’ ಎಂದು ರಾಜರನ್ನು ಹೊಗಳುತ್ತಾ ಹೇರಳವಾಗಿ ದಾನ–ದತ್ತಿ, ವಸ್ತ್ರ–ಕನಕಾದಿಗಳನ್ನು ಪಡೆಯುತ್ತಾ ಈ ಎರಡೂ ವರ್ಣಗಳವರು ಭೋಗಲೋಲುಪರಾಗಿ ಹೋಗಿದ್ದರು.

ಧಾರ್ಮಿಕ ನ್ಯಾಯ, ಸಾಮಾಜಿಕ ನ್ಯಾಯ, ಕೌಟುಂಬಿಕ ನ್ಯಾಯ, ಆರ್ಥಿಕ ನ್ಯಾಯಗಳು ಮರೆಯಾಗಿ ಎಲ್ಲೆಡೆಯಲ್ಲಿಯೂ ವಿಪ್ರರು ಹಾಗೂ ನೃಪರು ತಮಗೆ ಮನ ಬಂದಂತೆ ವರ್ತಿಸುತ್ತಾ, ಧರ್ಮ–ದೇವರು, ಧರ್ಮಗ್ರಂಥಗಳನ್ನು, ದುರುಪಯೋಗ ಪಡಿಸಿಕೊಳ್ಳುತ್ತಿದ್ದರು. ಇಂತಹ ಕರಾಳ ಕಗ್ಗತ್ತಲೆಯಲ್ಲಿ ಮಾನವ ಕುಲದ ಉದ್ಧಾರಕ್ಕಾಗಿ ೧೨ ನೇ ಶತಮಾನದಲ್ಲಿ ಬಾಲುಕ್ಯ ಸಾಮ್ರಾಜ್ಯದ ‘ತರ್ದೆವಾಡಿ ಸಾಸಿರ’ ಪ್ರಾಂತದ ಒಂದು ಪ್ರಮುಖ ಪಟ್ಟಣ ಇಂಗಳೇಶ್ವರ–ಬಾಗೇವಾಡಿ ಪಟ್ಟಣದಲ್ಲಿ ‘ಜಗಜ್ಯೋತಿ ಬಸವಣ್ಣನವರ’ ಉದಯವಾಯಿತು.

೨. ಇಂಗಳೇಶ್ವರ–ಬಾಗೇವಾಡಿಯ ಪೂರ್ವಜರು

ಅಂದಿನ ಕಾಲದಲ್ಲಿ ಜಂಬೂದ್ವೀಪವೆಂದೆನಿಸಿದ್ದ ಭಾರತವು ಅನೇಕ ರಾಜ, ಮಹಾರಾಜ, ಚಕ್ರವರ್ತಿಗಳ ಆಳ್ವಿಕೆಗೆ ಒಳಪಟ್ಟಿತ್ತು. ಕ್ರಿ.ಶ. ೫ನೇ ಶತಮಾನದಿಂದ ದಕ್ಷಿಣ ಭಾರತವನ್ನು ಆಳಿದವರು ಬಾದಾಮಿಯ ಬಾಲುಕ್ಯರು. (ಕ್ರಿ.ಶ. ೪೫೦ ರಿಂದ ೭೫೩ರ ವರೆಗೆ) ಇವರನ್ನು ಸೋಲಿಸಿ ಕ್ರಿ.ಶ. ೭೫೩ ರಿಂದ ೯೭೩ ವರೆಗೆ ರಾಷ್ಟ್ರಕೂಟರು ಆಳ್ವಿಕೆ ನಡೆಸಿದರು. ಅನಂತರ ರಾಷ್ಟ್ರಕೂಟರ ದುರ್ಬಲ ರಾಜ ಕರ್ಕನನ್ನು ಸೋಲಿಸಿ ಚಾಲುಕ್ಯ ವಂಶದ ಇಮ್ಮಡಿ ತೈಲಪನು ಮರಳಿ ಚಾಲುಕ್ಯ ಸಾಮ್ರಾಜ್ಯ ಸ್ಥಾಪಿಸಿದನು. ಈ ವಂಶದ ಒಂದನೇ ಸೋಮೇಶ್ವರನು ಕಲ್ಯಾಣವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ಪ್ರಾರಂಭಿಸಿದನು. ಈ ಚಕ್ರವರ್ತಿಯ ಮಗ ಸಾಮ್ರಾಟ್ ೬ ನೇ ವಿಕ್ರಮಾದಿತ್ಯನು ಚಾಲುಕ್ಯ ಸಾಮ್ರಾಜ್ಯದ ಕೀರ್ತಿಯನ್ನು ಭಾರತದಾದ್ಯಂತ ಹಬ್ಬಿಸಿದನು. ದಕ್ಷಿಣ ಭಾರತದಿಂದ ಉತ್ತರ ಭಾರತಕ್ಕೆ ದಂಡೆತ್ತಿ ಹೋಗಿ, ಅದನ್ನು ಗೆದ್ದು, ಅಲ್ಲಿ ತನ್ನ ಪ್ರತಿನಿಧಿಗಳಾಗಿ ಮಾಂಡಲಿಕ ಅರಸರನ್ನು ನೇಮಿಸಿದನು. ಬಂಗಾಳ, ಬಿಹಾರ, ನೇಪಾಳಗಳ ದೊರೆಗಳು ಕರ್ನಾಟಕ ವಂಶದವರೆಂದು ಇತಿಹಾಸಜ್ಞರು ದಾಖಲಿಸಿರುವರು. ಆ ಕಾಲದಲ್ಲಿ ಚೋಳರು,

ಹೊಯ್ಸಳರು, ರಾಷ್ಟ್ರಕೂಟರು ಮುಂತಾದವರೆಲ್ಲ ಸಾಮಂತರಾಗಿದ್ದರು.

೬ನೇ ವಿಕ್ರಮಾದಿತ್ಯನ ಸಾಮಂತ ರಾಜನಾಗಿದ್ದ ಮಂಗಳವಾಡಿಯ ಕಲಚೂರ್ಯ ವಂಶದ ಜೋಗಮನು ತನ್ನ ಮಗಳು ಸಾವಲದೇವಿಯನ್ನು ಚಕ್ರವರ್ತಿಗೆ ಕೊಟ್ಟು ವಿವಾಹ ಮಾಡಿ. ಸಂಬಂಧಿಕನಾಗಿದ್ದನು. ಈ ಜೋಗಮನು ತನ್ನ ಮಗ ಕಲಚೂರಿ ಪೆರ್ಮಾಡಿಗೆ ವಿಕ್ರಮಾದಿತ್ಯನ ಮತ್ತೊಬ್ಬ ರಾಣಿ ಚಂದಲದೇವಿಯ ಮಗಳನ್ನು ತಕ್ಕೊಂಡಿದ್ದನು. ಈ ಪೆರ್ಮಾಡಿಯು ಮಾಂಡಲಿಕನಾಗಿ 'ತರ್ದವಾಡಿ ಒಂದು ಸಾವಿರ' ಪ್ರಾಂತದ ರಾಜಧಾನಿ ಮಂಗಳವಾಡಿಯನ್ನಾಗಿಸಿ ಆಳುತ್ತಿದ್ದ ಕಾಲದಲ್ಲಿ ಈ ಪ್ರಾಂತದ ಪ್ರಮುಖ ಪಟ್ಟಣಗಳಲ್ಲೊಂದಾಗಿದ್ದ ಇಂಗಳೇಶ್ವರ (ತಿಂಗಳೇಶ್ವರ)ದಲ್ಲಿ ಶೈವ ಬ್ರಾಹ್ಮಣ ಪರಿವಾರದ ಬಲದೇವರಸ, ಸಿದ್ಧರಸ ಸಹೋದರರು ಮಂಗಳವಾಡಿಯ ಸಾಮಂತ ರಾಜ ಪೆರ್ಮಾಡಿ ಆಸ್ಥಾನದಲ್ಲಿ ಮಂತ್ರಿಗಳಾಗಿದ್ದರು. ಇವರ ಸಹೋದರಿ ಮಾದಲಾಂಬಿಕೆ (ಮಾದಾಂಬೆ)ಯನ್ನು ಇಂಗಳೇಶ್ವರ ಹತ್ತಿರದ ಬಾಗೇವಾಡಿ ಅಗ್ರಹಾರದ ಅಧಿಪತಿ ಮಂಡಿಗೆಯ ಮಾದರಸ (ಮಾದಿರಾಜ)ರೊಂದಿಗೆ ಮದುವೆ ಮಾಡಿಕೊಡಲಾಗಿತ್ತು. ಸ್ವತಃ ಮಾದರಸರು ಶೈವಾಗಮಾಚಾರ್ಯ ಎಂಬ ಬಿರುದಾಂಕಿತ ವಿಪ್ರೋತ್ತಮ ವಿದ್ವಾಂಸರೂ ಆಗಿದ್ದರು. ಈ ಮಾದರಸ–ಮಾದಲಾಂಬಿಕೆಯರಿಗೆ 'ನಾಗಲಾಂಬಿಕೆ' (ಅಕ್ಕ ನಾಗಮ್ಮ) ಎಂಬ ಮಗಳು ಜನಿಸಿದ್ದಳು. ಅನಂತರ ಹನ್ನೊಂದು ವರುಷಗಳಾದರೂ ಮಕ್ಕಳೇ ಜನಿಸಲಿಲ್ಲ. ವಂಶೋದ್ಧಾರಕ್ಕೆ ಪುತ್ರ ಸಂತಾನದ ಅಪೇಕ್ಷೆ (ಅಪುತ್ರಸ್ಯಗತಿರ್ನಾಸ್ತಿ ಎಂಬ ವೈದಿಕ ಸಿದ್ಧಾಂತದಂತೆ) ಯಿಂದಾಗಿ, ಕುಲಗುರುಗಳಾಗಿದ್ದ ಕಪ್ಪಡಿ ಸಂಗಮದ ಸ್ಥಾನಾಧಿಪತಿ ಶ್ರೀ ಈಶಾನ್ಯ ಗುರುಗಳು (ಇವರನ್ನೇ ಸಂಗಮೇಶ್ವರದ ಗುರುಗಳು ಎಂದೂ ಕರೆಯಲಾಗುತ್ತಿದೆ). ತಿಳಿಸಿದ ಪ್ರಕಾರ, ಬಾಗೇವಾಡಿ ಅಗ್ರಹಾರದಲ್ಲಿರುವ ಸಂಗಮೇಶ್ವರ ದೇವಾಲಯದಲ್ಲಿ 'ವೃಷಭನೋಂಪಿ' ಅಂದರೆ ನಂದಿವ್ರತ ಆಚರಣೆ ಮಾಡಿದರು. ಈ ವ್ರತದ ಫಲ ಸ್ವರೂಪವೆಂಬಂತೆ ಜನಿಸಿದ ಪುತ್ರರತ್ನಕ್ಕೆ ವೃಷಭ ತದ್ಭವ **'ಬಸವ'** ಎಂಬ ನಾಮಕರಣವನ್ನು (ಕಪ್ಪಡಿ ಸಂಗಮದ ಗುರುಗಳು ಆಗಮಿಸಿ)ಮಾಡಿದರು. ತಂದೆ–ತಾಯಿಯರ ಪ್ರೀತಿ–ವಾತ್ಸಲ್ಯ, ಅಕ್ಕ ನಾಗಲಾಂಬಿಕೆಯ ಮಮತೆಯಲ್ಲಿ, ಬಾಗೇವಾಡಿ ಅಗ್ರಹಾರದ ಕಣ್ಮಣಿಯಾಗಿ 'ಬಾಲ ಬಸವರಸನು' ಬೆಳೆಯತೊಡಗಿದ. ಎಂಟು ವರುಷದ ಬಾಲಕ ತುಂಬಾ ಜಾಣನಾಗಿದ್ದ, ಚುರುಕು ಬುದ್ಧಿ, ಸೂಕ್ಷ್ಮ ದೃಷ್ಟಿ ಹೊಂದಿದ್ದ, ತನ್ನ ಪರಿಸರದ, ಸಮಾಜದ ವ್ಯತ್ಯಾಸ, ಭೇದ–ಭಾವ, ಮೇಲು–ಕೀಳು, ಸ್ಪೃಶ್ಯ– ಅಸ್ಪೃಶ್ಯತೆಗಳನ್ನು ಗಮನಿಸುತ್ತಾ, ಪ್ರಶ್ನೆ ಕೇಳುತ್ತಾ ವಿಚಾರವಾದಿಯಾಗಿ ಬೆಳೆಯುತ್ತಿದ್ದ. ಬ್ರಾಹ್ಮಣ ಧರ್ಮದ ಧಾರ್ಮಿಕ ಸಂಸ್ಕಾರ ಪದ್ಧತಿಯಂತೆ ಎಂಟು

ವರುಷಕ್ಕೆ 'ಉಪನಯನ' ಅಂದರೆ ಮುಂಜಿವೆ ಸಂಸ್ಕಾರದ ಏರ್ಪಾಟನ್ನು ಮಾದರಸರು ಅಗ್ರಹಾರದಲ್ಲಿ ಮಾಡಿದರು. ಮನೆತನದ ಕುಲಗುರುಗಳು, ಪುರೋಹಿತರು, ವೇದಾಗಮ ಪಂಡಿತರು ಆಗಮಿಸಿದರು. ತನ್ನೊಂದಿಗೆ ತನಗಿಂತ ಹಿರಿಯಳಾದ ಅಕ್ಕ ನಾಗಲಾಂಬಿಕೆಗೆ ಉಪನಯನ ಸಂಸ್ಕಾರ ಮಾಡಿ, ಗಾಯತ್ರಿ ಮಂತ್ರೋಪದೇಶ ಮೂಲಕ 'ಜನಿವಾರ' ಹಾಕಲು ಹೇಳಿದರು. ಪುರೋಹಿತರು ಒಪ್ಪಲಿಲ್ಲ. ಸ್ತ್ರೀ ಶೂದ್ರಳು, ರಜಸ್ವಲೆಯಾಗುವುದರಿಂದ ಅವಳು ಧಾರ್ಮಿಕ ಸಂಸ್ಕಾರಕ್ಕೆ ಅರ್ಹಳಲ್ಲ ಎಂದರು. ವಾದ-ವಿವಾದ ನಡೆಯಿತು, ಅಕ್ಕನಿಗಿಲ್ಲದ ಜನಿವಾರ ತನಗೂ ಬೇಡವೆಂದು ಹಟ ಮಾಡಿದ. ಇದು ಪಂಡಿತ-ಪುರೋಹಿತರಿಗೆ ಸಹನೆಯಾಗಲಿಲ್ಲ. ತಮ್ಮ ವರ್ಣಾಶ್ರಮ ಧರ್ಮ- ಸಮಾಜದಿಂದ ಬಹಿಷ್ಕಾರ ಹಾಕುವದಾಗಿ ಹೇಳಿದಾಗ, ಸ್ವತಃ ೮ ವರ್ಷದ ಬಾಲಕ ಬಸವಣ್ಣನವರು ' ಕರ್ಮಲತೆಯಂತಿರ್ದ ಜನ್ನಿವಾರಮಂ ಬಿಸುಟು' ಬಾಗೇವಾಡಿ ಅಗ್ರಹಾರ ತೊರೆದು ಕಪ್ಪಡಿ ಸಂಗಮಕ್ಕೆ ಹೊರಟರು. ಆಗ ಅಕ್ಕನಾಗಮ್ಮ ಹಾಗೂ ಅವಳ ಪತಿ ಶಿವದೇವರು ಈ 'ಮುಂಜವಿ' ಕಾರ್ಯಕ್ಕೆ ಸಂಗಮದಿಂದ ಬಂದಿದ್ದವರು ಬಸವಣ್ಣನ ಬೆನ್ನುಹತ್ತಿ ಸಂಗಮಕ್ಕೆ ಬಂದರು. ಅಕ್ಕನಾಗಮ್ಮ- ಶಿವದೇವ ದಂಪತಿಗಳು ಸಂಗಮದಲ್ಲಿ ಬಸವಣ್ಣನಿಗೆ ಆಶ್ರಯ- ನೆರಳಾಗಿ ನಿಂತರು. ಬಸವಣ್ಣ ಸಂಗಮದ ಗುರುಕುಲದಲ್ಲಿ ಸಂಗಮೇಶ್ವರ (ಈಶಾನ್ಯ) ಗುರುಗಳ ಸಾನಿಧ್ಯದಲ್ಲಿ ಅಧ್ಯಯನಕ್ಕೆ ತೊಡಗಿದರು.

೩. ಮಂಗಳವಾಡಿಯಲ್ಲಿ ಗಂಗಾಂಬಿಕೆ-ನೀಲಾಂಬಿಕೆಯರ ಜನನ :

ಕಲ್ಯಾಣ ಚಾಲುಕ್ಯರ ಮಾಂಡಲಿಕ ರಾಜನಾಗಿದ್ದ ಪೆರ್ಮಾಡಿಯ ಆಸ್ಥಾನದಲ್ಲಿ ಬಲದೇವರಸ ಮತ್ತು ಸಿದ್ಧರಸರು ಮಂತ್ರಿಗಳಾಗಿದ್ದರು. ರಾಜ ಪೆರ್ಮಾಡಿಯ-ಪತ್ನಿಗೆ ಬಿಜ್ಜಳ ಎಂಬ ಪುತ್ರರತ್ನ ಜನಿಸಿದ್ದ. ಮುಂದೆ ಮೂರು ವರುಷಗಳಲ್ಲಿ ಬಲದೇವ ಮಂತ್ರಿಗೆ ಗಂಗಾಂಬಿಕೆ ಎಂಬ ಮಗಳು ಜನಿಸಿದ್ದಳು. ಸಿದ್ಧರಸ ದಂಡನಾಯಕರಿಗೆ ನೀಲಾಂಬಿಕೆ ಎಂಬ ಮಗಳು ಜನಿಸಿದ್ದಳು. ಇದೇ ಕಾಲಕ್ಕೆ ಪೆರ್ಮಾಡಿ ರಾಜನಿಗೆ ಕರ್ಣದೇವ ಎಂಬ ಇನ್ನೊಬ್ಬ ಪುತ್ರ ಜನಿಸಿದಾಗ, ಹೆರಿಗೆಯ ನಂತರ ಪೆರ್ಮಾಡಿ ರಾಜನ ಪತ್ನಿಯು ನಿಧನಳಾಗಲು ಮಗು ಕರ್ಣದೇವ ಸಿದ್ಧರಸಮಂತ್ರಿಯ ಪತ್ನಿ ಪದ್ಮಗಂಧಿಯು ತನ್ನ ಮಗಳು ನೀಲಲೋಚನೆಯೊಂದಿಗೆ ಕರ್ಣದೇವನಿಗೂ ಎದೆಹಾಲು ಕುಡಿಸುತ್ತಾ ಜೋಪಾನಮಾಡಿ ಬೆಳೆಸಿದಳು. ಹೀಗಾಗಿ ಬಿಜ್ಜಳನಿಗೆ ಕರ್ಣದೇವ ತಮ್ಮನಾದರೆ, ನೀಲಾಂಬಿಕೆ ಆತನ ತಂಗಿಯಂತೆ ಬೆಳೆದಳು.

ಬಿಜ್ಜಳನು ಪೆರ್ಮಾಡಿಯ ನಂತರ ಮಂಗಳವಾಡಿಯ ರಾಜನಾದನು. ನೀಲಾಂಬಿಕೆಯು ಅರಮನೆಯಲ್ಲಿ ಅಣ್ಣ ಬಿಜ್ಜಳನ ಪ್ರೀತಿಯ ತಂಗಿಯಾಗಿ ಬೆಳೆದಳು.

ಬಲದೇವರಸ ಮಂತ್ರಿಯ ಮನೆಯಲ್ಲಿ ಗಂಗಾಂಬಿಕೆಯು ಶಸ್ತ್ರವಿದ್ಯೆ ಕಲಿಯುತ್ತಾ ವೀರ ಕುವರಿಯಾಗಿ ಬೆಳೆದರೆ, ಬಿಜ್ಜಳನ ಅರಮನೆಯಲ್ಲಿ ನೀಲಾಂಬಿಕೆಯು ಸಂಗೀತ ಶಾಸ್ತ್ರ, ಚಿತ್ರಕಲೆ ಕಲಿಯುತ್ತ ಕಲಾ ನಿಪುಣೆಯಾಗಿ ಬೆಳೆದಳು.

೪. ಕಪ್ಪಡಿ ಸಂಗಮದಿಂದ–ಮಂಗಳವಾಡಿಗೆ ಬಸವಣ್ಣನವರ ಆಗಮನ :

ಎಂಟು ವರುಷದ ಬಾಲಕ ಬಸವಣ್ಣ ಕಪ್ಪಡಿ ಸಂಗಮದ ಗುರುಕುಲದಲ್ಲಿ ಹನ್ನೆರಡು ವರುಷಗಳ ಕಾಲ ವೇದ, ಶಾಸ್ತ್ರ, ಆಗಮ, ಪುರಾಣ, ರಾಮಾಯಣ. ಮಹಾಭಾರತ, ಜೈನ, ಬೌದ್ಧ, ಧರ್ಮಗ್ರಂಥಗಳು, ಶೈವ–ಶಾಕ್ತ–ವೈದಿಕ ಮತ ಗ್ರಂಥಗಳು, ಷಡ್‌ದರ್ಶನ ಶಾಸ್ತ್ರಗಳ ಅಧ್ಯಯನ ಗೈದು, ಮಹಾ ಮೇಧಾವಿಯಾಗಿ ಬೆಳೆದರು.

ವಿದ್ಯಾರ್ಜನೆ ಪೂರ್ಣಗೊಂಡ ನಂತರ, ಗುರುಕುಲದ ನಿಯಮದಂತೆ ದೇಶ ಸಂಚಾರ ಗೈದು ಲೋಕಾನುಭವಿಯಾದರು. ಅಂದಿನ ಕಾಲದ ವರ್ಣಬೇಧ, ಆಶ್ರಮ ಬೇಧ, ವರ್ಗಭೇಧ, ಸ್ತ್ರೀ–ಪುರುಷರೆಂಬ ಲಿಂಗಭೇದ, ಜಾತಿಭೇದಗಳ ನಿವಾರಣೆಗಾಗಿ, ದೇವರು–ಧರ್ಮಗಳ ಹೆಸರಿನಲ್ಲಿ ನಡೆಯುತ್ತಿದ್ದ ಶೋಷಣೆ ತಪ್ಪಿಸಲೋಸುಗ ಹನ್ನೆರಡು ವರುಷ ಚಿಂತನ ಮಾಡುತ್ತಾ. ಕೊನೆಗೆ ಒಂದು ದಿನ ಕಪ್ಪಡಿ ಸಂಗಮದ ಕೃಷ್ಣಾ ಮಲಪಹಾರಿ ನದಿಗಳ ಸಂಗಮಸ್ಥಾನದ ಹೆಬ್ಬಂಡೆಯ ಮೇಲೆ ಧ್ಯಾನಮಗ್ನವಾಗಿ ಅಂತರಂಗದಲ್ಲಿ ಚಿಂತನೆಯಲ್ಲಿ ತನ್ಮಯರಾಗಿದ್ದಾಗ, ಅದ್ಭುತವಾದ ಚಿದ್ಬೆಳಕು ಅಂತರಂಗದ ಚಿದಾಕಾಶದಲ್ಲಿ ಪ್ರಕಾಶಮಾನವಾಗಿ ಗೋಚರಿಸಿತು. ಅದು ಅಂತರಂಗದ ಕರಣಂಗಳ ಮೂಲಕ ಕಿರಣಂಗಳಾಗಿ ಹೊರಹೊಮ್ಮಿ ಇಡೀ ವಿಶ್ವವನ್ನೇ ಬೆಳಗಿತು. ಅನಂತರ ಆ ಮಹಾ ದಿವ್ಯ ಬೆಳಗು–

ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ
ಪಾತಾಳದಿಂದತ್ತತ್ತ ನಿಮ್ಮ ಶ್ರೀಚರಣ
ಬ್ರಹ್ಮಾಂಡದಿಂದತ್ತತ್ತ ನಿಮ್ಮ ಶ್ರೀಮಕುಟ
ಅಗಮ್ಯ ಅಗೋಚರ ಅಪ್ರತಿಮ ಲಿಂಗವೆ
ಕೂಡಲಸಂಗಮದೇವಯ್ಯ
ಎನ್ನ ಕರಸ್ಥಲಕೆ ಬಂದು ಚುಳುಕಾದಿರಯ್ಯಾ

ಎಂದು ವಿಶ್ವಚೈತನ್ಯ ವಿಶ್ವದಾರಕಾರದಲ್ಲಿ ಚುಳುಕಾಗಿ (ಚಿಕ್ಕ ರೂಪದಲ್ಲಿ) ಇಷ್ಟಲಿಂಗ ಆಕಾರವಾಗಿ ಅರಿವಿನ ಕುರುಹಾಗಿ ಕಂಗೊಳಿಸಿತು. ಈ ಇಷ್ಟಲಿಂಗ

ತತ್ವವಸ್ತು ಸಾಕಾರಗೊಳಿಸಿ ಕಂಥೆ ಕೊಡಿಸಿ, ಕರಸ್ಥಲಕೆ ತಂದುಕೊಂಡು, ಅನಿಮಿಷದೃಷ್ಟಿಯಿಂದ ಲಿಂಗ ನಿರೀಕ್ಷಣೆ, ಲಿಂಗಧ್ಯಾನ, ಲಿಂಗಪೂಜೆ ಮಾಡಿಕೊಂಡು, ಇಷ್ಟ ಲಿಂಗದ ಜನಕರಾದರು. ಇಷ್ಟಲಿಂಗಕ್ಕೆ ಗುರುವಾಗಿ, ಬಸವಲಿಂಗವಾದರು, ಬಸವಯೋಗಿಯಾದರು. ತಾವೇ ಶರಣಸತಿಯಾಗಿ-ಲಿಂಗಪತಿಯ ಸಾಮರಸ್ಯ ಹೊಂದಿ ಪರಮಾನಂದದಲ್ಲಿ ನಿಬ್ಬೆರಗಾಗಿ ತನ್ಮಯರಾದರು.

'ಸಾಕಾ-ನಿರಾಕಾರ ಏಕೋದೇವ ಕೂಡಲಸಂಗಮದೇವ' ಎಂದು ಅರಿತು, ಸಿದ್ಧಾಂತಗೊಳಿಸಿದರು. "ತಾನೆ ಬಂದು ಎನ್ನ ಹೃದಯ ಸಿಂಹಾಸನದ ಮೇಲೆ ಮೂರ್ತಗೊಂಡಡೆ ಎನ್ನ ಬಯಕೆ ಸಯವಾಯಿತ್ತು. ಹಿಂದೆ ಹನ್ನೆರಡು ವರುಷದಲ್ಲಿದ್ದ ಚಿಂತೆ ಇಂದು ನಿಶ್ಚಿಂತವಾಯಿತ್ತು. ಕೂಡಲಸಂಗಮದೇವರು ಕೃಪಾಮೂರ್ತಿಯಾದ ಕಾರಣ ನಾನು ಬದುಕಿದೆನು" ಎಂದು ಧನ್ಯತೆಯನ್ನು ಅನುಭವಿಸಿದರು.

ಬಸವಣ್ಣನವರು ತಾವು ಅಧ್ಯಾತ್ಮ ವಿಜ್ಞಾನಿಯಾಗಿ ಅವಿಷ್ಕಾರಗೊಳಿಸಿದ ಇಷ್ಟಲಿಂಗವನ್ನು ಅಕ್ಕ ನಾಗಲಾಂಬಿಕೆಯೊಂದಿಗೆ, ಅಳಿಯ ಚೆನ್ನಬಸವಣ್ಣ, ಭಾವ ಶಿವದೇವರೊಂದಿಗೆ ಚಿಂತನಗೈದು, ಅವರಿಗೂ ಇಷ್ಟಲಿಂಗದೀಕ್ಷೆಯನ್ನಿತ್ತರು. ಅಕ್ಕ ನಾಗಮ್ಮನವರಂತೂ ಈ ಸಮಾನತೆಯ ಧರ್ಮ ಸಂಸ್ಕಾರ ಹೊಂದಿದ **ಲಿಂಗಾಯತ ಧರ್ಮದ ಪ್ರಪ್ರಥಮ ಶರಣೆಯಾದಳು**. ಬಸವಣ್ಣನವರು ಕೇವಲ ತನಗೆ ಮಾತ್ರವಲ್ಲ, ತನ್ನಂತಹ ಇಡೀ ಸ್ತ್ರೀಕುಲ ಉದ್ಧಾರಗೈಯುವ ಗುರುವಾದನೆಂದು ಆನಂದಭರಿತಳಾಗಿ ವಚನ ರಚನೆ ಮಾಡಿದಳು.

ಎನ್ನ ಕುಲ ಸೂತಕವ ಕಳೆದಾತ ಬಸವಣ್ಣ
ಎನ್ನ ಛಲ ಸೂತಕವ ಕಳೆದಾತ ಬಸವಣ್ಣ
ಎನ್ನ ತನು ಸೂತಕವ ಕಳೆದಾತ ಬಸವಣ್ಣ
ಎನ್ನ ಮನ ಸೂತಕವ ಕಳೆದಾತ ಬಸವಣ್ಣ
ಎನ್ನ ಭಾವ ಸೂತಕವ ಕಳೆದಾತ ಬಸವಣ್ಣ
ಎನ್ನ ನೆನಹು ಸೂತಕವ ಕಳೆದಾತ ಬಸವಣ್ಣ
ಎನ್ನ ಅರುಹು-ಮರಹಿನ ಸಂದು ಸಂಶಯವ
ಬಿಡಿಸಿದಾತ ಬಸವಣ್ಣ
ಎನ್ನ ತನ್ನೊಳಗೆ ಇಂಬಿಟ್ಟುಕೊಂಡಾತ ಬಸವಣ್ಣ
ತನ್ನ ಎನ್ನೊಳಗೆ ಇಂಬಿಟ್ಟುಕೊಂಡಾತ ಬಸವಣ್ಣ
ನಿಜದ ನಿರ್ಬಯಲ ಬಾಗಿಲವ ತೋರಿದಾತ ಬಸವಣ್ಣ

ಬಸವಣ್ಣ ಪ್ರಿಯ ಚೆನ್ನಸಂಗಯ್ಯನ
ಹೃದಯ ಕಮಲದಲ್ಲಿ ನಿಜನಿವಾಸಿಯಾಗಿರಿಸಿದ
ಎನ್ನ ತಂದೆ ಸಂಗನಬಸವಣ್ಣನು.

ಲೌಕಿಕದಲ್ಲಿ ಮಾದರಸ-ಮಾದಲಾಂಬಿಕೆಯರು ನಾಗಲಾಂಬಿಕೆಗೆ ಜನ್ಮಕೊಟ್ಟಿದ್ದರೆ, ಧಾರ್ಮಿಕ ಸಂಸ್ಕಾರವಿತ್ತು ಮೌಂಸಪಿಂಡದ ತನು-ಮನ-ಭಾವ-ಕುಲ-ಛಲ ಸೂತಕ (ದೋಷ) ಕಳೆದು ಮಂತ್ರ ಪಿಂಡವಾಗಿಸಿದ ಗುರುವಾಗಿ ಬಸವಣ್ಣ, ಈಗ ಮರು ಜನ್ಮ (spiritual birth) ನೀಡಿದ ಕಾರಣ 'ತಂದೆ' ಅಂದರೆ 'ಗುರು ತಂದೆ'ಯಾಗಿದ್ದಾನೆಂದು ಅಕ್ಕನಾಗಮ್ಮನವರು ಹೇಳುವಲ್ಲಿ-ಬಸವಣ್ಣನವರು ಇಡೀ ಮಹಿಳಾಕುಲಕ್ಕೆ ಹೊಸಜನ್ಮ ನೀಡಿದ ಗುರು ತಂದೆಯಾಗಿದ್ದಾರೆಂದು ಹೇಳಬಹುದು.

ಬಸವಗುರುವಿನಿಂದ ಇಷ್ಟಲಿಂಗ ದೀಕ್ಷೆ ಪಡೆದ ೧೨ ವರ್ಷದ ಬಾಲಕ ಮಹಾಜ್ಞಾನಿ ಚೆನ್ನಬಸವಣ್ಣನಂತೂ ಭಕ್ತಿ ಗೌರವದಿಂದ ಹೇಳುತ್ತಾರೆ.

ನಮಃಶಿವಾಯ ಲಿಂಗವು
ಓಂನಮಃ ಶಿವಾಯ ಬಸವಣ್ಣನು
ಎನ್ನ ಮನಃಸ್ಥಲದಲ್ಲಿ ಬೆಳಗಿ ತೋರಿದೆಯಾಗಿ
ಇದು ಕಾರಣ ಕೂಡಲ ಚೆನ್ನಸಂಗಯ್ಯ
ಓಂನಮಃ ಶಿವಾಯ ಬಸವ ಗುರುವೆ
ಶರಣು ಶರಣೆನುತಿರ್ದೆನು

ಬಸವಣ್ಣನವರು ಅವಿಷ್ಕರಿಸಿದ 'ಇಷ್ಟಲಿಂಗ'ದ ವಿವರವನ್ನು ಕೇಳಿ ತಿಳಿದ ಕಪ್ಪಡಿ ಸಂಗಮದ ಸ್ಥಾನಪತಿ ಈಶಾನ್ಯ ಗುರುಗಳು, ಬಸವಣ್ಣನವರ ಅದ್ವಿತೀಯ, ಅಪ್ರತಿಮ ಸಾಧನೆ ಕಂಡು ಆಶ್ಚರ್ಯಚಕಿತರಾಗಿ-ಬಸವಣ್ಣ, ನೀನು ಜ್ಯೋತಿಯಾಗಿ, ಜಗಜ್ಯೋತಿಯಾಗಿ. ಮಾನವ ಕುಲದ ಗುರುವಾಗಿ ವಿಶ್ವಗುರುವಾಗಿ ಬೆಳಗುವೆ ಎಂದು ಹೃದಯಾರೆ ಶುಭ ಹಾರೈಸಿದರು.

ಅದೇ ವರ್ಷ ಸಂಗಮದಲ್ಲಿ ಜರುಗಿದ 'ಕಪಿಲಷಷ್ಠಿ' ಉತ್ಸವದಲ್ಲಿ ದೇಶಾದ್ಯಂತದಿಂದ ಆಗಮಿಸಿದ್ದ ವೇದಾಗಮ ಶಾಸ್ತ್ರ ಪಂಡಿತರ ಸಭೆಯಲ್ಲಿ ತನ್ನ ವಿನೂತನ ಯೋಜನೆಗಳನ್ನು, ವಿಚಾರಗಳನ್ನು ಮಂಡಿಸಿ ಎಲ್ಲರ ಮೆಚ್ಚುಗೆಗೆ ಬಸವಣ್ಣನವರು ಪಾತ್ರರಾದರು.

ಈ ಘಟಕೋತ್ಸವಕ್ಕೆ ಆಗಮಿಸಿದ್ದ ಮಂಗಳವಾಡಿಯ ಮಹಾಮಂತ್ರಿ

ಬಲದೇವರಸರು ಹಾಗೂ ಗಂಗಾಂಬಿಕೆ, ನೀಲಾಂಬಿಕೆಯರು ಬಸವಣ್ಣನವರ ಪಾಂಡಿತ್ಯ, ಪ್ರತಿಭೆ, ವಿದ್ವತ್ತಿಗೆ ಮಾರುಹೋದರು. ಬಲದೇವರಸರು ಬಸವಣ್ಣ ತಮ್ಮ ಸೋದರಳಿಯ ಎಂಬುದನ್ನು ಅರಿತು, ಈಶಾನ್ಯ ಗುರುಗಳೊಂದಿಗೆ ತಮ್ಮ ಮಗಳು ಗಂಗಾಂಬಿಕೆಯ ವಿವಾಹ ಪ್ರಸ್ತಾಪ ಮಾಡಿ, ಬಸವಣ್ಣನವರನ್ನು ಹಾಗೂ ಶಿವದೇವ-ನಾಗಮ್ಮ-ಚೆನ್ನಬಸವರೊಂದಿಗೆ ಮಂಗಳವೇಡೆಗೆ ಆಮಂತ್ರಣವಿತ್ತು ತೆರಳಿದರು.

ವಿದ್ಯಾರ್ಜನೆ ಪೂರೈಸಿದ್ಧ ಯುವಕ ಬಸವಣ್ಣನವರು ಗುರುಗಳು ಅಪ್ಪಣೆ ಪಡೆದು, ತನ್ನ ಯೋಜನೆಗಳನ್ನು ಕಾರ್ಯಗತಗೊಳಿಸಲೋಸುಗ ಕಾಯಕ ಜೀವನ ಕೈಕೊಳ್ಳಲು ನಿರ್ಧರಿಸಿ, ಅಕ್ಕನಾಗಮ್ಮ-ಶಿವದೇವರೊಂದಿಗೆ ಸಂಗಮದಿಂದ ಮಂಗಳವೇಡೆಯ ಪಯಣಬೆಳೆಸಿದರು.

೫. ಮಂಗಳವಾಡದಲ್ಲಿ ಕಾಯಕ-ಗಂಗಾಂಬಿಕೆಯೊಂದಿಗೆ ವಿವಾಹ :

ಅಕ್ಕನಾಗಮ್ಮ-ಶಿವದೇವರು ಬಸವಣ್ಣ ಹಾಗೂ ಚೆನ್ನಬಸವಣ್ಣನವರನ್ನು ಕರೆದುಕೊಂಡು ಬಲದೇವರಸರು ಇರುವ ರಾಜ ಬಿಜ್ಜಳನ ರಾಜಧಾನಿ ಮಂಗಳವಾಡಿಗೆ ಬಂದರು. ಕಲಚೂರಿ ಬಿಜ್ಜಳನು ಬಸವಣ್ಣನವರ ಸಮ ವಯಸ್ಕ ತರುಣನಾಗಿದ್ದು ರಾಜಕೀಯವಾಗಿ ಚಾಲುಕ್ಯ ಸಾಮ್ರಾಜ್ಯದ ಮಾಂಡಲಿಕ ಅರಸರಲ್ಲಿಯೇ ಹೆಸರು ಗಳಿಸಿದ್ದನು. ಚಾಲುಕ್ಯ ಸಾಮ್ರಾಟರ ಬಂಧುಗಳೂ ಆಗಿದ್ದರಿಂದ ವಿಶೇಷ ಮಾನ ಮರ್ಯಾದೆ ಹೊಂದಿದ್ದನು. ಬಿಜ್ಜಳನು ತರ್ದವಾಡಿ ೧೦೦೦ ಪ್ರಾಂತ ಮೊದಲ್ಗೊಂಡು ಕರಹಾಡ ೪೦೦೦ ಪ್ರದೇಶವೂ ಇವನ ಆಡಳಿತಕ್ಕೊಳಪಟ್ಟಿತ್ತು. 'ಸುವರ್ಣ ವೃಷಭಧ್ವಜಂ ಪರಮ ಮಾಹೇಶ್ವರಂ' ಎಂದು ಶಾಸನಗಳಲ್ಲಿ ಸ್ತುತಿಸಲ್ಪಟ್ಟಿದ್ದಾನೆ. ಇವನು ಶೈವದ-ಪಾಶುಪತ ಪಂಥದ ಭಕ್ತನಾಗಿದ್ದನೆಂದು ತಿಳಿದು ಬರುತ್ತದೆ.

ಬಲದೇವರಸ ಮಂತ್ರಿಗಳು ತಮ್ಮ ನಿವಾಸದಲ್ಲಿ ಅಕ್ಕನಾಗಮ್ಮ, ಶಿವದೇವ, ಬಸವಣ್ಣ, ಚೆನ್ನಬಸವಣ್ಣನವರಿಗೆ ಪ್ರೀತಿಯಿಂದ ಆದರೋಪಚಾರ, ವ್ಯವಸ್ಥೆ ಮಾಡಿದರು. ಯುವತಿ ಗಂಗಾಂಬಿಕೆಯಂತೂ ಅಕ್ಕನಾಗಮ್ಮ, ಬಸವಣ್ಣ, ಬಾಲಕ ಚೆನ್ನಬಸವಣ್ಣ, ಶಿವದೇವರ ಬೇಕು-ಬೇಡಿಕೆಗಳನ್ನೆಲ್ಲಾ ತಾನೇ ಮುಂದೆ ನಿಂತು, ಉತ್ಸಾಹದಿಂದ ಪೂರೈಸುತ್ತಿದ್ದಳು. ಯುವಕ ಬಸವಣ್ಣನವರನ್ನು ಲಜ್ಜೆ-ಪ್ರೇಮದಿಂದ ಹೃದಯದಲ್ಲಿ ಆರಾಧಿಸುತ್ತಿದ್ದಳು.

ಬಲದೇವ ಮಂತ್ರಿಗಳು ತಮ್ಮ ಸೋದರಳಿಯ ಬಸವರಸನನ್ನು ಕರೆದುಕೊಂಡು ಒಂದು ದಿನ ಬಿಜ್ಜಳನ ಅರಮನೆಗೆ ಬಂದರು. ಆ ಸಮಯದಲ್ಲಿ

ಬಿಜ್ಜಳನು ತನ್ನ ರಾಜ್ಯ ಭಂಡಾರದ ಲೆಕ್ಕ-ಪತ್ರ ಪರಿಶೀಲನೆಗೆ ತೊಡಗಿದ್ದನು. ಗಣಕರು ಸೊಡ್ಡಳ ಬಾಚರಸರ ಮಾರ್ಗದರ್ಶನದಲ್ಲಿ ಖಾತೆ-ಕೀರ್ದಿ ಪ್ರಯತ್ನಪಟ್ಟು ಹೊಂದಿಸಲು ಯತ್ನಿಸುತ್ತಿದ್ದರೂ ಒಂದು ಲಕ್ಷ ಹೊನ್ನು ಲೆಕ್ಕಕ್ಕೆ ಸಿಗುತ್ತಿರಲಿಲ್ಲ. ರಾಜ ಬಿಜ್ಜಳನ ಮುಂದೆ ಹೆದರಿಕೆಯಿಂದ ತಡಬಡಾಯಿಸುತ್ತಿದ್ದರು. ಇವರ ಈ ಗಾಬರಿಯನ್ನು ಕಂಡು ಗಣಿತಶಾಸ್ತ್ರದಲ್ಲಿ ವಿದ್ಯಾ ಪಾರಂಗತರಾಗಿದ್ದ ಬಸವಣ್ಣನವರು ತಾವು ಒಂದು ಸಲ ಭಂಡಾರದ ಲೆಕ್ಕ ಪತ್ರ ಪರಿಶೀಲಿಸುವುದಾಗಿ ವಿನಯದಿಂದ ರಾಜನಲ್ಲಿ, ಮಂತ್ರಿಗಳಲ್ಲಿ, ಭಂಡಾರಿಗಳಲ್ಲಿ ಕೇಳಿಕೊಂಡರು.

ರಾಜನು ಅನುಮತಿಸಿದಾಗ, ಕೂಲಂಕುಶವಾಗಿ ಪರಿಶೀಲಿಸಿ, ಅಂಕಿಗಳನ್ನು ಬರೆಯುವಾಗ ಉಂಟಾಗಿರುವ ಸ್ಥಾನಪಲ್ಲಟದಿಂದಾದ ದೋಷ ಕಂಡುಹಿಡಿದು, ಲೆಕ್ಕ-ಪತ್ರ ಸರಿಪಡಿಸಿ ತೋರಿದರು. ಬಸವಣ್ಣನವರ ಪ್ರತಿಭೆ-ಪಾಂಡಿತ್ಯಕಂಡ ಬಿಜ್ಜಳ ಭೂಪಾಲ ಸಂತೋಷಪಟ್ಟು, ಬಲದೇವರಸರ ಸೋದರಳಿಯನೆಂದು ಅರಿತು, ಅಭಿಮಾನದಿಂದ ತನ್ನ ರಾಜಕೋಶ-ಭಂಡಾರದಲ್ಲಿ "ಕರಣಿಕ' (ಲೆಕ್ಕ-ಪತ್ರ ತಪಾಸಣೆಯ) ಹುದ್ದೆಯನ್ನು ನೀಡಿದನು.

'ಕರಣಿಕ ಕಾಯಕ' ಲಭಿಸಿದ ನಂತರ, ಬಲದೇವ ಮಂತ್ರಿಗಳು ಅಕ್ಕನಾಗಮ್ಮ-ಶಿವದೇವರೊಂದಿಗೆ ತಮ್ಮ ಮಗಳು ಗಂಗಾಂಬಿಕೆಯನ್ನು ಬಸವಣ್ಣನವರಿಗಿತ್ತು ಮದುವೆ ನೆರವೇರಿಸುವ ಕುರಿತು ಚರ್ಚಿಸಿ-ನಿರ್ಧರಿಸಿದರು. ಬಸವಣ್ಣನವರ ಇಚ್ಛೆಯಂತೆ ಗಂಗಾಂಬಿಕೆಯು ಅಕ್ಕನಾಗಮ್ಮನವರಿಂದ ಇಷ್ಟಲಿಂಗ ದೀಕ್ಷೆ ಹೊಂದಿದ ನಂತರ, ಬಸವಣ್ಣ-ಗಂಗಾಂಬಿಕೆಯರ ಕಲ್ಯಾಣ ಮಹೋತ್ಸವವು ಕಪ್ಪಡಿ ಸಂಗಮದ, ಇಂಗಳೇಶ್ವರ-ಬಾಗೇವಾಡಿಯ ಬಂಧು-ಬಾಂಧವರ ಸಮ್ಮುಖದಲ್ಲಿ, ರಾಜ ಬಿಜ್ಜಳ ಹಾಗೂ ಆಸ್ಥಾನದ ಮಂತ್ರಿಗಳ ಸಮ್ಮುಖದಲ್ಲಿ ಜರುಗಿತು.

ಬಲದೇವ ಮಂತ್ರಿಗಳ ಸಹೋದರ ಸಿದ್ಧರಸ ಮಂತ್ರಿಗಳ ಮಗಳು, ಬಿಜ್ಜಳನ ಸಾಕು ತಂಗಿ ನೀಲಾಂಬಿಕೆಯು-ಗಂಗಾಂಬಿಕೆಗೆ ತಂಗಿಯೇ ಆಗಿದ್ದುದರಿಂದ ಈ ಕಲ್ಯಾಣ ಮಹೋತ್ಸವದಲ್ಲಿ ಅವಳೂ ಮನೆಯ ಮಗಳಾಗಿ ಓಡಾಡಿದಳು. ವಿಶೇಷವಾಗಿ ಅಕ್ಕ ನಾಗಮ್ಮತಾಯಿಯ ವಿಶ್ವಾಸ-ಪ್ರೀತಿಗೆ ಪಾತ್ರಳಾದಳು.

ಕಲ್ಯಾಣ ಮಹೋತ್ಸವದ ತರುವಾಯ ಬಸವಣ್ಣನವರು ಮಾವ ಬಲದೇವ ಮಂತ್ರಿಗಳ ಒಪ್ಪಿಗೆ ಪಡೆದು ಸ್ವತಂತ್ರವಾಗಿ ಮನೆ ಮಾಡಿದರು. ತಮ್ಮ ಕಾಯಕವನ್ನು ನಿಷ್ಠೆಯಿಂದ ಮಾಡುತ್ತಾ ರಾಜ ಬಿಜ್ಜಳನ ವಿಶ್ವಾಸಕ್ಕೆ ಪಾತ್ರರಾದರು. ಬಿಜ್ಜಳನೂ

ಸಹ ರಾಜಕಾರ್ಯದಲ್ಲಿ ಸಕಲ ವಿದ್ಯಾಪಾರಂಗತ- ಬಸವಣ್ಣನವರ ಮಾರ್ಗದರ್ಶನ, ಸಲಹೆಗಳನ್ನು ಪಡೆಯುತ್ತಾ ಪ್ರಭಾವಿ ಮಾಂಡಲಿಕನಾಗಿ ಬೆಳೆಯತೊಡಗಿದನು. ಒಂದೆರಡು ವರುಷಗಳಲ್ಲಿ ಬಲದೇವರಸರು, ಸಿದ್ಧರಸ ಮಂತ್ರಿಗಳು ನಿಧನರಾದರು. ಬಲದೇವರಸರ ಆಸ್ತಿ-ಸಂಪತ್ತು ಗಂಗಾಂಬಿಕೆ-ಬಸವಣ್ಣನವರಿಗೆ ಲಭಿಸಿತು. ಬಸವಣ್ಣನವರು ಅದನ್ನು ಪ್ರಜೆಗಳ ಕಲ್ಯಾಣಕ್ಕಾಗಿ ಬಳಕೆ ಮಾಡಿದರು.

೬. ಮಂಗಳವಾಡಿಯಲ್ಲಿ ಶಿವಾನುಭವ ಗೋಷ್ಠಿಗಳಲ್ಲಿ ನೀಲಾಂಬಿಕೆ :

ಬಸವಣ್ಣನವರು ಪ್ರತಿದಿನ ಸುಪ್ರಭಾತ ಸಮಯದಲೆದ್ದು ಇಷ್ಟಲಿಂಗ ಪೂಜೆ ಪೂರೈಸಿಕೊಂಡು, ಪ್ರಸಾದ ಸ್ವೀಕರಿಸಿ ಕಾಯಕಕ್ಕೆ ತೆರಳುತ್ತಿದ್ದರು. ಇತ್ತ ಮನೆಯಲ್ಲಿ ಅಕ್ಕನಾಗಮ್ಮ ಗಂಗಾಂಬಿಕೆಯರು ಮನೆಯ ಗೃಹ ಕಾರ್ಯಗಳನ್ನು ಪೂರೈಸಿ, ಮಧ್ಯಾಹ್ನದ ಪ್ರಸಾದ ಸಿದ್ಧಪಡಿಸುತ್ತಿದ್ದರು. ಬಸವಣ್ಣನವರು ಕಾಯಕದಿಂದ ಮಧ್ಯಾಹ್ನ ಮನೆಗೆ ಬಂದು ಪ್ರಸಾದ ಸ್ವೀಕರಿಸಿ, ಮತ್ತೆ ಕಾಯಕಕ್ಕೆ ಹೋಗಿ, ಸಂಜೆ ಮನೆಗೆ ಮರಳುತ್ತಿದ್ದರು. ಬಸವಣ್ಣನವರ ಮನೆಯ ವಿಶಾಲವಾದ ಪಡಸಾಲೆಯಲ್ಲಿ ಶಿವಾನುಭವ ಗೋಷ್ಠಿ ನಡೆಸುತ್ತಿದ್ದರು. ಚೆನ್ನಬಸವಣ್ಣ ಕಪ್ಪಡಿ-ಸಂಗಮದ ಗುರುಕುಲದಲ್ಲಿ ವಿದ್ಯಾರ್ಜನೆಯಲ್ಲಿದ್ದನು.

ಬಸವಣ್ಣನವರ ಮನೆಯಲ್ಲಿ ಸೊಡ್ಡಳ ಬಾಚರಸರು, ಹಡಪದ ಅಪ್ಪಣ್ಣ-ಲಿಂಗಮ್ಮರು, ಅಕ್ಕನಾಗಮ್ಮ-ಶಿವದೇವರು, ಗಂಗಾಂಬಿಕೆ ಹಾಗೂ ಶಿವಾನುಭವದಲ್ಲಿ ಪಾಲ್ಗೊಳ್ಳಲು ಅಕ್ಕ-ಪಕ್ಕದ ಗ್ರಾಮಗಳ ಅಧ್ಯಾತ್ಮ ಜೀವಿಗಳು ಆಗಮಿಸುತ್ತಿದ್ದರು. ಸಿದ್ಧರಸ-ಪದ್ಮಗಂಧಿಯರ ನಿಧನಾನಂತರ, ನೀಲಾಂಬಿಕೆಯು ತನ್ನ ಹೆಚ್ಚಿನ ಸಮಯವನ್ನು ಅಕ್ಕನಾಗಮ್ಮತಾಯಿ ಹಾಗೂ ಗಂಗಾಂಬಿಕೆ ಅಕ್ಕನ ಸಾನಿಧ್ಯದಲ್ಲಿಯೇ ಕಳೆಯುತ್ತಿದ್ದಳು. ಅನುಭಾವ ಗೋಷ್ಠಿಯಲ್ಲಿ ಅಕ್ಕನಾಗಮ್ಮ, ಬಸವಣ್ಣನವರು ರಚಿಸಿದ ವಚನಗಳನ್ನು ಸುಶ್ರಾವ್ಯವಾಗಿ ನೀಲಾಂಬಿಕೆ ಹಾಡುತ್ತಿದ್ದಳು. ಎಲ್ಲರೂ ಭಕ್ತಿಭಾವ-ಗಂಗೆಯಲ್ಲಿ ಮಿಂದು ತನ್ಮಯರಾಗುತ್ತಿದ್ದರು.

ರಾಜ ಬಿಜ್ಜಳನು ತನ್ನ ತಂಗಿ ನೀಲಾಂಬಿಕೆಯ ಕಂಗಳಲ್ಲಿ ಬಸವಣ್ಣನವರ ಕುರಿತಾದ ಪ್ರೇಮ-ಆರಾಧನಾಭಾವವನ್ನು ಸೂಕ್ಷ್ಮವಾಗಿ ಗುರುತಿಸಿದ್ದನು. ನೀಲಾಂಬಿಕೆಯು ತನ್ನ ಹೃದಯದಲ್ಲಿ ಗೌಪ್ಯವಾಗಿ ಬಸವಣ್ಣನವರನ್ನು ಪ್ರೀತಿಸುತ್ತಿದ್ದ ವಿಚಾರವು ಅಕ್ಕನಾಗಮ್ಮತಾಯಿಯವರ ಗಮನಕ್ಕೂ ಬಂದಿತ್ತು. ಆದರೆ ಬಸವಣ್ಣನವರು ಮಾತ್ರ ನಿರ್ಲಿಪ್ತರಾಗಿ ತಮ್ಮ ಕಾಯಕ, ಪ್ರಜೆಗಳಿಗಾಗಿ ಯೋಜನೆ ರೂಪಿಸುವುದು, ದೀನ-ದಲಿತ-ಬಡವರ ಕಲ್ಯಾಣಕ್ಕಾಗಿ ಚಿಂತನೆ ಮಾಡುತ್ತಾ, ರಾಜನ ಮೂಲಕ ಅಭಿವೃದ್ಧಿ ಕಾರ್ಯಗಳಲ್ಲಿ ನಿರತರಾಗಿದ್ದರು. ರಾತ್ರಿ ಮೊದಲ ಪ್ರಹರ ಅಂದರೆ

ಸಂಜೆ ೬-೦೦ ಗಂಟೆವರೆಗೆ ಅನುಭಾವ ಗೋಷ್ಠಿಯಲ್ಲಿರುತ್ತಿದ್ದರು. ಅನಂತರ ಇಷ್ಟಲಿಂಗ ಪೂಜೆ ಪೂರೈಸಿ, ಆಗಮಿಸಿದ ಅನುಭಾವಿಗಳು, ಶರಣ-ಶರಣೆಯರೊಂದಿಗೆ ಪ್ರಸಾದ ಮಾಡಿ, ಭಾವಲಿಂಗ ಪೂಜೆ (ನಿದ್ರೆ) ಮಾಡುತ್ತಿದ್ದರು.

೭. ಬಸವಣ್ಣ-ನೀಲಾಂಬಿಕೆಯರ ವಿವಾಹ :

ರಾಜಕೀಯ ಮಹಾತ್ವಕಾಂಕ್ಷಿಯೂ, ಚತುರ ರಾಜನೂ ಆಗಿದ್ದ ಬಿಜ್ಜಳನು ಬಸವಣ್ಣನವರನ್ನು ಸಿದ್ಧರಸ ದಂಡನಾಯಕ ಮಂತ್ರಿಗಳ ನಿಧನಾನಂತರ, ಆ ತೆರವಾದ ಹುದ್ದೆಗೆ ಬಸವಣ್ಣನವರನ್ನು ನೇಮಿಸಿದನು. ಬಸವಣ್ಣನವರು ಭಾಂಡಾರದ ದಂಡ ನಾಯಕ-ಮಂತ್ರಿಗಳಾಗಿ ಜವಾಬ್ದಾರಿಯಿಂದ ಕಾರ್ಯನಿರ್ವಹಿಸ ತೊಡಗಿದರು. ಬಸವಣ್ಣನವರೊಂದಿಗೆ ತನ್ನ ರಾಜಕೀಯ ಬಾಂಧವ್ಯ ಇನ್ನಷ್ಟು ಗಟ್ಟಿಗೊಳಿಸಿಕೊಳ್ಳಬೇಕೆಂದು ನಿರ್ಧರಿಸಿದ ಬಿಜ್ಜಳನು, ತನ್ನ ಅರಮನೆಯಲ್ಲಿ ತಂಗಿಯಾಗಿ ಬೆಳೆದಿದ್ದ ನೀಲಾಂಬಿಕೆಯ ಮದುವೆಯ ಪ್ರಸ್ತಾಪವನ್ನು ತಕ್ಕೊಂಡು ಅಕ್ಕನಾಗಮ್ಮ-ಶಿವದೇವರೊಂದಿಗೆ ಚರ್ಚಿಸಿ-ನಿಶ್ಚಯಿಸಲು ಬಸವಣ್ಣನವರ ನಿವಾಸಕ್ಕೆ ರಾಜಪರಿವಾರದೊಂದಿಗೆ ಆಗಮಿಸಿದರು.

ಬಸವಣ್ಣನವರ ಕುಟುಂಬ ಬಳಗಕ್ಕೆ ಆಶ್ಚರ್ಯ, ಆನಂದಗಳು ಏಕಕಾಲಕ್ಕೆ ಉಂಟಾದವು. ಅಕ್ಕನಾಗಮ್ಮ-ಶಿವದೇವರು ಬಸವಣ್ಣನವರನ್ನು ಈ ವಿವಾಹಕ್ಕೆ ಒಪ್ಪಕೊಳ್ಳಲು ಒತ್ತಾಯಿಸಿದರು. ಗಂಗಾಂಬಿಕೆಯು ತನ್ನ ಪತಿ ಬಸವಣ್ಣನವರನ್ನು ಮನೆಯ ಒಳಕೋಣೆಗೆ ಕರೆದುಕೊಂದು ಹೋಗಿ, ತುಂಬಾ ಪ್ರೀತಿಯಿಂದ ಹೇಳಿ ಒಪ್ಪಿಸಿದಳು. "ನೀಲಾಂಬಿಕೆ ಹಾಗೂ ನಾನು (ಗಂಗಾಂಬಿಕೆ) ನಿಮ್ಮ ಧ್ಯೇಯಾ-ದರ್ಶಗಳಿಗೆ ಕ್ರಿಯಾಶಕ್ತಿ ಜ್ಞಾನಶಕ್ತಿಯಾಗಿ ಏಕೋಭಾವದಿಂದ ಸ್ಪಂದಿಸುತ್ತೇವೆ. ನೀಲಾಂಬಿಕೆಯು ಅಂತರಂಗದಲ್ಲಿ ನಿಮ್ಮನ್ನು ಗೌರವಪೂರ್ವಕವಾಗಿ ಆರಾಧಿಸುತ್ತಿದ್ದಾಳೆ. ನಿಮ್ಮ ವಚನಗಳನ್ನು ಹಾಡುವಾಗ ಅವಳು ಇಹಲೋಕವನ್ನೇ ಮರೆತು ತನ್ಮಯಳಾಗಿಬಿಡುತ್ತಾಳೆ. ನಾವಿಬ್ಬರೂ ನಿಮ್ಮ ಧರ್ಮರಥಕ್ಕೆ ಎರಡು ಗಾಲಿಗಳಾಗಿ (ಚಕ್ರಗಳಾಗಿ) ಕಾರ್ಯನಿರ್ವಹಿಸುತ್ತೇವೆ." ಎಂದು ಅನುನಯದಿಂದ ಕೇಳಿಕೊಂಡು ಒಪ್ಪಿಸಿದಳು. ಬಸವಣ್ಣನವರು ಒಂದು ಕ್ಷಣ ಧ್ಯಾನಾಸಕ್ತರಾಗಿ, ಎಲ್ಲವೂ 'ಕೂಡಲಸಂಗಯ್ಯ'ನಿಚ್ಛೆಯಿದ್ದಂತಾಗಲಿ ಎಂದು ನಿರ್ಧಾರಕ್ಕೆ ಬಂದು ರಾಜ ಬಿಜ್ಜಳನು ತಂದ ಪ್ರಸ್ತಾವಕ್ಕೆ ಒಪ್ಪಿಗೆಯನ್ನಿತ್ತರು.

ಬಸವಣ್ಣನವರ ಇಚ್ಛೆ ಹಾಗೂ ನೀಲಾಂಬಿಕೆಯ ಅಪೇಕ್ಷೆಯಂತೆ ಅಕ್ಕನಾಗಮ್ಮತಾಯಿಯವರು ಗುರುವಾಗಿ-ನೀಲಾಂಬಿಕೆಗೆ ಇಷ್ಟಲಿಂಗ ದೀಕ್ಷೆಯನ್ನಿತ್ತರು. ನೀಲಾಂಬಿಕೆ ಈಗ ಇಷ್ಟಲಿಂಗ ಸಂಸ್ಕಾರ ಹೊಂದಿ, ನಿಜ

ಶರಣೆಯಾದಳು. ಈ ದೀಕ್ಷಾ ಸಂಸ್ಕಾರದ ಅನುಭವವನ್ನು ತನ್ನ ವಚನದ ಮೂಲಕ ವ್ಯಕ್ತಪಡಿಸಿದಳು.

ಸರ್ವಾಂಗ ಶುದ್ಧವಾಗಿ ಲಿಂಗದೇಹಿಯಾದೆನು
ಸರ್ವಪ್ರಪಂಚವನಳಿದು
ಸಮಯಾಚಾರಮೂರ್ತಿಯ ಪಡೆದೆನು
ಸರ್ವಾಂಗ ಶುದ್ಧವಾಗಿ ವಿವರವನರಿದೆನಯ್ಯಾ
ಸಂಗಯ್ಯ.

ಇಷ್ಟಲಿಂಗದ ನೆಲೆ-ಕಲೆಗಳನ್ನು, ಲಿಂಗ ಸಕೀಲವನ್ನೂ ಅರಿತು ಲಿಂಗವಂತಾದಳು. ಅನಂತರ ಶರಣರೆಲ್ಲರೂ ಕೂಡಿ ಶರಣ ಸಮ್ಮತ ಸಮಯದಲ್ಲಿ ಬಸವಣ್ಣ-ನೀಲಾಂಬಿಕೆಯರ ಕಲ್ಯಾಣಮಹೋತ್ಸವ ಜರುಗಿಸಿದರು.

೮. ಬಸವ ಮಹಾಮನೆಯಲ್ಲಿ ನೀಲಾ-ಗಂಗೆಯರು :

ಬಸವಣ್ಣನವರ ಮನೆಯು ಈಗ ಮಹಾಮನೆಯಾಗಿ ಮಾರ್ಪಾಟಾಯಿತು. ಅಕ್ಕನಾಗಮ್ಮ ತಾಯಿಯವರ ಎರಡು ಕಣ್ಣುಗಳಂತೆ ಈ ಇಬ್ಬರೂ ಬಸವ ಮಹಾಮನೆಯ ಜ್ಯೋತಿಗಳಾದರು. ಮಂಗಳವಾಡಿಯಲ್ಲಿ ಬಸವಣ್ಣನವರ ಮನೆಯು ಶರಣ-ಶರಣೆಯರ ಅರ್ಚನೆ-ಅರ್ಪಣ-ಅನುಭಾವಕ್ಕೆ ನೆಲೆಯಾಯಿತು. ಪ್ರತಿದಿನ ಶರಣರ ಸಂಖ್ಯೆ ದ್ವಿಗುಣಗೊಳ್ಳುತ್ತ ಸಾಗಿತ್ತು.

ಅಕ್ಕನಾಗಮ್ಮತಾಯಿಯು ಮಹಾಮನೆಯ ಮಹಾತಾಯಿಯಾಗಿ ನೀಲಾಂಬಿಕೆ ಹಾಗೂ ಗಂಗಾಂಬಿಕೆಯರ ಪಡೆದ ತಾಯಿಯಾಗಿ ಮಾತೃವಾತ್ಸಲ್ಯ ನೀಡತೊಡಗಿದರು. ಅವರಿಬ್ಬರೂ ತಮ್ಮ ತಮ್ಮ ಹೆತ್ತ ತಾಯಂದಿರ ಅಗಲಿಕೆಯ ನೋವನ್ನು ಮರೆತರು. ನೀಲಾಂಬಿಕೆಯು ಮಧುರ ಕಂಠದಿಂದ ಭಾವತುಂಬಿ ವಚನಗಳನ್ನು ಹಾಡುತ್ತಿದ್ದರೆ ಶರಣ-ಶರಣೆಯರು ಭಕ್ತಿಸಾಗರದಲ್ಲಿ ಮೈಮರೆಯುತ್ತಿದ್ದರು. ಗಂಗಾಂಬಿಕೆಯು ದಾಸೋಹದ ಪ್ರಸಾದ ವ್ಯವಸ್ಥೆ ನೋಡಿಕೊಳ್ಳುತ್ತಿದ್ದಳು. ಸಾವಿರಾರು ವರುಷಗಳಿಂದ ಧರ್ಮ-ದೇವರು, ಧರ್ಮಸಂಸ್ಕಾರ-ಅಧ್ಯಾತ್ಮ ಸಾಧನೆಯಿಂದ ವಂಚಿತರಾಗಿದ್ದ ಹೆಣ್ಣು ಮಕ್ಕಳಿಗೆ ಭವಬಂಧನದಿಂದ ಬಿಡುಗಡೆಯಾಗಿ ಸ್ವಾತಂತ್ರ್ಯದ ಪರಿಶುದ್ಧ ಶರಣ ವಾತಾವರಣಕ್ಕೆ ಬಂದಂತಾಗಿತ್ತು.

ಅಕ್ಕ ನಾಗಮ್ಮ ತಾಯಿಯ ಮಾತೃವಾತ್ಸಲ್ಯದಲ್ಲಿ ಪರಮ ಸುಖಿಯಾಗಿದ್ದ ನೀಲಲೋಚನೆಯು ಹೃದಯತುಂಬಿ ವಚನವೊಂದರಲ್ಲಿ ಸ್ತುತಿಸಿದುದನ್ನು ಕಾಣುತ್ತೇವೆ.

ಎನಗೆ ಹಾಲೂಟವನಿಕ್ಕುವ ತಾಯೆ
ಎನಗೆ ಪರಿಣಾಮವ ತೋರುವ ತಾಯೆ
ಪರಮ ಸುಖದೊಳಗಿಪ್ಪ ತಾಯೆ
ಪರವಸ್ತುವ ನಂಬಿದ ತಾಯೆ
ಬಸವನ ಗುರುತಾಯೆ
ಸಂಗಯ್ಯನಲ್ಲಿ ಸ್ವಯಲಿಂಗಿಯಾದ
ಅಕ್ಕ ನಾಗಮ್ಮತಾಯೆ !

ನೀಲಾಂಬಿಕೆಯು ಲಿಂಗಾಂಗ ಸಾಮರಸ್ಯದಲ್ಲಿ ನಿರತಳಾಗಿ, ಇಷ್ಟಲಿಂಗ ಸಾಧನೆಯ ಗಿರಿಶಿಖರಕ್ಕೇರಿದಳು. ಗಂಗಾಂಬಿಕೆಯು ಪತಿಯ ಸದಿಚ್ಛೆಯನರಿದು ಶರಣರ ದಾಸೋಹ ಜವಾಬ್ದಾರಿ ನಿಭಾಯಿಸುತ್ತಾ ಪತಿಭಕ್ತಿ ಪರಾಯಣೆಯಾಗಿದ್ದಳು. ಅದನ್ನು ತಮ್ಮದೊಂದು ವಚನದಲ್ಲಿ ವ್ಯಕ್ತಪಡಿಸಿದ ರೀತಿಯು ಮನೋಜ್ಞವಾಗಿದೆ–

ಪತಿಯಾಜ್ಞೆಯಲ್ಲಿ ಚರಿಪ ಸತಿಗ್ಯಾಕೆ ಪ್ರತಿಜ್ಞೆಯು !
ಪ್ರತಿಜ್ಞೆಯ ಪತಿಕರದಲ್ಲಿ ಪೋಪದಿರೆ ಯಾತನೆಯಲ್ಲವೆ ?
ಇವಳ ಲಿಂಗನಿಷ್ಠೆ ಇವಳಿಗೆ,
ನಮ್ಮ ನಿಷ್ಠೆ ಪತಿಯಾಜ್ಞೆಯಲ್ಲಿ ಕಾಣಾ
ಗಂಗಾಪ್ರಿಯ ಕೂಡಲಸಂಗಮದೇವಾ

ಅಕ್ಕನಾಗಮ್ಮ ತಾಯಿಯವರಂತೂ ಬಸವಣ್ಣ ಇಂಗಳೇಶ್ವರ–ಬಾಗೇವಾಡಿಯಲ್ಲಿ ಜನಿಸಿದಾಗಲಿಂದ ಹಿಡಿದು, ಆತನನ್ನು ಲಾಲನೆ–ಪಾಲನೆ ಮಾಡುತ್ತಾ. ಆತನ ವ್ಯಕ್ತಿತ್ವಕ್ಕೆ ರೂಪುಕೊಟ್ಟವರು. ಅಂತೆಯೇ ಅವರೂ ಕೂಡ ವಚನ ರಚನೆ ಮಾಡಿ, ಬಸವಣ್ಣ ಹಾಗೂ ತಮ್ಮ ನಡುವಿನ ವಾತ್ಸಲ್ಯ ಸಂಬಂಧವನ್ನು ಹೇಳಿದ್ದು ಭಾವಪೂರ್ಣವಾಗಿದೆ.

ಬಸವನೆ ಮುಖ ಸೆಜ್ಜೆ
ಬಸವನೇ ಅಮಳೋಕ್ಯ,
ಬಸವನ ನಾನೆತ್ತಿ ಮುದ್ದಾಡಿಸುವೆನು
ಬಸವಾ, ಸಂಗನಬಸವದೇವಾ ಜಯತು
ಬಸವಗೂ ಎನಗೂ ಭಾವಭೇದವಿಲ್ಲ
ಬಸವಗೂ ಎನಗೂ ರಾಸಿಕೂಟವುಂಟು
ಬಸವಣ್ಣಪ್ರಿಯ ಚೆನ್ನಸಂಗಯ್ಯನಲ್ಲಿ
ಬಸವನ ಬೆಸಲಾದ ಬಾಣತಿ ನಾನಯ್ಯಾ
ಬಸವಾ, ಬಸವಾ, ಬಸವಾ !

ಈ ರೀತಿಯಾಗಿ ಅಕ್ಕನಾಗಮ್ಮನವರು ತಮ್ಮ ವಚನದಲ್ಲಿ ಹೇಳಿಕೊಂಡಿರುವುದನ್ನು ನೋಡಿದರೆ ಬಹುಶಃ ಬಸವರಸ ಜನಿಸಿದ ಕೆಲವೇ ದಿನಗಳಲ್ಲಿ ಮಾದಲಾಂಬಿಕೆಯು ನಿಧನರಾಗಿರಬಹುದೆಂದು ತಿಳಿಯುತ್ತದೆ. ಬಾಲಕ ಬಸವಣ್ಣ ಮುತ್ತಬ್ಬೆಯ ಆರೈಕೆಯಲ್ಲಿ, ಅಕ್ಕ ನಾಗಲಾಂಬಿಕೆಯ ಮಡಿಲಲ್ಲಿ ಬೆಳೆದು ಬಂದಿರುವುದನ್ನು ಕಾಣುತ್ತೇವೆ.

ಮಂಗಳವೇಡೆಯಲ್ಲಿ ಹೀಗೆಯೇ ೧೧೨೬ ರಿಂದ ೧೧೩೧ರ ವರೆಗೆ ನಾಲ್ಕೈದು ವರುಷ ಗತಿಸಿದುದು, ನಾಲ್ಕು ದಿನ ಕಳೆದಂತಾಗಿತ್ತು.

೯. ಮಂಗಳವಾಡದಿಂದ ಕಲ್ಯಾಣಕ್ಕೆ :

ಕಲಚೂರಿ ಬಿಜ್ಜಳರಾಜನ ಮಂಗಳವಾಡಿ ಪ್ರಾಂತವು ಬಸವಣ್ಣನವರ ದಕ್ಷ ಆಡಳಿತದಿಂದಾಗಿ, ಪ್ರಜೆಗಳಲ್ಲಿ ನೆಮ್ಮದಿ, ಪ್ರತಿ ಗ್ರಾಮಗಳಲ್ಲಿ ಅಭಿವೃದ್ಧಿ ಕಾರ್ಯಗಳು ನಡೆದು ಸುಖಃಶಾಂತಿಯಿಂದ ಕಂಗೊಳಿಸತೊಡಗಿತು. ಚಾಲುಕ್ಯ ಸಾಮ್ರಾಜ್ಯದ ಚಕ್ರವರ್ತಿಯಾಗಿದ್ದ ಮೂರನೇ ತೈಲಪನು ಭೋಗಾಸಕ್ತಿಯಲ್ಲಿ ತಲ್ಲೀನನಾಗಿ, ರಾಜ್ಯಾಡಳಿತದ ಕಡೆಗೆ ಉದಾಸೀನತೆ ತೋರಿದ್ದರಿಂದಾಗಿ, ಅಲ್ಲಲ್ಲಿ ಆತನ ಮಾಂಡಲಿಕರು ದಂಗೆಯೆದ್ದು ಸ್ವತಂತ್ರರಾಗಲು ಯತ್ನಿಸುತ್ತಿರುವ ಸಮಾಚಾರ ತಿಳಿದ ಬಿಜ್ಜಳನು, ಚಾಲುಕ್ಯರ ಸಂಬಂಧಿಯೂ ಆಗಿದ್ದರಿಂದ, ದುರ್ಬಲ ಚಕ್ರವರ್ತಿ ತೈಲಪನನ್ನು ಸಿಂಹಾಸನದಿಂದ ಕೆಳಗಿಳಿಸಿ, ತಾನೇ ಚಕ್ರವರ್ತಿಯಾಗಿ ಎಲ್ಲ ಮಾಂಡಲಿಕರನ್ನು ಹತೋಟಿಯಲ್ಲಿಟ್ಟಿಕೊಂಡು, ರಾಜಧಾನಿ ಕಲ್ಯಾಣಕ್ಕೆ ಬಂದು ನೆಲೆಸಿದನು.

ಮಂಗಳವಾಡಿಯಲ್ಲಿದ್ದ ತನ್ನ ಆಪ್ತ ಮಂತ್ರಿಗಳನ್ನು, ದಕ್ಷ ಅಧಿಕಾರಿಗಳನ್ನು, ಸೇನಾ ನಾಯಕರನ್ನು ಕಲ್ಯಾಣ ರಾಜಧಾನಿಗೆ ಕರೆಯಿಸಿಕೊಂಡು ಪ್ರಮುಖ ಹುದ್ದೆಗಳನ್ನಿತ್ತು ರಾಜ್ಯಭಾರ ನಡೆಸಿದನು. ಇದರಿಂದಾಗಿ ೧೧೩೧ರಲ್ಲಿ ಭಂಡಾರದ ದಣ್ಣಾಯಕ ಅರ್ಥಮಂತ್ರಿಯಾಗಿದ್ದ ಬಸವಣ್ಣನವರು ಹಾಗೂ ಅವರ ಕುಟುಂಬ ಪರಿವಾರ, ಕಾಯಕ ಜೀವಿ ಶರಣ ಬಳಗದವರು ಕಲ್ಯಾಣಕ್ಕೆ ಆಗಮಿಸಿದರು.

ಬಸವಣ್ಣನವರ ಅಧಿಕಾರ ವ್ಯಾಪ್ತಿಯು ಸಹಜವಾಗಿಯೇ ಇಡೀ ಚಾಲುಕ್ಯ ಸಾಮ್ರಾಜ್ಯದ ಎಲ್ಲಾ ಮಂಡಲಗಳಿಗೂ ವಿಸ್ತರಿಸಲ್ಪಟ್ಟಿತ್ತು. ಮಂಗಳವಾಡಿ ಪ್ರಾಂತದ ಸಮೃದ್ಧಿಯಲ್ಲಿ ದಕ್ಷ ಕೋಶಾಧಿಕಾರಿ, ದಣ್ಣಾಯಕರಾಗಿ ಹೆಸರು ಮಾಡಿದ್ದ ಬಸವಣ್ಣನವರ ಕೀರ್ತಿಯು ಸಹಜವಾಗಿಯೇ ಎಲ್ಲೆಡೆ ಹರಡಿತ್ತು. ಎಲ್ಲ ಮಾಂಡಲೀಕರು, ಪ್ರಾಂತಗಳ ಪ್ರಜೆಗಳು ಇವರ ಆಗಮನದ ನಿರೀಕ್ಷೆಯಲ್ಲಿದ್ದರು.

ರಾಜಧಾನಿ ಕಲ್ಯಾಣಕ್ಕೆ ಬಂದ ಬಸವಣ್ಣನವರು ತಮ್ಮ ಹಲವಾರು ಹೊಸ ಹೊಸ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ನಿರ್ಧರಿಸಿದರು.

೧೦. ಬಸವಣ್ಣನವರು ಪ್ರಧಾನಮಂತ್ರಿಯಾದದ್ದು :

ಮಂಗಳವಾಡಿಯ ಮಾಂಡಲಿಕ ರಾಜ ಬಿಜ್ಜಳನು ಕಲ್ಯಾಣ ಸಾಮ್ರಾಜ್ಯದ ಚಕ್ರವರ್ತಿಯಾಗುವ ಪೂರ್ವದಲ್ಲಿಯೇ, ಚಾಲುಕ್ಯ ಚಕ್ರವರ್ತಿ ೬ನೇ ವಿಕ್ರಮಾದಿತ್ಯನ ಕಾಲಕ್ಕೆ ಕಲ್ಯಾಣವು ಇಡೀ ದೇಶದಲ್ಲಿ ಹೆಸರು ವಾಸಿಯಾದ ರಾಜಧಾನಿ ನಗರವಾಗಿತ್ತು. ಆತನ ಆಸ್ಥಾನದಲ್ಲಿದ್ದ ವಿಜ್ಞಾನೇಶ್ವರನೆಂಬ ವಿದ್ವಾಂಸನು ತನ್ನ ಗ್ರಂಥ 'ಮಿತಾಕ್ಷರ'ದಲ್ಲಿ ಕಲ್ಯಾಣವನ್ನು ಕುರಿತು ಬರೆದಿರುವುದು ಅದ್ಭುತವಾಗಿದೆ.

"ನಾಸೀ ದಸ್ತಿ ಭವಿಷ್ಯತಿ ಕ್ಷಿತಿತಲೇ ಕಲ್ಯಾಣ ಕಲ್ಪ ಪುರುಂ"

ಅಂದರೆ–'ಕಲ್ಯಾಣದಂತಹ ಪಟ್ಟಣವು ಪ್ರಪಂಚದಲ್ಲಿ ಹಿಂದೆ ಇರಲಿಲ್ಲ. ಈಗ ಇಲ್ಲ, ಮುಂದೆಯೂ ಇರುವುದಿಲ್ಲ.

ಇಂತಹ ಚಾಲುಕ್ಯ ಸಾಮ್ರಾಜ್ಯದ ರಾಜಧಾನಿ ಕಲ್ಯಾಣವು ಅನಂತರದ ಅಶಕ್ತ, ದುರ್ಬಲ ಚಕ್ರವರ್ತಿಯಿಂದಾಗಿ ಅರಾಜಕತೆಯ ಬೀಡಾಗಿತ್ತು. ಮಹಾತ್ವಾಕಾಂಕ್ಷಿ ಬಿಜ್ಜಳ ಭೂಪಾಲನು ಚಕ್ರವರ್ತಿಯಾಗಿ ಘೋಷಿಸಿಕೊಂಡು ೩೬ ವರುಷಗಳ ಕಾಳ ಕ್ರಿ.ಶ. ೧೧೩೧ ರಿಂದ ೧೧೬೮ ವರೆಗೆ ದಕ್ಷ ರೀತಿಯಿಂದ ರಾಜ್ಯಭಾರ ನಡೆಸಿದನು. ಈ ಅವಧಿಯಲ್ಲಿ ಬಸವಣ್ಣನವರು ತಮ್ಮ ವಿದ್ವತ್ತು. ಪ್ರತಿಭೆ, ಕ್ರಿಯಾಶೀಲ ವ್ಯಕ್ತಿತ್ವದಿಂದ ಚಾಲುಕ್ಯ ಸಾಮ್ರಾಜ್ಯದ ಮಹಾದಂಡನಾಯಕ, ಹಿರಿಯ ದಂಡನಾಯಕ, ಪ್ರಧಾನ ಮಂತ್ರಿಯಾಗಿ ಕಲ್ಯಾಣ ರಾಜ್ಯವನ್ನು ನಿಜಾರ್ಥದಲ್ಲಿ 'ಸುಖೀರಾಜ್ಯ'ವನ್ನಾಗಿ ಸಮೃದ್ಧಿಯ ನಾಡನ್ನಾಗಿ ಮಾಡಿದ್ದು ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡುವಂತಾದುದು ಅಭಿಮಾನ ಪಡುವಂತಹದ್ದಾಗಿದೆ.

ಬಿಜ್ಜಳನು ಚಕ್ರವರ್ತಿಯಾಗಿ ಅಧಿಕಾರಕ್ಕೆ ಬಂದಾಗ, ಸಾಮ್ರಾಜ್ಯದ ಭಾಂಡಾರವೆಲ್ಲ ಬರಿದಾಗಿತ್ತು. ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಂಡಿದ್ದವು. ಪ್ರಜೆಗಳಲ್ಲಿ ಅರಾಜಕತೆಯುಂಟಾಗಿತ್ತು. ಕೃಷಿ–ಕಾರ್ಮಿಕರು, ಕೈ–ಕಸಬುದಾರರು ದೂರ–ದೂರದ ಪ್ರಾಂತಗಳಿಗೆ ವಲಸೆ(ಗುಳೆ) ಹೋಗತೊಡಗಿದ್ದರು. ಇಂತಹ ದುರ್ಭರ ಪರಿಸ್ಥಿತಿಯಲ್ಲಿ ಒಂದು ದಿನ ಅರಮನೆಯ ಕೋಶಾಗಾರದಲ್ಲಿ ವಿಚಿತ್ರಲಿಪಿಯೊಂದು ಹಳೆಯ ಕಡತಗಳ ಕಟ್ಟಿನಲ್ಲಿ ಗಣಕರಿಗೆ ದೊರೆಯಿತು. ಅದನ್ನು ತಂದು ಮಹಾರಾಜ ಬಿಜ್ಜಳನಿಗೆ ಒಪ್ಪಿಸಿದರು. ಬಿಜ್ಜಳನ ಆದೇಶದಂತೆ–ಆಸ್ಥಾನದ ಹಿರಿಯ ಪಂಡಿತರು–ವಿದ್ವಾಂಸರಿಗೆ ಓದಿ ಹೇಳಲು ನೀಡಲಾಯಿತು. ಇದಾವುದೋ ವಿಚಿತ್ರ ಲಿಪಿಯ ಬರಹವೆಂದು ಓದಲಾಗದೇ ಮರಳಿಸಿದರು.

ಕಪ್ಪಡಿ ಸಂಗಮದ ಗುರುಕುಲದಲ್ಲಿ ೧೨ ವರುಷಗಳ ಕಾಲ ಭಾರತದ

ದ್ರಾವಿಡ–ಆರ್ಯ ಭಾಷೆಗಳ, ಲಿಪಿಗಳ ಜ್ಞಾನಹೊಂದಿದ್ದ ಬಸವಣ್ಣನವರು ಆ ತಾಮ್ರ ಶಾಸನವನ್ನು ರಾಜನಿಂದ ಪಡೆದು ಸೂಕ್ಷ್ಮವಾಗಿ ಗಮನಿಸಿ, ಅದರ ರಹಸ್ಯವನ್ನು ಓದಿ ಹೇಳಿದರು– 'ಚಾಲುಕ್ಯ ಸಾಮ್ರಾಟನ ಸಿಂಹಾಸನದ ಕೆಳಗೆ ನೆಲಮಾಳಿಗೆಯಲ್ಲಿ ಗುಪ್ತ ಕೊಠಡಿಯಿದ್ದು, ಅಲ್ಲಿ ಚಿನ್ನ–ವಜ್ರ–ವೈಢೂರ್ಯಗಳನ್ನು ತುಂಬಿಟ್ಟಿರುವ ಒಂಬತ್ತು ಕೊಪ್ಪರಿಗೆಗಳಲ್ಲಿ ಅರವತ್ತಾರು ಕೋಟಿ ಸಂಪತ್ತನ್ನು ಕಾಯ್ದಿಡಲಾಗಿದೆ. ರಾಜ್ಯಕ್ಕೆ ದುಷ್ಕಾಲ–ಬರಗಾಲ ಉಂಟಾದಾಗ ಪ್ರಜೆಗಳ ಕಲ್ಯಾಣಕ್ಕೆ–ಅಭಿವೃದ್ಧಿ ಕಾರ್ಯಗಳಿಗೆ ಬಳಸಬಹುದು' ಎಂಬ ಸಂದೇಶವಿದೆ.

ಮಹಾರಾಜ ಬಿಜ್ಜಳನು ಈ ಲಿಪಿಯ ಪರೀಕ್ಷಾರ್ಥವಾಗಿ, ಭಟರ ಮೂಲಕ ಆಳುಗಳನ್ನು ಕರೆಯಿಸಿ ಸಿಂಹಾಸನದ ಕೆಳಗಡೆ ಅಗಿಸಿ ನೋಡಿದಾಗ–ತ್ರಾಮ್ರ ಶಾಸನ ನಿಜವಾಗಿತ್ತು. ಅಪಾರ ಸಂಪತ್ತು ಲಭಿಸಿತು. ಇದು ದೇವರ ಕೃಪೆ, ಮಹಾರಾಜ ಬಿಜ್ಜಳನು ಸಂತುಷ್ಟನಾಗಿ ಬಸವಣ್ಣನವರನ್ನು ರಾಜ್ಯ ಭಂಡಾರದ ಮಹಾದಂಡ ನಾಯಕ–ಪ್ರಧಾನಮಂತ್ರಿಯನ್ನಾಗಿ ಮಾಡಿ, ಸಮಗ್ರ ಸಾಮ್ರಾಜ್ಯದ ಅಭಿವೃದ್ಧಿಯ ಜವಾಬ್ದಾರಿ ನೀಡಿದನು.

೧೧. ಕಾಯಕ–ದಾಸೋಹ ಯೋಜನೆಗಳು :

ಬಸವಣ್ಣನವರು ಕಲ್ಯಾಣ ರಾಜ್ಯದ ಮಹಾಪ್ರಧಾನಿಯಾದುದು ಪ್ರಜೆಗಳಲ್ಲಿ ಹಾಗೂ ಅವರ ಶರಣ ಬಳಗದವರಲ್ಲಿ ಅಪಾರ ಹರ್ಷವನ್ನುಂಟು ಮಾಡಿತು. ಚೆನ್ನಬಸವಣ್ಣನು ಕೂಡ ಮಹಾಜ್ಞಾನಿಯಾಗಿ ಗುರುಕುಲದಿಂದ ಬಂದಿದ್ದನು.

ಅಂದು ಸಂಜೆ ಬಸವ ಮಹಾಮನೆಯಲ್ಲಿ ಅಕ್ಕನಾಗಮ್ಮ, ಚೆನ್ನಬಸವಣ್ಣ ಗಂಗಾಂಬಿಕೆ, ನೀಲಾಂಬಿಕೆ, ಶಿವದೇವ, ಹಡಪದ ಅಪ್ಪಣ್ಣ, ಲಿಂಗಮ್ಮ, ಸೊಡ್ಡಳ ಬಾಚರಸ ಮುಂತಾದ ಶರಣ ಸಂಕುಳದಲ್ಲಿ ಅನುಭಾವ ಗೋಷ್ಠಿಯ ನಂತರ, ಬಸವಣ್ಣವರು ತಮ್ಮ ಯೋಜನೆಗಳನ್ನು ಕುರಿತು ಚರ್ಚಿಸಿದರು. ಸಲಹೆ ಸೂಚನೆಗಳನ್ನು ನೀಡಲು ಕೇಳಿಕೊಂಡರು.

ಶರಣೆ ನೀಲಾಂಬಿಕೆಯು ಬಾಲ್ಯದಿಂದಲೇ ಬಿಜ್ಜಳನ ತಂಗಿಯಾಗಿ ಅರಮನೆಯಲ್ಲಿ ಬೆಳೆದು ಬಂದಿದ್ದರಿಂದ, ರಾಜಕೀಯ ವಿಚಾರಗಳು ಪರಿಜ್ಞಾನ, ಆಡಳಿತದ ಜಾಣ್ಮೆ ಅರಿತಿದ್ದಳು. ಹಡಪದ ಅಪ್ಪಣ್ಣ ಶರಣರು ಬಸವಣ್ಣನವರ ಆಪ್ತ ಕಾರ್ಯದರ್ಶಿಯಾಗಿ ಮಂಗಳವಾಡಿಯಿಂದಲೇ ಕಾರ್ಯನಿರ್ವಹಿಸುತ್ತ ಬಂದಿದ್ದರು. ಸೊಡ್ಡಳ ಬಾಚರಸರು ಅರ್ಥಕೋಶದ ಮುತ್ಸದ್ಧಿ ಅನುಭವಿಕ ಹಿರಿಯರಾಗಿದ್ದರಿಂದ ಅವರ ಮಾರ್ಗದರ್ಶನವೂ ಉಪಯುಕ್ತವಾಗಿತ್ತು.

ಬಸವಣ್ಣನವರು ತಮ್ಮ ಸಾಮ್ರಾಜ್ಯದ ಪ್ರತಿಯೊಬ್ಬರಿಗೂ **'ಶಿವಪಂಚಾಯತ'** ಗಳು ದೊರೆಯುವಂತಾಗಬೇಕೆಂಬುದನ್ನು ವಿವರಿಸಿದರು. ಶಿವಪಂಚಾಯತಗಳೆಂದರೆ ೧)ಅನ್ನ ೨) ಅರಿವೆ ೩) ಆಶ್ರಯ ೪) ಅರಿವು ೫) ಔಷಧ. (ಆಧುನಿಕವಾದ ಇಂದಿನ ಸರಕಾರಗಳು ಅನ್ನಭಾಗ್ಯ, ವಸ್ತ್ರ ಭಾಗ್ಯ, ಆಶ್ರಯ ಮನೆಗಳ ಭಾಗ್ಯ, ಶಿಕ್ಷಣ ಭಾಗ್ಯ, ಆರೋಗ್ಯ ಭಾಗ್ಯ, ಮುಂತಾದ ಯೋಜನೆಗಳನ್ನು ರೂಪಿಸಿರುವುದು.)

೧೨ ನೇ ಶತಮಾನದಲ್ಲಿ ಕಲ್ಯಾಣ ರಾಜ್ಯದಲ್ಲಿ ಈ ಅವಶ್ಯಕತೆಗಳು ಲಭಿಸುವಂತೆ ಮಾಡುವ ಉದ್ದೇಶದಿಂದ ಬಸವಣ್ಣನವರು ಕಾಯಕ ಯೋಜನೆ ಹಾಗೂ ದಾಸೋಹ ಯೋಜನೆ ರೂಪಿಸಿದರು.

ಕೃಷಿ ಪ್ರಧಾನ ರಾಜ್ಯವಾದುದರಿಂದ ರೈತರಿಗೆ-ಒಕ್ಕಲುತನ ಅಭಿವೃದ್ಧಿಗೆ ಬೇಕಾದ ಉಪಕರಣಗಳು, ಅವುಗಳನ್ನು ನಿರ್ಮಿಸುವ ಕಮ್ಮಾರಿಕೆ, ಬಡಿಗತನ, ಕಂಬಳಿ ನೇಯ್ಗೆ, ಚರ್ಮೋದ್ಯೋಗ, ಕುಂಬಾರಿಕೆ ಮುಂತಾದ ವೃತ್ತಿಗಳವರಿಗೆ ಸರ್ವರೀತಿಯ ಸಹಾಯ ಸೌಲಭ್ಯಗಳನ್ನು ಒದಗಿಸುವುದು.

ರಾಜ್ಯಾದ್ಯಂತ ಗ್ರಾಮಗಳನ್ನು ಘಟಕಗಳನ್ನಾಗಿಸಿ, ಭೂಮಿಯನ್ನು ಸರ್ವರಿಗೂ ಸಮಪಾಲು ಮಾಡಿ 'ಕೂಡಲಸಂಗನ ರಾಜ್ಯವ ಹಂಚಿಕೊಳ್ಳಿ ನಿಮ ನಿಮಗೆಲ್ಲ' ಎಂದು ಸಂದೇಶ ಸಾರಿದರು. **ಸಮಭೂಮಿ-ಸಮಪಾಲು-ಸಮಬಾಳು** ವ್ಯವಸ್ಥೆ ಮಾಡಿದರು. ಪ್ರತಿಯೊಂದು ಗ್ರಾಮಗಳಲ್ಲಿ ದಾಸೋಹ ಭವನ ನಿರ್ಮಿಸಿ ಸಾಮೂಹಿಕವಾಗಿ ಭೋಜನ (ಪ್ರಸಾದ)ಮಾಡುವ **ಸಹಕಾರ ತತ್ವ** ಜಾರಿಗೆ ತಂದರು.

ಪ್ರತಿಯೊಬ್ಬರೂ ಸತ್ಯ ಶುದ್ಧ ಕಾಯಕ ಮಾಡಲೇಬೇಕು, ಕಾಯಕದ ಫಲವನ್ನು ದಾಸೋಹ ಮೂಲಕ ಬಳಕೆ ಮಾಡಿಕೊಳ್ಳಬೇಕು. ಕಾಯಕ ತತ್ವವು 'ಗಳಿಕೆ'ಯನ್ನು ದಾಸೋಹತತ್ವ 'ಬಳಕೆ'ಯನ್ನು ಪ್ರಸಾದತತ್ವವು 'ಸಂತೃಪ್ತಿ'ಯ ನೆಮ್ಮದಿಯ ಜೀವನ ಬಾಳುವುದನ್ನು ಕಲಿಸಿದವು. ಇದರಿಂದ ಅದ್ಭುತ ಪರಿವರ್ತನೆಯುಂಟಾಯಿತು.

ಎಲ್ಲೆಡೆಯಲ್ಲಿ ಸ್ವಾವಲಂಬನೆ, ಸ್ವಾಭಿಮಾನ, ಸಮೃದ್ಧಿ ಕಂಡುಬರತೊಡಗಿತು. ಕಲ್ಯಾಣ ರಾಜ್ಯದಲ್ಲಿ 'ನೀಡುವವರುಂಟು ಬೇಡುವವರಿಲ್ಲ' ಎಂಬ ಕಾಯಕ ಜೀವಿಗಳ ಸಾಮ್ರಾಜ್ಯ ರೂಪು ತಾಳಿತು. ಗ್ರಾಮೀಣ ಜನರ ಆನಂದಕ್ಕೆ ಪಾರವೇ ಇರಲಿಲ್ಲ. ಹೃದಯತುಂಬಿ ಗೀತೆಗಳನ್ನು ಕಟ್ಟಿ ಹಾಡತೊಡಗಿದರು.

ಕಾಯಕವ ಕಲಿಸುದಕ ನಾಯಕನು ಬಸವಣ್ಣ
ಜೀಯ ಹೊಸಮತಕ್ಕೆ ಶಿವಭಕ್ತಿ । ಸಾರುದಕೆ
ರಾಯ ಜೀವನದ ಹೊಸ ನುಡಿಗೆ॥

ಉಂಡು ತೇಗಿತು ಲೋಕ ಕೊಂಡಾಡಿ ಕಾಯಕವ
ಕಂಡ ಕಂಡಲ್ಲಿ ದಾಸೋಹ । ಕಾಯಕದ
ಕಂಡ ಜೀವನದ ಶಿವ ಮಾತು ॥

ಬಸವರಾಜ್ಯದ ಸಿರಿಯು ಬಸವ ಬಡವರ ನಿಧಿಯು
ಬಸವ ಮಳೆ ಬೆಳೆಯು ನಾಡೊಳಗೆ । ನಿಜದೀಪ
ಬಸವನೇ ಸಗ್ಗ ಸೋಪಾನ ॥

ಈ ರೀತಿಯಾಗಿ ಕೆಲವೇ ವರ್ಷಗಳಲ್ಲಿ ಕಲ್ಯಾಣ ರಾಜ್ಯವು **'ಸುಖೀ ರಾಜ್ಯ'** ವಾಗ-ತೊಡಗಿತು. ಮಹಾರಾಜ ಬಿಜ್ಜಳನು ಕೂಡ ತನ್ನ ಸಾಮ್ರಾಜ್ಯದಲ್ಲಿ ಸಮೃದ್ಧಿಯನ್ನು ಕಂಡು ನೆಮ್ಮದಿಯಿಂದ ಆಡಳಿತ ನಡೆಸುವಂತಾಯಿತು. ಯಾವುದೇ ರೀತಿಯ ದಂಗೆ, ಯುದ್ಧ, ಕಲಹಗಳಿಲ್ಲದೇ ರಾಜ್ಯದಲ್ಲಿ ಶಾಂತಿ ನೆಲೆಸಿತು.

೧೨. ವಿಚಾರ ಪತ್ನಿ ನೀಲಾಂಬಿಕೆ :

ಶರಣೆ ನೀಲಾಂಬಿಕೆಯು ಬಸವಣ್ಣನವರ ಪ್ರತಿಯೊಂದು ಕಾರ್ಯಗಳ ಹಿಂದೆ 'ಜ್ಞಾನಶಕ್ತಿ'ಯಾಗಿ ಕಾರ್ಯ ನಿರ್ವಹಿಸುತ್ತಿದ್ದಳು.

"ಬಸವನ ಅನುಭವದಿಂದ ವಿವರವ ಕಂಡು
ವಿಚಾರ ಪತ್ನಿ ಯಾದೆನಯ್ಯಾ ಸಂಗಯ್ಯ"

ಎಂಬ ವಚನದ ಮೂಲಕ ಅಭಿವ್ಯಕ್ತಗೊಳಿಸಿದ್ದನ್ನು ಕಾಣುತ್ತೇವೆ. ದಾಂಪತ್ಯ ಜೀವನದಲ್ಲಿ ಪತ್ನಿಯು ಪತಿಯ ದೇಹಸಂಗಾತಿಯಾದರೆಷ್ಟೇ ಸಾಲದು, ಆತನ ಸಾಧನೆಯಲ್ಲಿ ವಿಚಾರ ಪತ್ನಿಯಾಗಿ ಮಾರ್ಗದರ್ಶನವನ್ನು ಮಾಡಬೇಕಾಗುತ್ತದೆ.

ಬಸವಣ್ಣನವರ ಬಾಳಿನಲ್ಲಿ ಅವರ ಅಕ್ಕ ನಾಗಲಾಂಬಿಕಾತಾಯಿಯು ಇಚ್ಛಾ ಶಕ್ತಿಯಾಗಿ, ಅವರ ಮೊದಲ ಪತ್ನಿ ಗಂಗಾಂಬಿಕೆಯು ಕ್ರಿಯಾಶಕ್ತಿಯಾಗಿ, ಎರಡನೆಯ ಪತ್ನಿ ನೀಲಾಂಬಿಕೆಯು ಜ್ಞಾನಶಕ್ತಿಯಾಗಿ ಕಾರ್ಯನಿರ್ವಹಿಸಿದ್ದುದ ಕಾಣುತ್ತೇವೆ.

೧೩. ಅನುಭವ ಮಂಟಪ ಸ್ಥಾಪನೆ-೭೭೦ ಅಮರಗಣಂಗಳು :

ಬಸವಣ್ಣನವರು ಪ್ರಧಾನಮಂತ್ರಿಯಾಗಿ ರಾಜಕಾರ್ಯಗಳನ್ನು ಪೂರೈಸುತ್ತಲೇ, ಬಾಲ್ಯದಿಂದಲೂ ವಿಚಾರಗಳು ಚಿಂತನ-ಮಂಥನ ನಡೆಸುತ್ತ ಬಂದಿದ್ದು ಸಮಾಜೋ ಧಾರ್ಮಿಕ ಪರಿವರ್ತನೆ ತಂದು, ಹೊಸ ಧರ್ಮ, ಹೊಸ ಸಮಾಜ, ಹೊಸ ಸಂಸ್ಕೃತಿ ರೂಪಿಸುವ ಧ್ಯೇಯವನ್ನು ಸಾಕಾರಗೊಳಿಸಲು

ನಿರ್ಧರಿಸಿದರು. ಅದರ ಪೂರ್ವ ಸಿದ್ಧತೆಯೆನ್ನುವಂತೆ ಮಂಗಳವಾಡಿಯಲ್ಲಿ ಮನೆಯಲ್ಲಿ ಶಿವಾನುಭವ ಗೋಷ್ಠಿ ಪ್ರಾರಂಭಿಸಿ, ಚಿಂತನ ಪ್ರಾರಂಭಿಸಿದ್ದರು.

ಅದೇ ಚಿಂತನಗಳನ್ನು ಕಲ್ಯಾಣಕ್ಕೆ ಬಂದ ನಂತರವೂ ಮುಂದುವರೆಸಿ-ಕೊಂಡು ಬಂದರು. ಕಲ್ಯಾಣದಲ್ಲಿ ಪ್ರಜೆಗಳ ಬಹಿರಂಗದ ಅಭಿವೃದ್ಧಿ ಕಾರ್ಯಗಳ ಜತೆಗೆ ಅವರ ಅಂತರಂಗದ ಜ್ಞಾನವಿಕಾಸಕ್ಕೂ ಗಮನ ಕೊಡುತ್ತ ಬಂದರು.

ಕಲ್ಯಾಣದ ತಮ್ಮ ಮಹಾಮನೆಯಲ್ಲಿ ನಿರಂತರವಾಗಿ (೧೧೩೧ ರಿಂದ ೧೧೪೦) ವರೆಗೆ ಅನುಭಾವ ಗೋಷ್ಠಿ ನಡೆಸುತ್ತ ಬಂದುದರಿಂದ, ಅಲ್ಲಿಗೆ ನಾಡಿನಾದ್ಯಂತದಿಂದ ಅಧ್ಯಾತ್ಮ ಜೀವಿಗಳು, ಹಿರಿಯ ಶರಣ-ಶರಣೆಯರು ಆಗಮಿಸತೊಡಗಿದರು. ಶರಣ-ಶರಣೆಯರ ಸಂಖ್ಯೆ ಬೆಳೆಯತೊಡಗಿತು. ಅವರಿಗೆಲ್ಲ ಆಶ್ರಯ ತಾಣಗಳನ್ನು ನಿರ್ಮಿಸಿಕೊಟ್ಟರು. ಅವರು ತಮ್ಮ ತಮ್ಮ ಅಭಿರುಚಿ, ಅನುಭವ, ಸಾಮರ್ಥ್ಯಕ್ಕನುಸರಿಸಿ ಕಾಯಕಗಳನ್ನು ಕೈಕೊಂಡರು. ಬಸವಣ್ಣನವರು ಸಮತೆ-ಸ್ವಾತಂತ್ರ್ಯ-ಬಂಧುತ್ವ-ಮಾನವೀಯತೆಯ ತಳಹದಿಯಲ್ಲಿ ಪ್ರಜಾಪ್ರಭುತ್ವ ಮಾದರಿಯ ಒಂದು ಮಹಾನ್ ಸಮಾಜೋ-ಧಾರ್ಮಿಕ ಸಂಸ್ಥೆಯನ್ನು ೧೧೪೦ ರಲ್ಲಿ ಹುಟ್ಟು ಹಾಕಿದರು. ಆ ಸಂಸ್ಥೆಯು **ಅನುಭವ ಮಂಟಪ** ಎಂಬ ಹೆಸರಿನಲ್ಲಿ ವಿಶ್ವವಿಖ್ಯಾತವಾಯಿತು.

ಶರಣೆ ನೀಲಾಂಬಿಕೆಯು ಬಸವಣ್ಣನವರ ಈ ಮಹಾನ್ ಕಾರ್ಯವನ್ನು ತಮ್ಮದೊಂದು ವಚನದಲ್ಲಿ ಐತಿಹಾಸಿಕವಾಗಿ ದಾಖಲುಗೊಳಿಸಿರುವುದನ್ನು ನೋಡಬಹುದು.

ಪ್ರಣವದ ಬೀಜವ ಬಿತ್ತಿ
ಪಂಚಾಕ್ಷರಿಯ ಬೆಳೆಯ ಬೆಳೆದು
ಪರಮ ಪ್ರಸಾದವನೊಂದು ರೂಪಮಾಡಿ ಮೆರೆದು
ಭಕ್ತಿಫಲವನುಂಡಾತ ನಮ್ಮ ಬಸವಯ್ಯನು.
ಚೆನ್ನಬಸವನೆಂಬ ಪ್ರಸಾದಿಯ ಪಡೆದು
ಅನುಭವ ಮಂಟಪವನನು ಮಾಡಿ
ಅನುಭವ ಮೂರ್ತಿಯಾದ ನಮ್ಮ ಬಸವಯ್ಯನು
ಅರಿವ ಸಂಪಾದಿಸಿ ಆಚಾರವನಂಗಗೊಳಿಸಿ
ಏಳುನೂರೆಪ್ಪತ್ತು ಅಮರಗಣಂಗಳ
ಅನುಭವ ಮೂರ್ತಿಗಳ ಮಾಡಿದಾತ

ನಮ್ಮ ಬಸವಯ್ಯನು,
ಆ ಅನುಭವದಲ್ಲಿ ಐಕ್ಯಪ್ರಸಾದವನಂಗಗೊಂಡು
ಮಂತ್ರ ನಿರ್ಮಂತ್ರವಾದಾತ ನಮ್ಮ ಬಸವಯ್ಯನು
ಆ ಸ್ಥಲವನಳಿದು ಭಾವವಡಗಿ ಬಟ್ಟ ಬಯಲು ಕೂಡಿ
ಸಂಗಯ್ಯನಲ್ಲಿ ಸ್ವಯಲಿಂಗಿಯಾದ ನಮ್ಮ ಬಸವಯ್ಯನು.

ಬಸವಣ್ಣನವರು ಹುಟ್ಟು ಹಾಕಿದ ಈ ಮಹಾನ್ ಸಂಸ್ಥೆಯು ಜಗತ್ತಿನ ಇತಿಹಾಸದಲ್ಲಿ ಪ್ರಥಮ ಸ್ಥಾನದಲ್ಲಿದೆ. ಕ್ರಿ.ಶ. ೧೧೪೦ರಲ್ಲಿ ಪ್ರಾರಂಭವಾದ **ಅನುಭವ ಮಂಟಪ** ಎಂಬ ಪಾರ್ಲಿಮೆಂಟ್ ಮಾದರಿಯ ಸಂಸ್ಥೆಯು ಅಖಂಡ ಇಪ್ಪತ್ತೇಳು ವರುಷಗಳ ಕಾಲ ನಿರಂತರವಾಗಿ ೭೭೦ ಶರಣ-ಶರಣೆಯರಿಂದ ಚಿಂತನ-ಮಂಥನ ನಡೆದು ಅದ್ಭುತವಾದ ಕ್ರಾಂತಿಯನ್ನೇ ಮಾಡಿತು.

ಈ ಅನುಭವ ಮಂಟಪದ ಕೀರ್ತಿ-ವಾರ್ತೆಯನ್ನು ಕೇಳಿ ಕಾಶ್ಮೀರದಿಂದ ಕನ್ಯಾಕುಮಾರಿವರೆಗಿನ, ಗಾಂಧಾರದಿಂದ-ಬ್ರಹ್ಮದೇಶದವರೆಗಿನ, ಸಾಗರದೊಳಗಣ ಅನೇಕ ದ್ವೀಪಗಳಿಂದಲೂ ಕೂಡ ಶರಣ ಶರಣೆಯರು ಕಲ್ಯಾಣಕ್ಕೆ ಆಗಮಿಸಿ ಅನುಭವ ಮಂಟಪದ ಚರ್ಚೆಯಲ್ಲಿ ಪಾಲ್ಗೊಂಡರು. ಅವರಲ್ಲಿ ಪ್ರಮುಖರೆಂದರೆ-

'ಜೇಡರ ದಾಸಿಮಯ್ಯ-ದುಗ್ಗಳೆ, ಮಾದಾರ ಚೆನ್ನಯ್ಯ-ಗಂಗಾದೇವಿ, ಸಮಗಾರ ಹರಳಯ್ಯ-ಕಲ್ಯಾಣಮ್ಮ, ಡೋಹರ ಕಕ್ಕಯ್ಯ-ಬಿಷ್ಟಾದೇವಿ, ಹೊಲೆಯರ ಶಿವನಾಗಮಯ್ಯ, ರೇವಣಸಿದ್ಧ-ರೇಕಮ್ಮ, ಏಕೋರಾಮಾರಾಧ್ಯ, ಮರುಳಸಿದ್ಧರು, ಮಾದರ ಧೂಳಯ್ಯ, ಮೋಳಿಗೆ ಮಾರಯ್ಯ-ಮಹಾದೇವಮ್ಮ, ಹಡಪದ ಅಪ್ಪಣ್ಣ-ಲಿಂಗಮ್ಮರು, ಆಯ್ದಕ್ಕಿ ಲಕ್ಕಮ್ಮ-ಮಾರಯ್ಯರು, ಉರಿಲಿಂಗಪೆದ್ದಿ-ಕಾಳವ್ವೆ, ಬಾಚಿಕಾಯಕದ ಬಸವಪ್ಪ-ಕಾಳವ್ವೆ, ಅಮುಗೆ ದೇವಯ್ಯ-ರಾಯಮ್ಮ, ಕುಂಬಾರ ಗುಂಡಯ್ಯ-ಕೇತಲದೇವಿ ಮೇದಾರ ಕೇತಯ್ಯ-ಸಾತವ್ವೆ ಹೂಗಾರ ಮಾದಣ್ಣ, ಶಂಕರ ದಾಸಿಮಯ್ಯ, ಸಕಲೇಶ ಮಾದರಸ, ನುಲಿಯ ಚಂದಯ್ಯ, ಚಂದಿಮರಸ, ಅಜಗಣ್ಣ, ಅಲ್ಲಮಪ್ರಭು, ಅಂಬಿಗ ಚೌಡಯ್ಯ, ಆದಯ್ಯ, ಅರಿವಿನ ಮಾರಿತಂದೆ, ಬಿಬ್ಬಿ ಬಾಚಯ್ಯ, ಸೊಡ್ಡಳ ಬಾಚರಸ, ಕೋಲ ಶಾಂತಯ್ಯ, ಹಾವಿನಹಾಳ ಕಲ್ಲಯ್ಯ, ಮಡಿವಾಳ ಮಾಚಿದೇವ, ಕುರುಬ ಗೊಲ್ಲಾಳ, ಗಾಣದ ಕನ್ನಪ್ಪ, ಘಟ್ಟಿವಾಳಯ್ಯ, ತಳವಾರ ಕಾಮಿದೇವಯ್ಯ, ತುರುಗಾಹಿ ರಾಮಣ್ಣ, ನಗೆಮಾರಿ ತಂದೆ, ಬಹುರೂಪಿ ಚೌಡಯ್ಯ, ಅಪ್ಪೆಯ ಸೋಮಣ್ಣ, ಹೆಂಡದ ಮಾರಯ್ಯ, ವಚನ ಭಂಡಾರಿ ಶಾತರಸ, ಚೆನ್ನಬಸವಣ್ಣ, ಅಕ್ಕನಾಗಮ್ಮ, ಸಿದ್ಧರಾಮೇಶ್ವರ, ಅಕ್ಕಮಹಾದೇವಿ, ನುಲಿಯ ಚಂದಯ್ಯ, ಕಿನ್ನರಿ ಬ್ರಹ್ಮಯ್ಯ, ಮುಕ್ತಾಯಮ್ಮ, ಗುಡ್ಡವ್ವೆ, ದಾನಮ್ಮ, ಬೊಂತಾದೇವಿ,

ಸತ್ಯಕ್ಕ, ಸಂಕವ್ವೆ, ವೀರಮ್ಮ, ಕಿಟ್ಟವ್ವೆ, ರಾಯಸದ ಮಂಚಣ್ಣ-ರಾಯಮ್ಮ, ಎಡೆಮಠದ ನಾಗಿದೇವ, ಢಕ್ಕೆಯ ಮಾರಯ್ಯ, ಒಕ್ಕಲಿಗ ಮುದ್ದಣ್ಣ, ಬಾಹೂರ ಬ್ರಹ್ಮಯ್ಯ, ಬಿಬ್ಬಿ ಬಾಚಯ್ಯ, ಎಲಿಗಾರ ಕಾಮಣ್ಣ, ಮುಕ್ತಿನಾಥಯ್ಯ, ಗಬ್ಬಿದೇವಯ್ಯ, ಅರಿವಿನ ಮಾರಿತಂದೆ, ಅಗ್ಘವಣಿ ಹಂಪಯ್ಯ, ಚಂದಿಮರಸ, ಮರುಳ ಶಂಕರದೇವ, ಬಾಲ ಸಂಗಯ್ಯ, ನೀಲಾಂಬಿಕೆ, ಗಂಗಾಂಬಿಕೆ, ಮುಕ್ತಾಯಕ್ಕ" ಮೊದಲ್ಗೊಂಡು ೭೭೦ ಶರಣ-ಶರಣೆಯರು ಅನುಭವ ಮಂಟಪದ ಸದಸ್ಯರಾಗಿ ಚಿಂತನ ಗೋಷ್ಠಿಯಲ್ಲಿ ಭಾಗ ವಹಿಸುತ್ತಿದ್ದರು.

ಪ್ರತಿಯೊಬ್ಬ ಶರಣರು ತಮ್ಮ ತಮ್ಮ ಕಾಯಕಗಳ ಅನುಭವಗಳನ್ನು ಸಮಾಜೋ-ಧಾರ್ಮಿಕ ವಿಚಾರಗಳನ್ನು, ಇಷ್ಟಲಿಂಗ ಯೋಗದ ಸಾಧನೆಯ ಅನುಭವಗಳನ್ನು ವಚನಗಳ ರೂಪದಲ್ಲಿ ಬರೆದು ತಂದು ಚರ್ಚಿಸಿ, ಅವುಗಳನ್ನು ವಚನ ಭಂಡಾರಿ ಶಾಂತರಸರಿಗೆ ಒಪ್ಪಿಸುತ್ತಿದ್ದರು.

೧೪. ಲಿಂಗಾಯತ ಧರ್ಮದ ಉಗಮ – ವಿಕಾಸ :

೧೨ ನೇ ಶತಮಾನದ ಪೂರ್ವದಲ್ಲಿದ್ದ ಶೈವಧರ್ಮ, ವೈದಿಕ ಧರ್ಮಗಳು ಧಾರ್ಮಿಕ ಸಂಸ್ಕಾರವನ್ನು ಸ್ತ್ರೀ-ಪುರುಷರೆಂಬ, ವಿಪ್ರ-ಅಂತ್ಯಜರೆಂಬ ಭೇದವಿಲ್ಲದೆ ನೀಡುತ್ತಿರಲಿಲ್ಲ. ಧರ್ಮ-ದೇವರು-ದೇವಾಲಯಗಳು ಮೇಲ್ಜಾತಿಯವರು ಸ್ವತ್ತಾಗಿದ್ದವು. ಈ ಎಲ್ಲ ಭೇದಗಳನ್ನು ತೊಡೆದು ಹಾಕಿ ಬಸವಣ್ಣನವರು ಇಷ್ಟಲಿಂಗ ಪರಂಪರೆಯ ಲಿಂಗಾಯತ ಧರ್ಮವನ್ನು ಸ್ಥಾಪಿಸಿ, ಇಷ್ಟಲಿಂಗ ದೀಕ್ಷಾ ಸಂಸ್ಕಾರವನ್ನು ಯಾವ ಭೇದಗಳಿಲ್ಲದೆ ಎಲ್ಲರಿಗೂ ಮುಕ್ತವಾಗಿ ನೀಡಿದ್ದರಿಂದಾಗಿ-ಇದು ಸಮತೆ, ಸ್ವಾತಂತ್ರ್ಯ, ಬಂಧುತ್ವದ ಧರ್ಮವಾಯಿತು. ಬಸವಗುರುವಿನಿಂದ ಪ್ರಾರಂಭವಾದ್ದರಿಂದ ಇದನ್ನು ಬಸವಧರ್ಮವಂತೆಲೂ, ಶರಣರು ಅನುಸರಿಸಿದ್ದರಿಂದ ಶರಣ-ಧರ್ಮವೆಂತಲೂ ಕರೆಯಲಾಗುತ್ತಿದೆ.

ಅಷ್ಟಾವರಣವೇ ಅಂಗ, ಪಂಚಾಚಾರವೇ ಪ್ರಾಣ, ಷಟ್‌ಸ್ಥಲವೇ ಆತ್ಮವಾಗಿಪ್ಪ ಧರ್ಮವಿದು, ಯಾವುದೇ ಮೂಢನಂಬಿಕೆ, ಕಂದಾಚಾರ, ಕರ್ಮಠ ವ್ರತ, ನೇಮ ಅಭಿಷೇಕಾದಿಗಳು, ಯಜ್ಞ, ಯಾಗ, ಹೋಮ-ಹವನಾದಿಗಳಿಲ್ಲದ ಸಹಜ ಸರಳ ಧರ್ಮವನ್ನು ಬಸವಣ್ಣನವರು ನೀಡಿದರು.

ಪ್ರತಿಯೊಬ್ಬ ಸ್ತ್ರೀ-ಪುರುಷರು ಬಸವಗುರು ಪರಂಪರೆಯ ಶರಣ ಸದ್ಗುರುಗಳಿಂದ ಇಷ್ಟಲಿಂಗ ಸಂಸ್ಕಾರ ಹೊಂದಿ ಸದ್ಭಕ್ತರಾದರು, ಗುರುಮುಟ್ಟಿ ಗುರುವಾದರು, ಜಂಗಮ ಮುಟ್ಟಿ ಜಂಗಮವಾದರು. ಬಸವಜ್ಯೋತಿ ಮುಟ್ಟಿ ಜ್ಯೋತಿಗಳೇ ಆದರು. ಅಂಗದ ಮೇಲೆ ಲಿಂಗಧಾರಣೆ ಮಾಡಿದ್ದರಿಂದ

ಪ್ರತಿಯೊಬ್ಬರೂ 'ಮಾನದೇವ'ರೇ ಆದರು. ಅವರ ದೇಹವೇ ದೇವಾಲಯ-ವಾಯಿತು. ನಡೆದಾಡುವ ದೇವಾಲಯ, ಮಾತನಾಡುವ ದೇವರು ಎಂಬುದು ಆಚರಣೆಗೆ ಬಂದಿತು. ಸಹಜವಾಗಿಯೇ ಪೂಜಾರಿ-ಪುರೋಹಿತರ ಶೋಷಣೆ-ಯಿಂದ ಮಾನವಜನಾಂಗವು ಮುಕ್ತವಾಗತೊಡಗಿತು.

ಬಸವಣ್ಣನವರು ಸ್ವರ್ಗ-ನರಕಗಳ, ಪಾಪ-ಪುಣ್ಯಗಳ, ಕೈಲಾಸ-ವೈಕುಂಠಗಳ ಭಯ-ಭೀತಿಗಳಿಂದ ಜನರನ್ನು ಪಾರುಮಾಡಿದರು. ಮರ್ತ್ಯಲೋಕ ಕರ್ತಾರನ ಕಮ್ಮಟವೆಂದು ಸಾರಿದರು. ಕರ್ಮಸಿದ್ಧಾಂತ ನಿರಸನಗೊಳಿಸಿ ಕಾಯಕ ಸಿದ್ಧಾಂತ ನೀಡಿದರು. ಪ್ರಾಯಶ್ಚಿತ್ತದ ದಾನ ಪದ್ಧತಿ ತೊಡೆದುಹಾಕಿ, ಭಕ್ತಿಯ ದಾಸೋಹ ಪದ್ಧತಿ ಜಾರಿಗೆ ತಂದರು, ಜ್ಯೋತಿಷ್ಯ-ಶಕುನ, ಹಣೆಬರಹ, ವಿಧಿ, ಶುಭ-ಅಶುಭ, ಭಾವಭೇದ ತೊಡೆದು ಹಾಕಿದರು. ಅಂಗದ ಮೇಲೆ ಲಿಂಗವುಳ್ಳವರಿಗೆ 'ಅಮಂಗಲ' ಇಲ್ಲವೆಂದು ತಿಳಿಸಿ ಭೀತಿ ನಿವಾರಣೆ ಮಾಡಿದರು. ಅಂಧಶ್ರದ್ಧೆ ದೂರ ಮಾಡಿದರು. ಸಹಜವಾದ ಭಕ್ತಿಯನ್ನು ಪ್ರತಿಪಾದಿಸಿದರು.

ಶರಣೆ ನೀಲಾಂಬಿಕೆಯು ತನ್ನ ವಚನದಲ್ಲಿ ಹೇಳುತ್ತಾಳೆ-

ಎಲೆ ಶರಣರಿರಾ, ಎಲೆ ಭಕ್ತರಿರಾ,
ಭಕ್ತಿ ಕಾಂಡದ ಮೂಲಿಗನ ಕಾಣಿರೇ ಬಸವಣ್ಣನ,
ಆ ಭಕ್ತಿಯ ಸಂಗದ ಶಿವೈಕ್ಯನ ಕಾಣಿರೆ ಬಸವನ,
ಭಕ್ತಿಯ ನಿಜ ಸಮಾಧಿಯ ಸುಖವ
ಕರುಣಿಸುವ ಅಯ್ಯ ಬಸವನ
ಸಂಗಯ್ಯನ ಪ್ರಸಾದಿಯಾದ
ಬಸವನ ಕಾಣಿರೆ ಭಕ್ತರು

ಬಸವಪೂರ್ವದ ಭಕ್ತಿಯು ಭಯದಿಂದ, ಹಿಂಸೆಯಿಂದ ಕೂಡಿತ್ತು. ಪೂರ್ವದ ಪುರಾತನರು ಸಿರಿಯಾಳ-ಚಂಗಳೆಯರು ಮಗನ ತುಂಡರಿಸಿ ಅಡಿಗೆ ಮಾಡಿದ್ದು, ಬೇಡರ ಕಣ್ಣಪ್ಪ ಜೀವಹಿಂಸೆ ಮಾಡಿದ್ದು, ಯಜ್ಞಕುಂಡಸಲ್ಲಿ ಪ್ರಾಣಿಬಲಿ ನೀಡುತ್ತಿದ್ದ ಧರ್ಮಾಂಧರು ಮಾಡುವ ಭಕ್ತಿ ಭಯದ ಭಕ್ತಿಯಾಗಿತ್ತು. ಬಸವಣ್ಣನವರು ಆಚರಣೆಗೆ ತಂದದ್ದು ದಯೆಯ ಭಕ್ತಿ ಅಂತೆಯೇ ಭಕ್ತಿ ಕಾಂಡದ ಮೂಲಿಗ ಬಸವಣ್ಣನವರು ಎಂಬುದನ್ನು ಈ ವಚನದ ಮೂಲಕ ಶರಣೆ ನೀಲಮ್ಮ ಶರಣ ಸಂಕುಳಕ್ಕೆ ತಿಳಿಹೇಳಿದರು.

ಈ ರೀತಿಯ ಹೊಸ ಧರ್ಮ ಲಿಂಗಾಯತವು ಅನುಭವ ಮಂಟಪದ ಮೂಲಕ ಬಸವ ಗುರುವಿನಿಂದ ಉಗಮಗೊಂಡು. ೭೭೦ ಶರಣ-ಶರಣೆಯರ ಅನುಭಾವ ಚಿಂತನ-ಮಂಥನದಲ್ಲಿ ಸಿದ್ಧಾಂತಗೊಂಡು, ಲಿಂಗ ಲಕ್ಷ್ಯದ ಮೇಲಣ ತೊಂಬತ್ತಾರು ಸಾಸಿಗ ಚರಜಂಗಮರ ಮೂಲಕ ನಾಡಿನಾದ್ಯಂತ ಪ್ರಸಾರಗೊಂಡಿತು. ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಸರ್ವರೂ ಸಮಾನರಾಗಿ, ಈ ಧರ್ಮದ ಅನುಯಾಯಿಗಳಾದರು. ಈ ಧರ್ಮವು ಗುರು-ಶಿಷ್ಯರೆಂಬ ಭೇದ ಮಾಡುವ ಧರ್ಮವಲ್ಲ, ಗುರುಮುಟ್ಟಿ ಸರ್ವರೂ ಗುರುವಾಗುವ ಧರ್ಮವಾಯ್ತು. ಸ್ಥಿರವಾಗಿ ನಿಂತು ಕಾಯಕ ಜೀವನ ನಡೆಸಿದಾಗ ಭಕ್ತನೆನಿಸಿದರೆ, ಅದೇ ಭಕ್ತಚರವಾಗಿ ಚಲಿಸಿ ಅನುಭಾವ ನಿವೇದಿಸಿದಾಗ ಜಂಗಮವೆನಿಸಿದರು. ಇದು ಭಕ್ತ-ಜಂಗಮ ಅವಿನಾಭಾವ ಸಂಬಂಧದ ಧರ್ಮವಾಗಿದೆ.

೧೫. ಜಾತಿ ರಹಿತ ಸಮಾಜ ನಿರ್ಮಾಣ :

ಹನ್ನೆರಡೆಯ ಶತಮಾನದ ಪೂರ್ವದಲ್ಲಿ ಚಾತುರ್ವರ್ಣ ಭೇದದ ಸಮಾಜ ವ್ಯವಸ್ಥೆ ಜಾರಿಯಲ್ಲಿತ್ತು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬುವ ಈ ನಾಲ್ಕು ವರ್ಣ (ಜಾತಿ)ಗಳಲ್ಲಿ ವಿಭಜನೆ ಹೊಂದಿದ್ದರು. ಇವರಿಂದ ಹೊರತಾದ ದಲಿತರನ್ನು ಪಂಚಮರು, ಅವರ್ಣೀಯರು, ಅಸ್ಪೃಶ್ಯರು ಎಂದು ಕರೆದು ಗ್ರಾಮ-ಪಟ್ಟಣಗಳ ಹೊರ ವಲಯದಲ್ಲಿ ಕೇರಿಗಳನ್ನು ಮಾಡಿ, ಅಲ್ಲಿರುವಂತೆ ಮಾಡಿದ ವ್ಯವಸ್ಥೆಯಾಗಿತ್ತು. ಶ್ರೇಣೀಕೃತ ಜಾತಿ ಪದ್ಧತಿಯು ಮೇಲಿನಿಂದ ಕೆಳಗಿನವರೆಗೆ ನಿರಂತರ ಶೋಷಣೆಯನ್ನು ಮಾಡಿಕೊಳ್ಳುತ್ತಲೇ ಬಂದಿತ್ತು.

ಹೊಲೆಗಂಡಲ್ಲದೇ ಪಿಂಡದ ನೆಲೆಗೆ ಆಶ್ರಯವಿಲ್ಲವಾದ್ದರಿಂದ ಎಲ್ಲರೂ ಒಂದೇ ರೀತಿಯಲ್ಲಿ ಜನಿಸುವುದರಿಂದ, ಎಲ್ಲರೂ ಸಮಾನರು, ಎಲ್ಲರಿಗೂ ಒಂದೇ ರೀತಿಯ ಧರ್ಮ ಸಂಸ್ಕಾರ ನೀಡಿ ಸಮಾನತೆಯ ಜಾತಿರಹಿತ ಲಿಂಗಾಯತ ಶರಣ ಸಮಾಜವನ್ನು ಬಸವಣ್ಣನವರು ನಿರ್ಮಾಣ ಮಾಡಿದರು. ಕಾಯಕ ಗೌರವ, ಕಾಯಕ ದೈವತ್ವವನ್ನು ಪ್ರತಿಪಾದಿಸಿ, ಕಾಯಕಗಳಲ್ಲಿ ಮೇಲು-ಕೀಳುಗಳಿಲ್ಲ, ಎಲ್ಲ ಕಾಯಕಗಳೂ ಕುಟುಂಬ-ಸಮಾಜ-ರಾಷ್ಟ್ರ ಅಭಿವೃದ್ಧಿಗೆ ಸಹಕಾರಿ ಎಂಬುದನ್ನು ಜಾರಿಗೆ ತಂದರು.

ಹುಟ್ಟಿನಿಂದ ಯಾರೂ ಕನಿಷ್ಠ ಜಾರಿಯವರಲ್ಲ, ಸಾಧನೆಯಿಂದ ಮಾತ್ರ ಶ್ರೇಷ್ಠರಾಗುವರೆಂದು ಹೇಳಿ, ಅಪ್ಪನು ನಮ್ಮ ಮಾದಾರ ಚನ್ನಯ್ಯ, ಬೊಪ್ಪನು ನಮ್ಮ ಡೋಹಾರ ಕಕ್ಕಯ್ಯ ಎಂದು ಸ್ವತಃ ಬಸವಣ್ಣನವರು ದಲಿತ-ಶೂದ್ರರನ್ನು ಅಪ್ಪಿಕೊಂಡರು. ಅಂತೆಯೇ ನೀಲಾಂಬಿಕೆಯೂ ಕೂಡ ಪತಿಗೆ ತಕ್ಕ ಸತಿ ಎಂಬುದನ್ನು ಆಚರಿಸಿ ತೋರಿದಳು-

ನಾನು ನಿಮ್ಮವಳಲ್ಲವಯ್ಯ, ನಾನು ಅನಿಮಿಷನವರವಳು
ನಾನು ನಿಮ್ಮವಳಲ್ಲವಯ್ಯ, ನಾನು ಅಜಗುಣನವರವಳು
ನಾನು ನಿಮ್ಮವಳಲ್ಲವಯ್ಯ, ನಾನು ಪ್ರಭುವಿನ ಸಂತತಿಯವಳು
ನಾನು ನಿಮ್ಮವಳಲ್ಲವಯ್ಯ, ನಾನು ಮಾದಾರ ಚೆನ್ನಯ್ಯನ ಮೊಮ್ಮಗಳು
ನಾನು ನಿಮ್ಮವಳಲ್ಲವಯ್ಯ, ನಾನು ಪ್ರಸಾದಿ (ಭೋಗಣ್ಣ)ಗಳ
ಮನೆಯ ಕೀಳು ತೊತ್ತು
ನಾನು ನಿಮ್ಮವಳಲ್ಲವಯ್ಯಾ ಸಂಗಯ್ಯಾ,
ನಾನು ಬಸವಯ್ಯನ ಮನೆಯ ತೊತ್ತಿನ ಮಗಳು.

ಈ ರೀತಿಯಾಗಿ ನೀಲಾಂಬಿಕೆ ತಾಯಿಯೂ ಕೂಡ ತಾನು ಅನಿಮಿಷ, ಅಜಗಣ್ಣ, ಅಲ್ಲಮಪ್ರಭು, ಮಾದಾರ ಚೆನ್ನಯ್ಯ, ಪ್ರಸಾದಿ ಭೋಗಣ್ಣ ಮುಂತಾದ ಶರಣ ಸಂಕುಳದ ತೊತ್ತು ಎಂಬುದನ್ನು ಸಾರಿದ್ದಲ್ಲದೇ, ಕೆಳವರ್ಗದ ಜನರೊಂದಿಗೆ ಗುರುತಿಸಿಕೊಂಡು ಅವರಲ್ಲಿ ಆತ್ಮವಿಶ್ವಾಸ, ಆತ್ಮೀಯ ಭಾವ ತೋರಿಸಿದ್ದನ್ನು ಕಾಣುತ್ತೇವೆ.

ಬಸವಣ್ಣನವರ ಸಮಾಜೋ-ಧಾರ್ಮಿಕ ಆಂದೋಲನದಲ್ಲಿ ಶರಣೆ ನೀಲಾಂಬಿಕೆಯ ಪಾತ್ರ ಬಹು ಪ್ರಮುಖವಾದುದೆಂಬುದನ್ನು ನಾವು ಕಾಣುತ್ತೇವೆ.

೧೬. ಕಳ್ಳ ಭದ್ರನು ಶರಣ 'ನನ್ನಯ್ಯ'ನಾದದ್ದು :

ಬಸವಣ್ಣನವರು ತಮ್ಮ ಮಹಾಮನೆಯಲ್ಲಿ ಒಂದು ದಿನ ರಾತ್ರಿ ಲಿಂಗಾರ್ಚನೆ ಪ್ರಸಾದ ಅರ್ಪಣೆ ವಚನಾನುಭಾವದ ನಂತರ ಭಾವಲಿಂಗ ಪೂಜೆ ಅಂದರೆ ನಿದ್ರೆ ಗೈಯುತ್ತಿರುವಾಗ ಅವರ ಮನೆಯಲ್ಲಿ ಶರಣ ವೇಷಧಾರಿ ಕಳ್ಳನೊಬ್ಬನು ಪ್ರವೇಶ ಮಾಡಿದನು. ಬಸವಣ್ಣನವರ ಮಹಾಮನೆ ಯಾವಾಗಲೂ ಶರಣರಿಗಾಗಿ ತೆರೆದಿರುತ್ತಿತ್ತು. ಕಳ್ಳ ಭದ್ರನು ಪ್ರಧಾನಮಂತ್ರಿಯ ಮನೆಯಲ್ಲಿ ಧನ-ಕನಕ-ವಜ್ರ-ವೈಢೂರ್ಯಗಳಿದ್ದಿರಬಹುದೆಂಬ ಕಲ್ಪನೆಯಲ್ಲಿ ಕೊರಳಲ್ಲಿ ರುದ್ರಾಕ್ಷಿ ಮಾಲೆ, ಅರಿವೆಯಲ್ಲಿ ಇಷ್ಟಲಿಂಗ ರೂಪದ ಕಲ್ಲುಗುಂಡು ಕಟ್ಟಿಕೊಂಡಿದ್ದು, ಹಣೆಯ ಮೇಲೆ ವಿಭೂತಿ ಧರಿಸಿ ಪ್ರವೇಶ ಮಾಡಿದ್ದನು. ಮಹಾದ್ವಾರದಲ್ಲಿ ಕಾವಲು ಭಟರಿದ್ದರೂ ಕೂಡ, ಈತನ ವೇಷ-ಭೂಷಣ ಕಂಡು 'ಶರಣ'ನಿದ್ದರಬಹುದೆಂದು ಒಳಗೆ ಬಿಟ್ಟಿದ್ದರು. ವಚನ ಭಜನೆ-ಪ್ರಸಾದದ ತರುವಾಯ ಎಲ್ಲರೂ ನಿಶ್ಚಿಂತೆಯಿಂದ ಆನಂದವಾದ ಸುಖ ನಿದ್ರೆಯಲ್ಲಿದ್ದಾಗ ಕಳ್ಳ ಭದ್ರನು ವಿಶಾಲವಾಗಿದ್ದ ಮಹಾಮನೆಯ ಎಲ್ಲ ಕೋಣೆಗಳನ್ನು ಅಡ್ಡಾಡಿ ಹುಡುಕಿದರೂ ಏನೂ ಸಿಗಲಿಲ್ಲ. ಕೊನೆಗೆ

ಬಸವಣ್ಣನವರು ಮಲಗಿದ್ದ ಕೋಣೆಯ ಪ್ರವೇಶ ಮಾಡಿದನು. ಬಸವಣ್ಣನವರು 'ಶಿವಧ್ಯಾನ'ಗೈಯುತ್ತ ಶಿವಯೋಗ ನಿದ್ರೆಯಲ್ಲಿದ್ದರು. ಅವರ ಪಕ್ಕದ ಮಂಚದ ಮೇಲೆ ನೀಲಾಂಬಿಕೆ ತಾಯಿಯೂ ನಿದ್ರೆಯಲ್ಲಿದ್ದರು. ಅವರು ಕೊರಳಲ್ಲಿ ವಜ್ರದ ಆಭರಣ, ಕಿವಿಯಲ್ಲಿ ಬಂಗಾರದ ಬೆಂಡೋಲೆಗಳಿದ್ದವು. ಚಿನ್ನದ ತಂತಿಯಲ್ಲಿ ಮಾಡಿಸಿದ ರುದ್ರಾಕ್ಷಿ ಸರ, ಬಂಗಾರದ ಕರಡಿಗೆಯಲ್ಲಿ ಇಷ್ಟಲಿಂಗವಿದ್ದ ಲಿಂಗದಕಾಯಿ ಇದ್ದವು. ರಾಜಕುವರಿಯಾಗಿ ಬಿಜ್ಜಳನ ತಂಗಿಯಾಗಿ ಬೆಳೆದು ಬಂದಿದ್ದ ನೀಲಾಂಬಿಕೆಯು ಸಹಜವಾಗಿಯೇ ಸರ್ವಾಭರಣಭೂಷಿತೆಯಾಗಿದ್ದಳು.

ಕಳ್ಳ ಭದ್ರನು ತುಂಬಾ ಜಾಣ್ಮೆಯಿಂದ ನೀಲಾಂಬಿಕೆಯ ಕೊರಳಲ್ಲಿಯ ವಜ್ರಾಭರಣ-ಚಿನ್ನದ ಸರಗಳನ್ನು ಬಿಚ್ಚಿಕೊಂಡನು. ಪ್ರಕಾಶಮಾನವಾಗಿ ಮಿಂಚುತ್ತಿದ್ದ ಕಿವಿಗಳ ಬೆಂಡೋಲೆ ಬಿಚ್ಚಿಕೊಳ್ಳುತ್ತಿರುವಾಗ, ನೀಲಾಂಬಿಕೆಗೆ ಎಚ್ಚರವಾಗಿ-ಅಯ್ಯೋ ಕಳ್ಳ, ಕಳ್ಳ ಎಂದು ಕೂಗಿದಳು, ಕಳ್ಳ ಕೋಣೆಯಿಂದ ಹೊರಗೋಡಿದ. ಕಾವಲು ಭಟರು ಕೂಡಲೇ ಕಳ್ಳನನ್ನು ಹಿಡಿದು ತಂದರು. ಬಸವಣ್ಣನವರೂ ಎಚ್ಚರಾಗಿ ನೀಲಾಂಬಿಕೆಯೊಂದಿಗೆ ಕೋಣೆಯಿಂದ ಹೊರಬಂದರು.

ಕಳ್ಳ ಭದ್ರ ಥರ ಥರ ನಡುಗುತ್ತಿದ್ದ. ತನಗಾವ ಶಿಕ್ಷೆ ಕಾದಿದೆಯೋ ಎಂದು ಆತಂಕ-ಭಯದಲ್ಲಿ ತಲೆ ತಗ್ಗಿಸಿ ನಿಂತಿದ್ದ. ಭಟರ ದೀವಟಿಗೆಯ ಬೆಳಕಿನಲ್ಲಿ ಆತನ ವೇಷ ಭೂಷಣ ನೋಡಿ- ಈತ "ಶರಣ' ನಿದ್ದಾನೆಂದು ಬಸವಣ್ಣನವರು ಭಾವಿಸಿದರು. ನೀಲಾಂಬಿಕೆಯು ತನ್ನ ಕಿವಿಗಳಲ್ಲಿದ್ದ ಬೆಂಡೋಲೆಗೆ ಕೈಹಾಕಿದ್ದನ್ನು ಹೇಳಿದಾಗ, ಬಸವಣ್ಣನವರ ಅಂತರಂಗದಲ್ಲಿ ಪ್ರಜ್ಞೆ ಜಾಗೃತವಾಯಿತು. ಆ ಶರಣನನ್ನು ನೋಡಿ, ಪತ್ನಿಯ ಕಡೆ ತಿರುಗಿ ದೃಢನಿರ್ಧಾರದಿಂದ ಹೇಳಿದರು.

"ಒಡನಿರ್ದ ಸತಿಯೆಂದು ನಚ್ಚಿರ್ದೆನಯ್ಯಾ,
ಕೈವಿಡಿದ ಸಜ್ಜನೆಯೆಂದು ನಂಬಿರ್ದೆನಯ್ಯಾ
ಅಯ್ಯೋ ನಮ್ಮಯ್ಯನ ಕೈ ನೊಂದಿತು
ತೆಗೆದುಕೊಡು ಎಲೆ ನೀಲಾ ಬೆಂಡೋಲೆ ಕಿತ್ತಿ !
ಕಳ್ಳನ ಮನೆಗೊಬ್ಬ ಬಲುಗಳ್ಳ ಬಂದಡೆ
ಕೂಡಲಸಂಗಮದೇವನಲ್ಲದೆ ಆರೂ ಇಲ್ಲಾ "

ಬಸವಣ್ಣನವರ ಈ ನಿಷ್ಠುರ ನುಡಿಗಳಿಂದ ನೀಲಾಂಬಿಕೆಯು ಒಂದು ಕ್ಷಣ ಚಕಿತಳಾಗಿ ಬೆಂಡೋಲೆ ಬಿಚ್ಚಿ, ಆ ಶರಣವೇಷಧಾರಿ ಕಳ್ಳನ ಕೈಗೆ ಕೊಡಲು ಮುಂದಾದಳು. ಕಳ್ಳ ನಡುಗಿ ಹೋದ ! ತಾನು ಶರಣನಲ್ಲ, ತಾನೊಬ್ಬ ಕಳ್ಳನೆಂದೂ, ಲಿಂಗ, ರುದ್ರಾಕ್ಷಿ, ವಿಭೂತಿ ಧರಿಸಿಬಂದರೆ ಮಹಾಮನೆಯಲ್ಲಿ ನಿರಾತಂಕವಾಗಿ ಪ್ರವೇಶಿಸಬಹುದೆಂದು ಹೀಗೆ ಮಾಡಿದ್ದೇನೆ. ನನ್ನಿಂದ ತಪ್ಪಾಯ್ತು. ನಾನು ಕಳ್ಳ,

ನಾನು ಕೂಡಲಸಂಗಮ ದೇವರಲ್ಲ ಎಂದು ಕಣ್ಣೀರು ಹಾಕುತ್ತಾ ಹೇಳಿದನು. ಆಗ ಬಸವಣ್ಣನವರು "ಅಯ್ಯಾ, ನೀನು ಕಳ್ಳನಲ್ಲ, ನೀನು 'ನನ್ನಯ್ಯ' ನನ್ನನ್ನು ಎಚ್ಚರಿಸಿದ ಸಾಕ್ಷಾತ್ ಕೂಡಲಸಂಗಯ್ಯ ನೀನೇ ಇರುವಿ." ಎಂದು ಭಾವನಂದದಿಂದ ಅಪ್ಪಿಕೊಳ್ಳಲು, ಕಳ್ಳ ಭದ್ರನ ತನು-ಮನ-ಭಾವ ಪರಿವರ್ತನೆಗೊಂಡು ಆತ ನಿಜ ಶರಣ ನನ್ನಯ್ಯನೇ ಆಗಿಬಿಟ್ಟನು.

ಒಬ್ಬ ಮನುಷ್ಯ 'ಕಳ್ಳ' ನಾಗಬೇಕಾದರೆ ಆತನ ಜೀವನಲದಲ್ಲಿ ಕೊರತೆಗಳಿವೆ ಅದಕ್ಕಾಗಿ ಆತ ಕಳ್ಳತನಕ್ಕೆ ಕೈ ಹಾಕುತ್ತಾನೆ. ಕಳ್ಳನು ಮಹಾಮನೆಗೆ ಕಳ್ಳತನಕ್ಕೆ ಬರಬೇಕಾದರೆ, ಅವನಿಗೆ ಬೇಕಾಗಿರುವ ಚಿನ್ನಾಭರಣ, ವಜ್ರದ ಬೆಂಡೋಲೆಗಳು ನೀಲಾಂಬಿಕೆಯು ಮೈಮೇಲಿವೆ. ಅಂದಾಗ ಭದ್ರನು ಕಳ್ಳನಲ್ಲ. ಭದ್ರನು ಕಳ್ಳತನಕ್ಕೆ ಬರುವಂತೆ ಇಟ್ಟಿರುವ ಸಂಪತ್ತು ಹೊಂದಿರುವ ನಾವೇ ಮೊದಲು ಕಳ್ಳರು ಎಂಬ ಸತ್ಯ ದರ್ಶನವಾಯಿತು. ಈ ಘಟನೆಯಿಂದ ನೀಲಾಂಬಿಕೆಯ ಜೀವನದಲ್ಲಿ ಮಹತ್ತಾದ ಬದಲಾವಣೆಯಾಯಿತು. ಅಂದಿನಿಂದ ಚಿನ್ನಾಭರಣಗಳ ವ್ಯಾಮೋಹ ತೊರೆದಳು. ನಿಜ ಶರಣೆ ನೀಲಮ್ಮ, ನಿರಂಜನ ಶರಣೆ ನೀಲಾಂಬಿಕೆಯಾಗಿ ಪರಿವರ್ತಿತಳಾದಳು, ಮುಕ್ತಾಂಗನೆಯಾದಳು.

ಎನಗೇನೆಂಬೆನೆಂಬ ಸಂದೇಹ ಹರಿಯಿತ್ತು
ಆ ಸಂದೇಹ ಹರಿದು
ಅಪ್ರಮಾಣದೊಳಗೆ ಐಕ್ಯವಾದೆನೆಯ್ಯಾ ನಾನು
ಆನು ಅನುಭವ ಸುಖಿಯಾಗಿ
ಆ ಸುಖ ತೃಪ್ತಿಯಕಂಡು
ಬಯಲ ಸುಖವನುಂಡೆನಯ್ಯ ಬಸವಯ್ಯಾ
ಸಂಗಯ್ಯಾ, ನಾನು ಮುಕ್ತಂಗನೆಯಾದೆನು.

'ಅನುಭವ' ಕಲಿಸುವಂತಹ ಜೀವನ ಪಾಠವನ್ನು ಯಾವ ಗುರುವೂ ಕಲಿಸಲಾರ, ಎಂಬಂತೆ, ನೀಲಾಂಬಿಕೆಯು ಬಯಲಿನಂತೆ ನಿರ್ಮಲ, ಪರಿಶುದ್ಧವಾದ ಅನುಭಾವಿಯಾದಳು, ಲಿಂಗಾನುಭಾವಿಯಾದಳು.

೧೭. ಸದ್ಗೃಹಸ್ಥ ಸರಣ ಸಂಸಾರ :

ಬಸವಣ್ಣ ನೀಲಾಂಬಿಕೆ-ಗಂಗಾಂಬಿಕೆತಾಯಿಯವರದು ಅರಿವಿನ ಆಚರಣೆಯಿಂದ ಕೂಡಿದ ಸದ್ ಗೃಹಸ್ಥಶರಣ ಜೀವನವಾಗಿತ್ತು. ಬಸವಣ್ಣ ಗಂಗಾಂಬಿಕೆಯರಿಗೆ 'ಸಿದ್ಧರಸ' ಎಂಬ ಹೆಸರಿನ ಪುತ್ರನೊಬ್ಬ ಜನಿಸಿದ್ದನು. ಆತನು

ಬಾಲ್ಯದಲ್ಲಿಯೇ ಲಿಂಗೈಕ್ಯನಾದನೆಂದು ತಿಳಿದುಬರುತ್ತದೆ. ಇದೇ ರೀತಿಯಾಗಿ ಬಸವಣ್ಣ- ನೀಲಾಂಬಿಕೆಯರಿಗೆ ಒಬ್ಬ ಮಗ ಜನಿಸಿದ್ದು ಆತನಿಗೆ 'ಬಾಲ ಸಂಗಯ್ಯ' ಎಂಬ ನಾಮಕರಣ ಮಾಡಿದ್ದರು. ಆತನೂ ಬೆಳೆದು ದೊಡ್ಡವನಾಗಿ ವಚನಗಳನ್ನು ರಚಿಸಿದನೆಂದು ಹೇಳಲಾಗುತ್ತಿದೆ. 'ಅಪ್ರಮಾಣ ಕೂಡಲಸಂಗಮದೇವ' ಎಂಬುದು ಬಾಲಸಂಗಯ್ಯನ ವಚನ-ಅಂಕಿತವಾಗಿದೆ. ಈ ಕುರಿತು ಹೆಚ್ಚಿನ ಚಾರಿತ್ರಿಕ ವಿವರ ಸಿಗದೇ ಇದ್ದರೂ, ಈತನ ನೂರಾರು ವಚನಗಳು ಪ್ರಕಟವಾಗಿವೆ.

ಗಂಗಾಂಬಿಕೆಯ ಪುತ್ರ ಲಿಂಗೈಕ್ಯನಾದ ನಂತರ, ಬಸವಣ್ಣನವರು ಪತ್ನಿಗೆ ಸಮಾಧಾನ-ಸಾಂತ್ವನ ಮಾಡಿದ ಕುರಿತು ಮಾಹಿತಿ ದೊರಕುತ್ತದೆ. ಗಂಗಾಬಿಕೆಯ ಒಂದು ವಚನ ಹೀಗಿದೆ-

ಅವಳ ಕಂದ ಬಾಲಸಂಗ,
ನಿನ್ನ ಕಂದ ಚೆನ್ನಲಿಂಗ,
ಎಂದು ಹೇಳಿದರಮ್ಮಾ ಎನ್ನ ಒಡೆಯರು
ಫಲವಿಲ್ಲದ ಕಂದನಿರ್ಪನವಳಿಗೆ,
ಎನಗೆ ಫಲವಿಲ್ಲ, ಕಂದನಿಲ್ಲ
ಇದೇನೋ ದುಃಖದಂದುಗ
ಗಂಗಾಪ್ರಿಯ ಕೂಡಲಸಂಗಮದೇವಾ ?

ಗಂಗಾಂಬಿಕೆಯು ಚೆನ್ನಬಸವಣ್ಣನನ್ನೇ ಸ್ವಂತ ಮಗುವಿನಂತೆ ನೋಡಿಕೊಂಡಳೆಂದು ತಿಳಿಯುತ್ತದೆ. ಒಟ್ಟಿನಲ್ಲಿ ಜೀವನದಲ್ಲಿ ಬರುವ ನೋವು-ನಲಿವುಗಳನ್ನು 'ಸಂಗಯ್ಯನ ಪ್ರಸಾದ' ವೆಂದು ಸ್ವೀಕರಿಸಿ ನಿರ್ಲಿಪ್ತ ಜೀವನವನ್ನು ಸಾಗಿಸಿದವರು. ಬಸವಣ್ಣನವರು 'ಸತಿವಿಡಿದು ನಿರ್ವಾಣಸತಿ ಕಾಣುವ' ಗೃಹಸ್ಥ ಜೀವನವನ್ನು ಆದರ್ಶವಾಗಿ ಬದುಕಿದರು.

ನೀಲಾಂಬಿಕೆಯ ಜೀವನದಲ್ಲಿ ಪ್ರೇಮವು ವಾತ್ಸಲ್ಯವಾಗಿ ಪರಿವರ್ತನೆ-ಗೊಂಡು, ಸತಿ-ಪತಿಗಳಿಬ್ಬರೂ ಪರಸ್ಪರರಿಗೆ ಶಿಶುಗಳಾದೆವು ಎಂದು ಹೇಳುವಲ್ಲಿ ಮೋಹವು ನಿರ್ಮೋಹವಾಗುವ, ಕಾಮವು ನಿಷ್ಕಾಮವಾಗುವ ಹಂತಕ್ಕೆ ಅವರು ತಲುಪಿದ್ದನ್ನು ಕಾಣುತ್ತೇವೆ.

ಮಡದಿಯೆನ್ನಲಾಗದು ಬಸವಂಗೆ ಎನ್ನನು,
ಪುರುಷ ನೆನ್ನಲಾಗದು ಬಸವನ ಎನಗೆ,
ಉಭಯ ಕುಳವ ಹರಿದು

ಬಸವಂಗೆ ಆನು ಶಿಶುವಾದೆನು
ಬಸವನೆನ್ನ ಶಿಶುವಾದನು
ಪ್ರಮಥರು ಪುರಾತರು ಸಾಕ್ಷಿಯಾಗಿ
ಸಂಗಯ್ಯನಿಕ್ಕಿದ ದಿಬ್ಯವ ಮೀರದೆ
ಬಸವನೊಳಗಾನಡಗಿದೆ.

ಎಂದು ನೀಲಾಂಬಿಕಾ ತಾಯಿಯು ಹೇಳುವಲ್ಲಿ ಸಂಸಾರ ಜೀವನದಲ್ಲಿ ಪತಿ-ಪತ್ನಿಯರು ಪರಸ್ಪರರು ಕಾಮರಹಿತ-ಪ್ರೇಮದ ವಾತ್ಸಲ್ಯದ ಶಿಶುಗಳಂತಹ ಮನೋಸ್ಥಿತಿಗೆ ತಲುಪುತ್ತಾರೆ. 'ಪ್ರಣವ ಸ್ವರೂಪ ಬಸವನ ಕಂಡ ಬಳಿಕ ಆನು ಬಸವನ ಶಿಶುವಾದೆನಯ್ಯ ಸಂಗಯ್ಯ' ಎಂದು ನೀಲಾಂಬಿಕೆಯು ಹೇಳುವುದನ್ನು ನೋಡುತ್ತೇವೆ. ಇಂತಹ ಸಹಜ ಮಾಟಸ್ಥಲದ ಶರಣ ಜೀವನ ಇವರದಾಗಿತ್ತು.

೧೮. ಅಲ್ಲಮಪ್ರಭು-ಸಿದ್ಧರಾಮರ ಆಗಮನ :

ಬನವಸೆ ನಾಡಿನ ಅಲ್ಲಮ ಪ್ರಭು-ತನ್ನ ಯೌವನದಲ್ಲಿ ಕಾಮಲತೆಯನ್ನು ಮದುವೆಯಾಗಿ ಸುಖಮಯ ದಾಂಪತ್ಯ ಜೀವನ ಸಾಗಿಸುತ್ತಿರುವಾಗ, ಆಕಸ್ಮಿಕವಾಗಿ ಕಾಮಲತೆ ನಿಧನವಾದ ನಂತರ, ವೈರಾಗ್ಯ ತಾಳಿ ಹಿಮಾಲಯ ಪ್ರಾಂತಕ್ಕೆ ಹೋಗಿ ಯೋಗ ಸಿದ್ಧರ ಭೂಮಿಯಲ್ಲಿ ಯೋಗಸಿದ್ಧಿ ಪಡೆದು, ವ್ಯೋಮಕಾಯಸಿದ್ಧ ಪ್ರಭುವಾಗಿ ಸಹಸ್ತ ಯೋಗ ಸಿದ್ಧರಿಗೆ ಗುರುವಾಗಿದ್ದನು, ಚಾಲುಕ್ಯ ಸಾಮ್ರಾಜ್ಯದ ರಾಜಧಾನಿ ಕಲ್ಯಾಣದಲ್ಲಿ ಅನುಭವ ಮಂಟಪ, ಅಲ್ಲಿಯ ಬಸವಗುರುವಿನ ಸಾಧನೆಯನ್ನು ಚರಜಂಗಮರ ಮೂಲಕ ಅರಿತು ಕಲ್ಯಾಣದೆಡೆಗೆ ಬರುವಾಗ ಮಾರ್ಗಮಧ್ಯದಲ್ಲಿ ಸೊನ್ನಲಿಗೆಯ ಹಠಯೋಗಿ ಸಿದ್ಧರಾಮನಲ್ಲಿಗೆ ಬಂದನು, ಅಲ್ಲಿಂದ ಸಿದ್ಧರಾಮನೊಂದಿಗೆ ಕಲ್ಯಾಣಕ್ಕೆ ಬಂದು ಇಬ್ಬರೂ ಬಸವಣ್ಣನವರು ಕಟ್ಟಿದ್ದ ಭಕ್ತಿ ಸಾಮ್ರಾಜ್ಯವ ಕಂಡು, ಕಾಯಕಯೋಗಿಗಳಾಗಿದ್ದ ಶರಣ-ಶರಣೆಯನ್ನು ಕಂಡು ಬೆರಗಾದರು.

ಬಸವಣ್ಣನವರು ಅನಿಮಿಷಂಗೆ ಲಿಂಗದೀಕ್ಷೆ ಮಾಡಿದ್ದರು. ಆ ಅನಿಮಿಷರಿಂದ ಲಿಂಗವಪಡೆದುಕೊಂಡು ಬಂದಿದ್ದ ಅಲ್ಲಮರು ಪರಮಗುರು ಸಂಗನಬಸವಣ್ಣನ ಸಾನಿಧ್ಯದಲ್ಲಿ ಸದ್ಭಕ್ತರಾದರು. ಲಿಂಗಾಂಗಯೋಗ ಸಾಧಿಸಿ ಸ್ವಯ-ಚರ-ಪರ ಜಂಗಮವಾದರು. ಹಠಯೋಗಿ ಸಿದ್ಧರಾಮರು ಮಹಾಜ್ಞಾನಿ ಷಟ್‌ಸ್ಥಲ ಚಕ್ರವರ್ತಿ ಚೆನ್ನಬಸವಣ್ಣನವರಿಂದ ಇಷ್ಟಲಿಂಗ ದೀಕ್ಷೆ ಹೊಂದಿ, ಸಿದ್ಧರಾಮೇಶ್ವರ ಶರಣರಾದರು, ಶಿವಯೋಗಿ ಸಿದ್ಧರಾಮರೆಂದು ಖ್ಯಾತರಾದರು.

"ಮಹಾಮಹಿಮ ಸಂಗನಬಸವಣ್ಣನು
ಎನಗೆಯೂ ಗುರು, ನಿನಗೆಯೂ ಗುರು
ಜಗವೆಲ್ಲಕ್ಕೆಯೂ ಗುರುಕಾಣಾ
ಗುಹೇಶ್ವರಾ"

ಎಂದು ಅಲ್ಲಮಪ್ರಭುಗಳು ಭಕ್ತಿಭಾವದಿಂದ ತಮ್ಮ ಪರಮಗುರು ಸಂಗನಬಸವಣ್ಣನವರನ್ನು ಸ್ತುತಿ ಮಾಡಿದರು.

"ಕರುಣಿ ಬಸವಾ, ಕಾಲಹರ ಬಸವಾ
ಕರ್ಮಹರ ಬಸವಾ, ನಿರ್ಮಳ ಬಸವಾ
ಶಿವಜ್ಞಾನಿ ಬಸವಾ
ನಿಮ್ಮ ಧರ್ಮವಯ್ಯಾ ಈ ಭಕ್ತಿಯ ಪಥವು
ಕರುಣಿ ಕಪಿಲಸಿದ್ಧ ಮಲ್ಲಿಕಾರ್ಜುನಾ
ನಿಮಗೂ ಎನಗೂ ಬಸವಣ್ಣನ ಧರ್ಮವಯ್ಯ"

ಎಂದು ಶರಣ ಸಿದ್ಧರಾಮೇಶ್ವರರು ತಮ್ಮ ಗುರುವಿನ (ಚೆನ್ನಬಸವಣ್ಣನ) ಗುರು, ಪರಮಗುರು ಬಸವಣ್ಣನವರನ್ನು ಸ್ತುತಿಸಿ, ತಾವು ಬಸವಧರ್ಮಿಯರೆಂದು ಹೇಳಿ ಕೊಳ್ಳುತ್ತಾರೆ. ಬಸವಣ್ಣ–ನೀಲಮ್ಮನವರನ್ನು ತಂದೆ–ತಾಯಿಯರೆಂದು ಸ್ತುತಿಸುತ್ತಾರೆ.

ಎಮ್ಮಪ್ಪ ಬಸವಣ್ಣ ಎಮ್ಮವ್ವೆ ನೀಲಮ್ಮ
ಎಮ್ಮಯ್ಯ ಪ್ರಭುರಾಯ ಚೆನ್ನಬಸವ
ಇನ್ನುಳಿದ ಶರಣರ ಚರಣಕ್ಕೆ ಶರಣೆಂದು
ಧನ್ಯನಾದೆನು ಗುರುವೆ ಯೋಗಿನಾಥ ॥

ಸಿದ್ಧರಾಮೇಶ್ವರರು ತಮ್ಮ ಯೋಗಾಂಗ ತ್ರಿವಿಧಿಯಲ್ಲಿ ವರ್ಣಿಸಿರುವುದನ್ನು ಕಾಣುತ್ತೇವೆ. ಅಲ್ಲಮಪ್ರಭುಗಳು ಅನುಭವ ಮಂಟಪದ ಅಧ್ಯಕ್ಷರಾಗಿ, ಶರಣರ ಚರ್ಚಾ–ಗೋಷ್ಠಿಯಲ್ಲಿ ಅನುಭಾವ ಮಾರ್ಗದರ್ಶಕರಾಗಿ ಕಾರ್ಯನಿರ್ವಹಿಸಿದರು.

೧೯. ಶರಣ ಸಂಕುಳದಲ್ಲಿ ನೀಲಾಂಬಿಕೆ :

ಕಲ್ಯಾಣದಲ್ಲಿ ಬಸವಣ್ಣನವರು "ಮಹಾಮನೆ' ಕಟ್ಟಿ ಅನುಭವ ಮಂಟಪ ಸ್ಥಾಪಿಸಿದಾಗ ಇಡೀ ದೇಶಾದ್ಯಂತದಿಂದ ಹಿರಿಯರು–ಕಿರಿಯರು, ಸ್ತ್ರೀ–ಪುರುಷರು. ವಿಪ್ರ–ಅಂತ್ಯಜರೆಂಬ ಭೇದಭಾವವಿಲ್ಲದೇ ಸಹಸ್ರಾರು ಶರಣರು ಕಲ್ಯಾಣಕ್ಕೆ ಆಗಮಿಸಿದರು. ಅಕ್ಕನಾಗಮ್ಮ ಮಹಾಮನೆಯ ಮಹಾತಾಯಿಯಾಗಿ, ಗಂಗಾಂಬಿಕೆ

ಕ್ರಿಯಾಮೂರ್ತಿಯಾಗಿ, ನೀಲಾಂಬಿಕೆ ಜ್ಞಾನಮೂರ್ತಿಯಾಗಿ. ಚೆನ್ನಬಸವಣ್ಣ ತತ್ವ ಮೂರ್ತಿಯಾಗಿ ಹಗಲಿರುಳು ಎಲ್ಲರ ಸೇವೆಗೈಯುತ್ತಿದ್ದರು. ಅಕ್ಕಮಹಾದೇವಿ, ಬೊಂತಾದೇವಿಯಂತಹ ವೈರಾಗ್ಯಮೂರ್ತಿಗಳನ್ನು ಮಕ್ಕಳಂತೆ ನೋಡಿಕೊಂಡರು. ವಯೋವೃದ್ಧ ಶರಣದಂಪತಿಗಳಾದ ದಾಸಿಮಯ್ಯ-ದುಗ್ಗಳೆ, ಚೆನ್ನಯ್ಯ, ಕಕ್ಕಯ್ಯ, ಶಿವನಾಗಮಯ್ಯ, ಹರಳಯ್ಯ, ಕಲ್ಯಾಣಮ್ಮ, ಮಾಚಿದೇವ, ಚೌಡಯ್ಯ, ಗುಂಡಯ್ಯ, ಕೇತಲದೇವಿ ಮುಂತಾದವರೆಲ್ಲ ಸಾಮರಸ್ಯದ ಶರಣಜೀವನ ಬಾಳಿದರು.

ಬಹುತೇಕ ಶರಣ ಶರಣೆಯರು ಹೆತ್ತವ್ವೆ ನೀಲಮ್ಮ, ಗುರುತಾಯಿ ನೀಲವ್ವೆ, ಅವ್ವ ನೀಲವ್ವೆ, ನಿಜಶರಣೆ ನೀಲಾಂಬಿಕೆ, ನೀಲಲೋಚನೆಯಮ್ಮ, ನೀಲಮ್ಮತಾಯಿ, ನೀಲಾಂಬೆ ಎಂದು ಆತ್ಮೀಯತೆಯಿಂದ ಕಾಣುತ್ತಿದ್ದರು. ಬಸವಣ್ಣ- ನೀಲಮ್ಮನವರು ಶರಣ ಸಂಕುಳಕ್ಕೆಲ್ಲ 'ಅಪ್ಪ-ಅವ್ವ'ರಾಗಿದ್ದರು. ಅನ್ನದಾಸೋಹ, ಜ್ಞಾನ ದಾಸೋಹ, ಅನುಭಾವ ದಾಸೋಹ ಬಸವ ಮಹಾಮನೆಯಲ್ಲಿ ನಿರಂತರವಾಗಿ ನಡೆಯುತ್ತಿತ್ತು.

ಅಲ್ಲಮನ ಸಂಗ, ಅಜಗಣ್ಣನ ಸಂಗ,
ಕಕ್ಕಯ್ಯನ ಸಂಗ, ಚಿಕ್ಕಯ್ಯನ ಸಂಗ,
ಎಲ್ಲರ ಸಂಗ, ಯತಿಗಳ ಸಂಗ, ಜತಿಗಳ ಸಂಗ,
ಮಾನ್ಯರ ಸಂಗ, ಮುಖ್ಯರ ಸಂಗ
ಸಂಗಯ್ಯಾ, ಎನ್ನ ಸಂಗ
ಎನ್ನ ಬಸವಯ್ಯನ ಸಂಗ

ಇಂತಪ್ಪ ಸರ್ವ ಶರಣರ ಸಂಗದಲ್ಲಿ ನೀಲಾಂಬಿಕೆ ತಾಯಿಯವರು ಇವರೆಲ್ಲರ 'ಕಾರುಣ್ಯ ಪ್ರಸಾದವನುಂಡು ಮಹಾಮನೆಯಲ್ಲಿ ಸುಖಿಯಾದೆ ಸಂಗಯ್ಯ' ಎಂದು ಸದುವಿನಯದಿಂದ ಹೇಳಿರುವುದನ್ನು ನೋಡುತ್ತೇವೆ.

ಅನುಭವ ಮಂಟಪದ ಶರಣ ಸಂಕುಳದಲ್ಲಿ ಬಸವಣ್ಣನವರದು ಭಕ್ತಿಯ ಸಂಪತ್ತು, ಅಲ್ಲಮಪ್ರಭುವಿನದು ವೈರಾಗ್ಯ ಸಂಪತ್ತು, ಚೆನ್ನಬಸವಣ್ಣನದು ಜ್ಞಾನ ಪ್ರಸಾದ ಸಂಪತ್ತು, ಮಡಿವಾಳ ಮಾಚಿದೇವರದು ನಿರ್ಮಲ ಕ್ರಿಯಾ ಸಂಪತ್ತು, ಸಕಲೇಶ ಮಾದರಸರದು ಶಾಂತಿಯ ಸಂಪತ್ತು, ಅಕ್ಕನಾಗಮ್ಮನವರದು ಯೋಗ ಸಂಪತ್ತು. ಈ ಎಲ್ಲ ಅನುಭಾವಿಗಳ ಸಂಗದಲ್ಲಿ ನೀಲಾಂಬಿಕೆಯವರದು **'ಲಿಂಗಪೂಜೆಯ ಸಂಪತ್ತು'** ಎಂದು ಪ್ರಸಿದ್ಧವಾಯಿತು. ಇಷ್ಟಲಿಂಗ ಪೂಜೆಯ ಆನಂದದಲ್ಲಿ ಹೇಳುತ್ತಾಳೆ.

ಬೆಳಗಿನ ಪ್ರಭೆ ಥಳ ಥಳಿಸಿ ಹೊಳೆಯಲು
ಆ ಬೆಳಗಿನೊಳಗೆ ಬೆಳೆದ ಶಿಶುವಾನಯ್ಯ
ಕಳೆಯರಿಯದೆ ಬೆಳೆದೆನು, ತಿಳುಹಿಲ್ಲದೆ ನಿಂದೆನು
ಸಂಗಯ್ಯನಲ್ಲಿ
ಬಸವಾ ಬಸವಾ ಬಸವಾ ಎನುತಿರ್ದೆನು.

ಈ ರೀತಿಯಾಗಿ ನೀಲಾಂಬಿಕಾ ತಾಯಿಯು ಶರಣರ ಸಂಗದಲ್ಲಿ ಅನುಭಾವಿಯಾಗಿ, ಲಿಂಗಾನಂದದ ನಿಬ್ಬೆರಗಿನಲ್ಲಿ ಬಸವಣ್ಣನವರ ಧ್ಯೇಯಾದರ್ಶಗಳಿಗೆ ಸೇವೆಗೈಯುತ್ತಾ ಮಮತೆಯ ತಾಯಿಯಾಗಿದ್ದಳು.

೨೦. ಕಲ್ಯಾಣದ ಘನವೈಭವ : ಬಸವ ಮಹಾಮನೆ ದರ್ಶನ :

ಮಹಾಮಹಿಮ ಸಂಗನಬಸವಣ್ಣ, ಗುರುವಿನ ಗುರು ಪರಮಗುರು ಬಸವಣ್ಣ ಜಗವೆಲ್ಲಕ್ಕೆಯೂ ಗುರುವಾಗಿ, ವಿಶ್ವಗುರುವಾಗಿ ಲೋಕ ಕಲ್ಯಾಣ ಗೈದ ಪಾವನಮೂರ್ತಿ. ಬಸವಣ್ಣನವರು ಸಾಧನೆಯ ಕಲ್ಯಾಣದ ಘನವೈಭವವನ್ನು ಅಲ್ಲಮಾದಿ ಶರಣರು ಭಕ್ತಿಭಾವದಿಂದ ವರ್ಣಿಸಿದ್ದಾರೆ.

ಕಲ್ಯಾಣವೆಂಬ ಪ್ರಣತಿಯಲ್ಲಿ
ಭಕ್ತಿ ರಸವೆಂಬ ತೈಲವನೆರದು
ಆಚಾರವೆಂಬ ಬತ್ತಿಯಲ್ಲಿ
ಬಸವಣ್ಣನೆಂಬ ಜ್ಯೋತಿಯ ಮುಟ್ಟಿಸಲು
ತೊಳಗಿ ಬೆಳಗುತಿರ್ದುದಯ್ಯ ಶಿವನ ಪ್ರಕಾಶ !
ಆ ಬೆಳಗಿನೊಳಗೊಪ್ಪತಿರ್ದರಯ್ಯಾ
ಅಸಂಖ್ಯಾತ ಭಕ್ತ ಮಹಾಗಣಂಗಳು !
ಶಿವಭಕ್ತರಿರ್ದ ಕ್ಷೇತ್ರ
ಅವಿಮುಕ್ತ ಕ್ಷೇತ್ರವೆಂಬುದು ಹುಸಿಯೇ ?
ಶಿವಭಕ್ತರಿರ್ದ ದೇಶವು ಪಾವನವೆಂಬುದು ಹುಸಿಯೆ ?
ಗುಹೇಶ್ವರ ಲಿಂಗದಲ್ಲಿ ಎನ್ನ ಪರಮಾರಾಧ್ಯ
ಸಂಗನ ಬಸವಣ್ಣನ ಕಂಡು ಬದುಕಿದೆ ಕಾಣಾ
–ಅಲ್ಲಮ ಪ್ರಭುದೇವರು

ಅಯ್ಯಾ ನಿಮ್ಮ ಶರಣರು ಮೆಟ್ಟಿದ ಧರೆ ಪಾವನವಯ್ಯಾ
ಅಯ್ಯಾ ನಿಮ್ಮ ಶರಣರು ಇದ್ದ ಪುರವೆ ಕೈಲಾಸವಯ್ಯಾ
ಅಯ್ಯಾ ನಿಮ್ಮ ಶರಣರು ನಿಂದುದೆ ನಿಜ ನಿವಾಸವಯ್ಯಾ
ಚೆನ್ನಮಲ್ಲಿಕಾರ್ಜುನಯ್ಯಾ
ನಿಮ್ಮ ಶರಣ ಬಸವಣ್ಣನಿರ್ದ ಕ್ಷೇತ್ರವೇ
ಅವಿಮುಕ್ತ ಕ್ಷೇತ್ರವಾಗಿ
ಆನು ಅಂಗನಬಸವಣ್ಣನ ಶ್ರೀಪಾದಕ್ಕೆ
ನಮೋ ನಮೋ ಎನುತಿರ್ದೆನು.

–ಅಕ್ಕಮಹಾದೇವಿ ತಾಯಿ

ನಿಮ್ಮ ಸಂಗನಬಸವಣ್ಣ ಬಂದು
ಕಲ್ಯಾಣದಲ್ಲಿ ಮನೆಯಕಟ್ಟಿದರೆ
ಮರ್ತ್ಯಲೋಕವೆಲ್ಲವೂ ಭಕ್ತಿ ಸಾಮ್ರಾಜ್ಯವಾಯಿತ್ತು
ಆ ಮನೆಗೆ ತಲೆಬಾಗಿ ಹೊಕ್ಕವರೆಲ್ಲರೂ
ನಿಜಲಿಂಗಪದವಂ ಪಡೆದರು.
ಕಪಿಲಸಿದ್ಧ ಮಲ್ಲಿನಾಥಾ,
ನಿಮ್ಮ ಶರಣ ಸಂಗನಬಸವಣ್ಣನ ಮಹಾಮನೆಗೆ
ನಮೋ ನಮೋ ಎಂದು ಬದುಕಿದೆನು

–ಸಿದ್ಧರಾಮೇಶ್ವರರು

೨೧. ಶೀಲವಂತ–ಲಾವಣ್ಯರ ಕಲ್ಯಾಣ ಮಹೋತ್ಸವ :

ಕಲ್ಯಾಣದ ಅನುಭವ ಮಂಟಪದ ಶರಣ ಸಂಕುಳದಲ್ಲಿ ಶರಣ ದಂಪತಿಗಳಾದ ಸಮಗಾರ ಕಾಯಕದ ಹರಳಯ್ಯ–ಕಲ್ಯಾಣಮ್ಮ ದಂಪತಿಗಳು ಹಾಗೂ ಅವರ ಮಗ ಶೀಲವಂತಯ್ಯನವರು ಇದ್ದರು. ಚಮ್ಮಾವುಗೆ ಕಾಯಕ ಕೈಕೊಂಡು ಬಸವಗುರುವಿನ ಸಾನಿಧ್ಯದಲ್ಲಿ ಶಿವಶರಣರಾಗಿ, ಜೀವನ ನಡೆಸುತ್ತಿದ್ದರು. ಒಂದು ದಿನ ಹರಳಯ್ಯ ಶರಣರು ಚಮ್ಮಾವುಗೆ ಮಾರಾಟ ಮಾಡಿ, ಕಲ್ಯಾಣದ ರಾಜಬೀದಿಯಲ್ಲಿ ಬರುತ್ತಿದ್ದಾಗ, ಎದುರಿಗೆ ಅಶ್ವಾರೂಢರಾಗಿ ಅರಮನೆಯಿಂದ ಮಹಾಮನೆಗೆ ತೆರಳುತ್ತಿದ್ದ ಪ್ರಧಾನ ಮಂತ್ರಿ ಬಸವಣ್ಣನವರನ್ನು ಕಂಡು **'ಶರಣು ಬಸವ ತಂದೆ'** ಎಂದು ಕೈಮುಗಿಧರು. ಹರಳಯ್ಯ ಶರಣರನ್ನು ನೋಡಿದ ಬಸವಣ್ಣನವರು ಕೂಡಲೇ **'ಶರಣು–ಶರಣಾರ್ಥಿ ಹರಳಯ್ಯ ತಂದೆ'** ಎಂದು ತಲೆಬಾಗಿ ಕರಮುಗಿದರು, ಹಾಗೆಯೇ ಮಹಾಮನೆಗೆ ತೆರಳಿದರು.

ಶರಣ ಹರಳಯ್ಯನವರು ದಿಗ್ಭ್ರಾಂತರಾಗಿ ನಿಂತರು, ತನ್ನಂತಹ ಅಸ್ಪೃಶ್ಯ ಜಾತಿಯವರನ್ನು ಉದ್ಧಾರಗೈದ ಮಹಾಗುರುವು ತನ್ನ **'ಒಂದು ಶರಣು'** ಶಬ್ದಕ್ಕೆ ಪ್ರತಿಯಾಗಿ **ಎರಡು ಶರಣು** ಹೇಳಿ, ಒಂದು ಶರಣಿನ ಹಚ್ಚಿನಭಾರ ಹೊರಿಸಿದರಲ್ಲಾ ಎಂದು ಮುಗ್ಧಭಕ್ತಿಯ ಶರಣ ಹರಳಯ್ಯ ದುಃಖಿತರಾದರು. ಈ ಭಾರ ಇಳಿಸುವದೆಂತು ? ಎಂದು ಚಿಂತಿಸುತ್ತಾ ಮನೆಗೆ ಬಂದರು. ಮಡದಿ ಕಲ್ಯಾಣಮ್ಮ ಪತಿಯ ಚಿಂತೆಯ ಕಾರಣವನ್ನು ಅರಿತು, ಬಸವಗುರುವನ್ನು ಧ್ಯಾನಿಸಿ ಪರಿಹಾರ ಸೂಚಿಸಿದಳು.

ಮಡದಿ ಕಲ್ಯಾಣಮ್ಮ ತೊಡಕು ಬಿಡಿಸಿದಳಾಕೆ
ಗಡನೊಂದು ಜೋಡು ಕೆರ ಮಾಡಿ । ಬಸವರಿಗೆ
ಒಡೆಯಾ ಮಚ್ಚೆಂದು ಅರ್ಪಿಸಿರಿ ॥

ಹರಳಯ್ಯ – ಕಲ್ಯಾಣಮ್ಮ ದಂಪತಿಗಳು ತಮ್ಮ ತಮ್ಮ ಒಂದೊಂದು ತೊಡೆಗಳ ಚರ್ಮ ಸುಲಿದು ತೆಗೆದು, ಸುಂದರವಾದ ಚಮ್ಮಾವುಗೆಗಳ ಮಧ್ಯದಲ್ಲಿ ಹೊಲಿದು, ರೇಶ್ಮೆದಾರದ ಕಸೂತಿ– ಗೊಂಡೆಗಳನ್ನು ಹಚ್ಚಿ ಅಲಂಕಾರಮಾಡಿ ಸಿದ್ಧಗೊಳಿಸಿದರು. ಮಗ ಶೀಲವಂತಯ್ಯ

ಬಸವನ ನೆನೆ ಮನವೆ । ಬಸವ ಎನು ನಾಲಿಗೆಯೆ
ಬಸವನ ಪಾದ ಪೂಜೆ ಮಾಡೈ ಕರವೆ ।
ಬಸವ ಗುರು ಲಿಂಗ ಚರವೆಂದು ॥

ಎಂದು ಭಕ್ತಿಯಿಂದ ಹಾಡುತ್ತಾ ತಂದೆ–ತಾಯಿಯರೊಂದಿಗೆ ಗುರು ಬಸವಣ್ಣನವರ ಮಹಾ ಮನೆಗೆ ಬಂದರು.

ಶರಣ ಹರಳಯ್ಯ–ಕಲ್ಯಾಣಮ್ಮನವರು ಮುಂಜಾವಿನಲ್ಲಿ ಮಹಾಮನೆಯ ದ್ವಾರದಲ್ಲಿ ಬಂದಿರುವುದನ್ನು ಅಪ್ಪಣ್ಣ ಶರಣರಿಂದ ಅರಿತ ಬಸವಣ್ಣನವರು ಲಿಂಗಪೂಜೆಯಿಂದೆದ್ದು ನೀಲಾಂಬಿಕೆಯೊಂದಿಗೆ ಹೊರಬಂದು, ಶರಣದಂಪತಿಗಳ ಪಾದಕ್ಕೆ ನೀರೆರೆದು ವಿಭೂತಿ–ಪುಷ್ಪವ ಧರಿಸಿ, ಒಳಗೆ ಕರೆದೊಯ್ದರು.

ಹರಳಯ್ಯ ಶರಣರು ರೇಶ್ಮೆ ಬಟ್ಟೆಯಲ್ಲಿ ಸುತ್ತಿ ತಂದಿದ್ದ ಚಮ್ಮಾವುಗೆಯನ್ನು ಗುರು ಬಸವರ ಪಾದದ ಹತ್ತಿರ ಇಟ್ಟು, ಧರಿಸಲು ಕೈಮುಗಿದು ಕೇಳಿಕೊಂಡರು. ಆ ಸುಂದರ ಚಮ್ಮಾವುಗೆ ಕಂಡು, ಕೈಗೆತ್ತಿಕೊಂಡ ಬಸವಣ್ಣನವರು ಅವುಗಳನ್ನು ಸೂಕ್ಷ್ಮವಾಗಿ ದೃಷ್ಟಿಸಿ, ಶರಣರಿಂದ ನಿಜಸಂಗತಿ ಕೇಳಿ ತಿಳಿದುಕೊಂಡು, ಶರಣ

ದಂಪತಿಗಳ ಮುಗ್ಧ ಭಕ್ತಿ ಕಂಡು ಭಾವುಕರಾಗಿ, ಚಮ್ಮಾವುಗೆಗಳನ್ನು ಕಣ್ಣಿಗೊತ್ತಿಕೊಂಡು ತಮ್ಮ ತಲೆಯ ಮೇಲೆ ಇರಿಸಿಕೊಂಡರು. ಭಾವಾನಂದದಲ್ಲಿ ಬಸವಗುರುವಿನ ವಚನವಾಣಿ ಹೊರ ಹೊಮ್ಮಿತು-

ನಿಮ್ಮ ಶರಣರ ಚಮ್ಮಾವುಗೆಗೆ
ಪೃಥ್ವಿ ಸಮಬಾರದು, ಸರಿಯಲ್ಲ ನೋಡಾ !
ಕೂಡಲಸಂಗಮದೇವಾ
ನಿಮ್ಮ ಶರಣರ ಚಮ್ಮಾವುಗೆಗೆ !

ಎಂದು ಹರ್ಷದೋಳ್ ಓಲಾಡಿದರು. ಕಂಗಳಿಂದ ಆನಂದಾಶ್ರು ಹರಿಯ-ತೊಡಗಿದವು. ಮಹಾಮನೆಯಲ್ಲಿದ್ದ ಎಲ್ಲ ಶರಣ- ಶರಣೆಯರು ಆಶ್ಚರ್ಯಗೊಂಡು ಕೈಮುಗಿದು ನಿಂತಿದ್ದರು.

ಅಪ್ಪ ಬಸವಣ್ಣನವರು ' ಈ ಚಮ್ಮಾವುಗೆಗಳು ಕೂಡಲಸಂಗಮದೇವಂಗೆ ಅರ್ಪಿತ' ಎಂದು ಹೇಳಿ ಗೌರವದಿಂದ ಹರಳಯ್ಯ-ಕಲ್ಯಾಣಮ್ಮ ದಂಪತಿಗಳಿಗೆ ಮರಳಿಕೊಟ್ಟರು. ಶರಣ ಹರಳಯ್ಯನವರು ಚಮ್ಮಾವುಗೆಗಳನ್ನು ಬಟ್ಟೆಯಲ್ಲಿ ಸುತ್ತಿ, ತಲೆಯ ಮೇಲಿರಿಸಿಕೊಂಡು ತಮ್ಮ ಮನೆಯತ್ತ ಸಾಗುತ್ತಿರುವಾಗ, ಮಾರ್ಗ ಮಧ್ಯದಲ್ಲಿ ಬ್ರಾಹ್ಮಣ ಮಧುವರಸ ಮಂತ್ರಿಯು-ಅಟ್ಟಹಾಸದಿಂದ ಅವನ್ನು ಕಿತ್ತುಕೊಂಡು ಕಾಲಲ್ಲಿ ಹಾಕಿಕೊಳ್ಳಲು ಹೋದಾಗ, ಒಮ್ಮೆಲೆ ಆತನ ಶರೀರದಲ್ಲಿ ಬೆಂಕಿಯಿಟ್ಟಂತಾಗಿ ಉರಿ, ಉರಿ ಎಂದು ಚೀರುತ್ತಾ ವಿಲವಿಲನೆ ಒದ್ದಾಡತೊಡಗಿದನು. ಹರಳಯ್ಯ ಶರಣರು ಚಮ್ಮಾವುಗೆ ತಕ್ಕೊಂಡು ತಮ್ಮ ಮನೆಗೆ ಮರಳಿದರು.

ಅತ್ತ ಮಧುವರಸನನ್ನು ರಾಜಭಟರು ಆತನ ಮಹಲಿಗೆ ಒಯ್ದರು. ರಾಜ ವೈದ್ಯರು ಎಷ್ಟೇ ಔಷಧೋಪಚಾರ ಮಾಡಿದರೂ ಗುಣವಾಗಲಿಲ್ಲ. ಪುರೋಹಿತ- ಪಂಡಿತರು ಎಲ್ಲಾ ನದಿಗಳ ಜಲತಂದು ಪ್ರೋಕ್ಷಣೆ ಮಾಡಿದರೂ, ದೇವಾಲಯಗಳ ತೀರ್ಥತಂದು ಸಿಂಪಡಿಸಿದರೂ ಗುಣವಾಗಲಿಲ್ಲ. 'ಶರಣರೊಡನೆ ಮರೆತು ಸರಸವಾಡಿದರೆ ಸುಣ್ಣದ ಕಲ್ಲು ಮಡಿಲಲ್ಲಿ ಕಟ್ಟಿಕೊಂಡು ಮಡುವ ಬಿದ್ದಂತಹ ಸ್ಥಿತಿ' ಮಧುವರಸರಿಗಾಗಿತ್ತು. ಅವರ ಮಗಳು ಲಾವಣ್ಯವತಿಯು ಪ್ರಧಾನಮತ್ರಿ ಬಸವಣ್ಣನವರ ಮಹಾಮನೆಗೆ ಬಂದು ಹರಳಯ್ಯ ಶರಣರ ಚಮ್ಮಾವುಗೆಯನ್ನು ದುರಹಂಕಾರದಿಂದ ಮೆಟ್ಟಿದ ಪ್ರಸಂಗ ತಿಳಿಸಿ, ಅದರಿಂದಾದ ಈ ತೊಂದರೆಗೆ ಪರಿಹಾರವನ್ನು ಸೂಚಿಸಲು ವಿನಮ್ರವಾಗಿ ಕೇಳಿಕೊಳ್ಳಲು, ಕರುಣಾಸಾಗರ ಬಸವಣ್ಣನವರು- 'ಯಾವ ಶರಣರ ಕಾಯಕವನ್ನು ಕೀಳಾಗಿ

ಕಂಡು, ಕುಲಮದದಿಂದ ಹರಳಯ್ಯ ಶರಣರಿಗೆ ಅವಮಾನ ಮಾಡಿರುವರೋ, ಅದೇ ಶರಣರ ಮನೆಗೆ ಹೋಗಿ, ಅವರ ಚಮ್ಮಾವುಗೆ ಕಾಯಕದ ಕರಿಬಾನೆಯ ನೀರು ತಂದು ಸ್ನಾನ ಮಾಡಿಸಿದರೆ ನಿಮ್ಮ ತಂದೆಯ ತಾಪ ದೂರಾಗಬಹುದು' ಎಂದು ಸಲಹೆ ಮಾಡಿದರು.

ಲಾವಣ್ಯಳು ಶರಣ ಹರಳಯ್ಯ-ಕಲ್ಯಾಣಮ್ಮನವರ ಮನೆಗೆ ಹೋಗಿ, 'ಕಾಯಕದ ಕರಿಬಾನೆಯ ಜಲ' ಕೇಳಿಪಡೆದು ತಂದು, ತಂದೆ ಮಧುವರಸರ ಸ್ನಾನದ ನೀರಿಗೆ ಬೆರೆಸಿ, ಸ್ನಾನಮಾಡಿಸಲು ಅವರ ತನು-ಮನ-ಭಾವಗಳ ತಾಪ ಶಾಂತವಾಯಿತು. ಇದರರ್ಥ ಅವರಲ್ಲಿದ್ದ ಅಷ್ಟಮದಗಳು, ಷಡ್‌ಭ್ರಮೆಗಳು ಅಳಿದವು. ಶರಣರ ಕಾಯಕ ಗೌರವ- ಕಾಯಕ ದೈವತ್ವದ ಅರಿವು ಉಂಟಾಯಿತು. ತನ್ನ ಕುಟುಂಬ ಪರಿವಾರದೊಂದಿಗೆ ಹರಳಯ್ಯ ಶರಣರ ಮನೆಗೆ ಹೋಗಿ ಪಶ್ಚಾತ್ತಾಪ-ದಿಂದ ಕ್ಷಮೆ ಕೇಳಿದರು. ಅಂದೇ ಮಧುವರಸರು ಪತ್ನಿ ಹಾಗೂ ಮಗಳೊಂದಿಗೆ ಅನುಭವ ಮಂಟಪಕ್ಕೆ ಬಂದು ಬಸವಗುರುವಿನ ಸಾನಿಧ್ಯದಲ್ಲಿ ಇಷ್ಟಲಿಂಗ ದೀಕ್ಷೆ ಪಡೆದು ಶರಣರಾದರು. ಹರಳಯ್ಯ ಮಧುವರಸರ ಭಕ್ತಿಬಾಂಧವ್ಯವು ಹಾಗೆಯೇ ಮುಂದುವರೆದು, ಮಧುವರಸರ ಮಗಳು ಲಾವಣ್ಯಳಿಗೂ-ಹರಳಯ್ಯನವರ ಮಗ ಶೀಲವಂತಯ್ಯನಿಗೂ ಅನುಭವ ಮಂಟಪದಲ್ಲಿ ಕಲ್ಯಾಣ ಮಹೋತ್ಸವ ಜರುಗಿತು. ವರ್ಣವಾದಿ ಜಾತಿವಾದಿಗಳು ಬ್ರಾಹ್ಮಣ ಮಧುವರಸರ ಮಗಳು ಸಮಗಾರ ಹರಳಯ್ಯನ ಮಗನನ್ನು ಮದುವೆಯಾದದ್ದು ಇದು ವರ್ಣಸಂಕರದ ವಿಲೋಮ-ವಿವಾಹ ಎಂದು ಗಲಾಟೆ ಹುಟ್ಟುಹಾಕಿದರು. ಆದರೆ ಬಸವಾದಿ ಶರಣರು ಇದು ಜಾತಿ ರಹಿತವಾಗಿರುವ ಸಮಾನ ಧರ್ಮೀಯರ ಮದುವೆ ಎಂದು ಸಾರಿದರು. ಮಧುವರಸರು ಬ್ರಾಹ್ಮಣಜಾತಿಯನ್ನು ತ್ಯಜಿಸಿ ಇಷ್ಟಲಿಂಗ ದೀಕ್ಷಾ ಸಂಸ್ಕಾರ ಹೊಂದಿದ್ದಾರೆ. ಹರಳಯ್ಯನವರು ಸಮಗಾರ ಜಾತಿಯನ್ನು ಅಳಿದು ಅವರೂ ಕೂಡಾ ಇಷ್ಟಲಿಂಗ ಸಂಸ್ಕಾರ ಹೊಂದಿದ್ದಾರೆ. ಆದ್ದರಿಂದ ಎರಡೂ ಕುಟುಂಬ-ಗಳವರು ಲಿಂಗಾಯತ ಧರ್ಮೀಯರಾದುದರಿಂದ ಇದು ವಿಲೋಮ ವಿವಾಹವಲ್ಲ, ಇದು ಮಾನವತೆಯ ಮಹಾಸಿದ್ಧಿ ಎಂದು ಪ್ರತಿಪಾದಿಸಿದರು.

೨೨. ಹರಳಯ್ಯ-ಮಧುವರಸರಿಗೆ ಎಳೆಹೂಟ ಶಿಕ್ಷೆ- ಮರಣವೇ ಮಹಾನವಮಿ :

ಅನುಭವ ಮಂಟಪದಲ್ಲಿ ಜರುಗಿದ ಈ ಕಲ್ಯಾಣ ಮಹೋತ್ಸವವನ್ನು ಕಾರಣವಾಗಿಸಿಕೊಂಡ ಕೊಂಡೆಯ ಮಂಚಣ್ಣ, ನಾರಾಯಣ ಕ್ರಮಿತ, ಮುಕುಂದಪೆದ್ದಿ ಮುಂತಾದ ಜಾತ್ಯಾಂಧರು ಮಹಾರಾಜ ಬಿಜ್ಜಳನಲ್ಲಿ ದೂರು ಕೊಟ್ಟರು. ಮಹಾರಾಜನ ಕರ್ತವ್ಯ ವರ್ಣಧರ್ಮದ ರಕ್ಷಣೆ, ವರ್ಣಾಶ್ರಮ ಸಮಾಜದ ರಕ್ಷಣೆ-

ಪಾಲಿಸೆ ಎಂಬ ಕುತಂತ್ರ ಹೂಡಿ, ಶರಣರ ಸಮಾನತೆಯ ಧರ್ಮವನ್ನು ಹತ್ತಿಕ್ಕಲು ನಿರ್ಧರಿಸಿದರು.

ಮಹಾರಾಜ ಬಿಜ್ಜಳನು ಮಧುವರಸ-ಹರಳಯ್ಯನವರನ್ನು ವಿಚಾರಣೆಗೊಳಪಡಿಸಿ, ಸವರ್ಣೀಯ ಕರ್ಮಠರ ತಂತ್ರಕ್ಕೊಳಗಾಗಿ 'ಹರಳಯ್ಯ-ಮಧುವರಸರಿಗೆ ಕಣ್ಣುಕೀಳಿಸಿ ಆನೆಯಕಾಲಿಗೆ ಕಟ್ಟಿ ಎಳೆಸಿ ಕೊಲ್ಲುವ ಎಳೆಹೂಟೆ ಶಿಕ್ಷೆಯನ್ನು ಆಜ್ಞಾಪಿಸಿದನು. ಬಸವಣ್ಣನವರು ಮನನೊಂದು ಪ್ರಧಾನಮಂತ್ರಿ ಹುದ್ದೆಯನ್ನು ತ್ಯಾಗ ಮಾಡಿದರು. ರಾಜ್ಯದಲ್ಲಿ ಪ್ರಜೆಗಳು ದಂಗೆ ಏಳಬಹುದೆಂದು ಊಹಿಸಿ, ಬಸವಣ್ಣನವರಿಗೆ 'ಗಡೀಪಾರು ಆಜ್ಞೆ' ಮಾಡಿಸಿದರು. ಬಸವಣ್ಣನವರು ಅಪ್ಪಣ್ಣ ಶರಣರೊಂದಿಗೆ ಕಲ್ಯಾಣ ತೊರೆದು ಕಪ್ಪಡಿಸಂಗಮಕ್ಕೆ ಹೋಗಬೇಕಾಯಿತು.

ಇತ್ತ ಕಲ್ಯಾಣದಲ್ಲಿ-ಹರಳಯ್ಯ-ಮಧುವರಸರು ಬಸವಧರ್ಮದ ಉಳಿಯುವಿಕೆಗಾಗಿ **'ಮರಣವೇ ಮಹಾನವಮಿ'** ಎಂದು ಎಳೆಹೂಟೆ ಶಿಕ್ಷೆಗೊಳಗಾಗಿ ಬಲಿದಾನವಾದರು, ಹುತಾತ್ಮರಾದರು. ಈ ಸುದ್ಧಿ ರಾಜ್ಯಾದ್ಯಂತ ಕಾಳ್ಗಿಚ್ಚಿನಂತೆ ಹಬ್ಬಿತು. ಕಲ್ಯಾಣ ಕ್ರಾಂತಿ ಸಿಡಿಯಿತು. ಹರಳಯ್ಯ-ಮಧುವರಸರ ಬಲಿದಾನಕ್ಕೆ ಪ್ರತೀಕಾರವಾಗಿ ತರುಣರು ಸಿಡಿದೆದ್ದರು. ಜಗದೇವ-ಮೊಲ್ಲೆಬೊಮ್ಮರು ರಾಜ ಬಿಜ್ಜಳನ ವಧೆ ಮಾಡಿದರು. ಈ ಆರೋಪವು ಶರಣರ ಮೇಲೆ ಬರುವಂತೆ ವರ್ಣವಾದಿಗಳು ಅಪಪ್ರಚಾರ ಮಾಡಿ, ರಾಜ ಭಕ್ತರನ್ನು ಪ್ರಚೋದಿಸಿದರು ; ಬಿಜ್ಜಳನ ಮಗ ರಾಯ ಮುರಾರಿ ಸೋವಿದೇವನನ್ನು ತಮ್ಮಂತೆ ಮಾಡಿಕೊಂಡು, ಅವನ ಮೂಲಕ ಕಲ್ಯಾಣ ಕ್ರಾಂತಿ ಹತ್ತಿಕ್ಕಲು, ಶರಣರನ್ನು ಕೊಲ್ಲಲು ಸೈನ್ಯಕ್ಕೆ ಆಜ್ಞೆ ಮಾಡಿಸಿದರು.

ಶರಣೆ ಅಕ್ಕನಾಗಮ್ಮ, ಗಂಗಾಂಬಿಕೆ, ಚೆನ್ನಬಸವಣ್ಣ, ಮಡಿವಾಳ ಮಾಚಿದೇವ, ಡೋಹರ ಕಕ್ಕಯ್ಯ, ಕಿನ್ನರಿ ಬೊಮ್ಮಯ್ಯ, ಮೋಳಿಗೆ ಮಾರಯ್ಯ, ಸಿದ್ಧರಾಮೇಶ್ವರರು ಮುಂತಾದ ಹಿರಿಯ ಶರಣರ ನೇತೃತ್ವದಲ್ಲಿ ಗಣಾಚಾರಿ ಶರಣರು ಅಪಾರವಾದ ವಚನಸಾಹಿತ್ಯದ ಉಳಿವಿಕೆಗಾಗಿ ಸೈನ್ಯದೊಂದಿಗೆ ಯುದ್ಧ ಮಾಡುತ್ತಾ ಪಶ್ಚಿಮ ಘಟ್ಟಗಳತ್ತ ಸಾಗಿದರು. ಅಲ್ಲಲ್ಲಿ ಕೆಲವರು ಶರಣ-ಶರಣೆಯರು ಕಾಳಗದಲ್ಲಿ ಹುತಾತ್ಮರಾದರು. ಕೊನೆಗೆ ಅಕ್ಕನಾಗಮ್ಮ, ಚೆನ್ನಬಸವಣ್ಣ, ಘನಲಿಂಗ ರುದ್ರಮುನಿ, ಕಿನ್ನರಿ ಬೊಮ್ಮಯ್ಯ ಮುಂತಾದವರು ಉಳವಿಯ ಮಹಾ ಘೋರಾರಣ್ಯ ಪ್ರವೇಶಿಸಿ, ಉಳವಿಯಲ್ಲಿ ಉಳಿದರು. ಸೈನ್ಯ ಸೋತು ಹಿಮ್ಮೆಟ್ಟಿತು. ಅಲ್ಲಮಪ್ರಭು, ಅಕ್ಕಮಹಾದೇವಿಯರೊಂದಿಗೆ ಶರಣರ ಒಂದು ಗುಂಪು ಶ್ರೀಶೈಲದ ಕದಳಿ ಕಡೆಗೆ ತೆರಳಿತು. ಉಳಿದ ಶರಣರು ವಿವಿಧೆಡೆಗೆ ತೆರಳಿದರು.

೨೩. ಬಸವಣ್ಣನವರ ಗಡಿಪಾರು-ಕಪ್ಪಡಿ ಸಂಗಮಕ್ಕೆ ಬಂದುದು : (ಅಪ್ಪಣ್ಣ ಶರಣರ ಮೂಲಕ ಬಸವಣ್ಣನವರ ಕಳಿಸಿದ ನಿರೂಪ)

ಕಲ್ಯಾಣದಲ್ಲಿ ಹರಳಯ್ಯ-ಮಧುವಯ್ಯಗಳಿಗೆ ಎಳೆಹೊಟೆ ಶಿಕ್ಷೆಯ ಆಜ್ಞೆಯಾದ ವಿಷಯ ಬಸವಣ್ಣನವರಿಗೆ ಕಪ್ಪಡಿ ಸಂಗಮಕ್ಕೆ ಬಂದಾಗ, ಚರಜಂಗಮದಿಂದ ತಿಳಿದ ಬಂದಿತು. ಕೂಡಲೇ ಬಸವಣ್ಣನವರು ತಮ್ಮ ಆಪ್ತ ಶರಣ ಹಡಪದ ಅಪ್ಪಣ್ಣನವರ ಮೂಲಕ ಕಲ್ಯಾಣಕ್ಕೆ ಮಹಾಮನೆಯ ಶರಣರಿಗೆ ನಿರೂಪ ಕಳಿಸಿದರು. ಬರುವಾಗ ಮಹಾಮನೆಯ ಬಳಗದವರನ್ನು ಕರೆತರಲು ಹೇಳಿದರು.

ಅಪ್ಪಣ್ಣ ಶರಣರು ಕಲ್ಯಾಣಕ್ಕೆ ಬರುವುದರೊಳಗಾಗಿ ಎಳೆಹೂಟೆ ಶಿಕ್ಷೆ ಜಾರಿಯಾಗಿತ್ತು. ರಾಜ ಬಿಜ್ಜಳನ ಹತ್ಯೆಯಾಗಿತ್ತು, ಎಲ್ಲೆಡೆಯಲ್ಲಿ ಸಂಪ್ರದಾಯ ಕರ್ಮಠರಿಗೂ, ಶರಣಗಣಾಚಾರಿಗಳಿಗೂ ಕಾಳಗ ನಡೆಯುತ್ತಿತ್ತು. ಅಪ್ಪಣ್ಣನವರು ಬಂದು ನೀಲಾಂಬಿಕೆ ತಾಯಿಯವರಿಗೆ ಬಸವಣ್ಣನವರ ನಿರೂಪವನ್ನು ಅರುಹಿದರು. ಆಗಲೇ ಶರಣ-ಸಂಕುಳ ತಮ ತಮಗೆ ಅನುಕೂಲ ಸ್ಥಳಗಳನ್ನರಿಸಿ ಹೊರಟು ಹೋಗಿತ್ತು. ನೀಲಾಂಬಿಕೆ ತಾಯಿಯವರು ಲಿಂಗಪೂಜೆಯಲ್ಲಿ ನಿರತರಾಗಿದ್ದಾಗ ಸ್ವರ ವಚನವೊಂದು ಹೊಮ್ಮಿತು.

ನೋಡು ನೋಡು ನೋಡು ನೋಡು
ನೋಡು ಲಿಂಗವೇ ।
ನೋಡು ಬಸವಯ್ಯನವರು ಮಡಿದಾಟವ ॥ಪ॥

ಹರಳಯ್ಯ ಮಧುವಯ್ಯನವರಿಗೆ ಎಳೆಹೊಟಿ
ದೊರೆಯು ಬಿಜ್ಜಳನು ಕಟ್ಟಿದನೆಂದರೆ ।
ಇರಬಾರದಿಲ್ಲೀಗ ಶರಣರಿಗರುಹಿರೆಂ-
ದರಸು ಬಸವರಾಜ ಪೇಳ್ವನಂತೆ ॥೧॥

ನುಡಿಯ ಲಾಲಿಸು ಬೇಗ ಕೆಡುವುದೀ ಕಲ್ಯಾಣ
ಒಡೆಯ ಸಂಗಮನೋಳು ಬೆರೆವನಂತೆ ।
ತಡಮಾಡಬೇಡಿರಿ ಮಡದಿಯರಿಗರುಹಿರೆಂದು
ಒಡೆಯ ಬಸವರಾಜ ನುಡಿದನಂತೆ ॥೨॥

ಅಲ್ಲಿಗೆಮ್ಮನ್ನು ಬರಲು ಹೇಳಿದರಂತೆ
ಅಲ್ಲಿರ್ಪ ಸಂಗಯ್ಯನಿಲ್ಲಿಲ್ಲವೆ ?
ಅಲ್ಲಿ ಇಲ್ಲಿ ಎಂಬ ಉಭಯ ಸಂದೇಹವು
ಬಲ್ಲ ಮಹಾತ್ಮರಿಗಿದು ತರವೆ ? ॥೩॥

ಅಪ್ಪಣ್ಣಯ್ಯಗಳು ಕರೆಯ ಬಂದಿಹರು
ಕಪ್ಪಡಿ ಸಂಗಮನಾಥ ಕೇಳೋ ।
ಪುಷ್ಪಕ್ಕೆ ಪರಿಮಳ ಬೆರೆದಂತೆ ಎನ್ನ-
ನಪ್ಪಿದ ಲಿಂಗವೆ ಮಾತನಾಡೋ ॥೪॥

ಸಂಗನಬಸವನ ನಿರೂಪವ ತಾಳುತೆ
ಹಿಂಗದೆ ಕರವೆತ್ತಿ ನಮಿಸುತಲಿ ।
ಸಂಗನಬಸವಯ್ಯನಾತನೆ ಈತನೆ -
ನ್ನಂಗಯ್ಯಲಿಂಗದೊಳಡಗುವೆನು ॥೫॥

ನೀಲಾಂಬಿಕಾ ತಾಯಿಯು ಕಲ್ಯಾಣದಲ್ಲಿಯೇ ಉಳಿದು, ಇಲ್ಲಿಯೇ ಬಯಲಾಗುವುದಾಗಿ ಹೇಳಿದರೂ, ಅಪ್ಪಣ್ಣ ಶರಣರು ಪರಿ ಪರಿಯಾಗಿ ವಿನಂತಿಸಿ, ನೀಲಮ್ಮ ತಾಯಿಗಳನ್ನು ಹಾಗೂ ಅವರೊಂದಿಗೆ ತನ್ನ ಪತ್ನಿ ಲಿಂಗಮ್ಮಳನ್ನೂ ಕರೆದುಕೊಂಡು, ಆಪ್ತರಾದ ಗಣಾಚಾರದ ಶರಣರ ಕಾವಲಿನಲ್ಲಿ ಕಲ್ಯಾಣದಿಂದ ಸಂಗಮದೆಡೆಗೆ ಹೊರಟರು. ಬೆಳಗಿನ ಜಾವ ಕೃಷ್ಣ-ಮಲಾಪಹಾರಿಯರು ಸಂಗಮವಾಗಿ ಹರಿಯುತ್ತಿದ್ದ ಕೃಷ್ಣಾ ನದಿಯ ದಡಕ್ಕೆ ಬಂದು ತಲುಪಿದರು. ಬೆಳಗಿನ ಸುಪ್ರಭಾತ ಸಮಯದಲ್ಲಿ ನದಿಯಲ್ಲಿ ಮಿಂದು ನೀಲಾಂಬಿಕೆಯು ಪೂಜೆಗೆ ಕುಳಿತುಕೊಂಡರು. ಕರದಿಷ್ಟಲಿಂಗದಲ್ಲಿ ಬಸವನ ರೂಪು ಕಾಣತೊಡಗಿತು. ಅದು ನಿರೂಪವಾಗತೊಡಗಿತು. ಲಿಂಗಾಂಗ ಸಾಮರಸ್ಯದ ಆನಂದದಲ್ಲಿ ಮೈಮರೆತಳು.

೨೪. ಬಸವಣ್ಣನವರು ಮಹಾಬಯಲಿನಲಿ ಬಯಲಾದುದು :

ಅತ್ತ ಕಪ್ಪಡಿಸಂಗಮದ ಕೃಷ್ಣಾ-ಮಲಾಪಹಾರಿಗಳ ಸಂಗಮದ ನಡುವಿನ ದಿನ್ನೆಯ ಮೇಲೆ ಬೆಳಗಿನ ಸುಪ್ರಭಾತ ಸಮಯದಲ್ಲಿ ಇಷ್ಟಲಿಂಗ ಪೂಜೆಯಲ್ಲಿ ನಿರತರಾಗಿದ್ದ ಬಸವಣ್ಣನವರಿಗೆ- ಕಲ್ಯಾಣದ ಚಿತ್ರಣ ತೋರತೊಡಗಿತು.

-೧-

ಅಯ್ಯಾ, ಭಕ್ತಿಗೆ ಬೀಜವಾದುದು ಕಲ್ಯಾಣ ಮೂವತ್ತಾರು ವರುಷ
ಅಯ್ಯಾ, ಅನುಭಾವಕ್ಕೆ ಶಿವಸದನವಾದುದು ಇಪ್ಪತ್ತೇಳು ವರುಷ
ಅಯ್ಯಾ, ಹಿಂದಿನಂತನುಭವ, ಹಿಂದಿನಂತೆ ಭಕ್ತಿಯಿಲ್ಲ
ಮೂರು ಮಾಸದೊಳಗಾಗಿ
ಇಲ್ಲಿ ಆಡಲುಭಯವಿಲ್ಲಕೇಳಯ್ಯಾ
ಕೂಡಲಸಂಗಮದೇವಯ್ಯಾ

-೨-

ಬಿತ್ತಿತ್ತು ಬೆಳೆಯಿತ್ತು, ಕೆಯ್ಯ ಕೊಯ್ಯಿತ್ತು
ಗೂಡು ಮುರಿಯಿತ್ತು, ಕುತ್ತಿರಿಯೊಟ್ಟಿತ್ತು
ಒಕ್ಕಿತ್ತು ತೂರಿತ್ತು ಅಳೆಯಿತ್ತು, ಸಲಗೆ ತುಂಬಿತ್ತು
ಕೂಡಲಸಂಗಮದೇವಯ್ಯಾ
ಮೇಟಿ ಕಿತ್ತಿತ್ತು, ಕಣಹಾಳಾಯಿತ್ತಯ್ಯಾ

-೩-

ಕರ್ತನಟ್ಟಿದಡೆ ಮರ್ತ್ಯದಲ್ಲಿ ಮಹಾಮನೆಯ ಕಟ್ಟಿದೆ
ಸತ್ಯ ಶರಣರಿಗೆ ತೊತ್ತು ಭೃತ್ಯನಾಗಿ ಸವೆದು ಬದುಕಿದೆನು
ಕರ್ತನ ಬೆಸನು ಮತ್ತೆ ಬರಲೆಂದಟ್ಟಿದಡೆ
ಕೂಡಲಸಂಗಮದೇವರ ನಿರೂಪಕ್ಕೆ ಮಹಾಪ್ರಸಾದವೆಂಬೆನು

ಈ ರೀತಿಯಾಗಿ ಗುರು ಬಸವಣ್ಣನವರು ತಮ್ಮ ಮಹಾಮಣಿಹ ಪೂರೈಸಿತೆಂದು ಮಹಾ ಬಯಲಿನಲ್ಲಿ ಬಯಲಾದರು. ಕರದಿಷ್ಟಲಿಂಗದೊಳು ಬೆರೆತು ಬಯಲಾದರು.

೨೫. ನೀಲಾಂಬಿಕಾ ತಾಯಿಯು ಬಸವ ಮಹಾಬಯಲಿನಲ್ಲಿ ಬಯಲಾದುದು :

ಶರಣೆ ನೀಲಾಂಬಿಕೆಯವರು ಅತ್ತ ಲಿಂಗಪೂಜೆಯಲ್ಲಿ ಮಗ್ನರಾಗಿರುವಾಗ ಬಸವಣ್ಣನವರು ಮಹಾಲಿಂಗದೊಳು ಲೀನವಾದುದನ್ನು ಅರಿತರು. ಅವರ ಹೃದಯದ ಭಾವನೆಗಳು ವಚನವಾಣಿಯಾಗಿ ಹೊರಹೊಮ್ಮಿದವು.

-೧-

ಅಂಗಸಂಗಿಗನಲ್ಲ ನಮ್ಮ ಬಸವಯ್ಯನು.
ಪ್ರಾಣದ ಭ್ರಮೆಯವನಲ್ಲ ನಮ್ಮ ಬಸವಯ್ಯನು
ಉಭಯದ ಹಂಗ ಹರಿದು-
ಉಪಮಾತೀತನಾದ ನಮ್ಮ ಬಸವಯ್ಯನು
ಸಂಗಯ್ಯನಲ್ಲಿ ಕೂಡಿ ನಿರಾಳ ಪ್ರಸನ್ನಮೂರ್ತಿಯಾದ
ನಮ್ಮ ಬಸವಯ್ಯನು

-೨-

ಎಲೆ ಅಯ್ಯಾ ಬಸವಾ, ಕರಸ್ಥಲ ಬಯಲಾಯಿತ್ತೆನಗೆ
ಕರಸ್ಥಲ ಮನಸ್ಥಲವಾಯಿತ್ತು ಬಸವಾ
ಸಂಗಯ್ಯಾ, ಬಸವ ಹೋದನತ್ತ
ನಾನಡಗಿದೆನಯ್ಯಾ ನಿನ್ನತ್ತ

-೩-

ಬಸವಾ ಬಸವಾ ಬಸವಾ ಎಂಬ ಶಬ್ದವಡಗಿತ್ತು
ಬಸವಾ ಬಸವಾ ಬಸವಾ ಎಂಬ ರೂಪ ನಿರೂಪವಾಯಿತ್ತು
ಬಸವನ ಕಾಯವಳಿದು ನಿರಾಕುಳವಾಗಲು
ಆನು ಬಸವಾ ಬಸವಾ ಬಸವಾ ಎಂದು
ಬಯಲಾದೆನಯ್ಯಾ ಸಂಗಯ್ಯಾ

ಈ ರೀತಿ ನೀಲಾಂಬಿಕಾ ತಾಯಿಯವರು 'ಬಸವ' ನಾಮಸ್ಮರಣೆಗೈಯುತ್ತ ಬಸವ ಮಹಾ ಬಯಲಿನಲ್ಲಿ ಬಯಲಾದರು. ಕಪ್ಪಡಿ ಸಂಗಮದಲ್ಲಿ ಗುರು ಬಸವಣ್ಣನವರು, ತಂಗಡಗಿ ಗ್ರಾಮದಲ್ಲಿ ನೀಲಾಂಬಿಕಾ ತಾಯಿಯವರು ಬಯಲಿಲ್ಲ ಬಯಲಾದರು. ಅದೇ ಕಾಲಕ್ಕೆ ಶರಣ ದಂಪತಿಗಳಾದ ಹಡಪದ ಅಪ್ಪಣ್ಣ ಹಾಗೂ ಲಿಂಗಮ್ಮ ತಾಯಿಯವರೂ ಕೂಡ ಕರದಿಷ್ಟಲಿಂಗಪೂಜೆಯಲ್ಲಿ ನಿರತರಾಗಿ ಅವರೂ ಕೂಡ ತಂಗಡಿಯಲ್ಲಿಯೇ ಬಸವ ಮಹಾಬಯಲಿನಲ್ಲಿ ಬಯಲಾದರು.

೨೬. ನೀಲಾಂಬಿಕಾ ತಾಯಿಯ ವಚನ-ಸ್ವರ ವಚನಗಳು :

ಶರಣೆ ನೀಲಾಂಬಿಕೆಯವರು 'ನೀಲಮ್ಮನ ವಚನ ಲಕ್ಷದ ಹನ್ನೊಂದು ಸಾಸಿರ' ವಚನಗಳನ್ನು ರಚಿಸಿರುವರೆಂದು ಶಿವಯೋಗಿ ಸಿದ್ಧರಾಮೇಶ್ವರರು

ತಮ್ಮದೊಂದು ವಚನದಲ್ಲಿ ಹೇಳಿದ್ದಾರೆ. ಆದರೆ ಕಲ್ಯಾಣ ಕ್ರಾಂತಿಯ ಕಾಲಕ್ಕೆ ಅಪಾರ ವಚನವಾಙ್ಮಯವನ್ನು ಕರ್ಮಠ ಸಂಪ್ರದಾಯವಾದಿಗಳು ನಾಶಪಡಿಸಿದರು. ಬಸವ ಭಕ್ತರು ಅಲ್ಲಲ್ಲಿ ಗುಪ್ತವಾಗಿ ಅಡಗಿಸಿಟ್ಟದ್ದ ತಾಡೋಲೆಗಳನ್ನು ಎಂಟುನೂರು ವರುಷಗಳ ನಂತರ ಸಂಶೋಧಿಸಿ, ಸಂಗ್ರಹಿಸಿ, ಪ್ರಕಟಿಸುವ ಕಾರ್ಯವನ್ನು ಶರಣ ಫ. ಗು. ಹಳಕಟ್ಟಿಯವರು ಮಾಡಿದರು. ಆ ಕಾರ್ಯದ ಮುಂದುವರಿಕೆಯಾಗಿ ಮೈಸೂರಿನ ಶರಣ ಪಿ.ಎಂ. ಗಿರಿರಾಜು ಹಾಗೂ ಕರ್ನಾಟಕದ ವಿಶ್ವವಿದ್ಯಾಲಯಗಳು, ಅನಂತರದಲ್ಲಿ ಖ್ಯಾತ ಸಂಶೋಧಕ ಡಾ. ಎಂ. ಎಂ. ಕಲಬುರ್ಗಿ ಅವರ ಪ್ರಧಾನ ಸಂಪಾದಕತ್ವದಲ್ಲಿ ಕರ್ನಾಟಕ ಸರ್ಕಾರದಿಂದ ೧೫ ಸಮಗ್ರ ವಚನ ಸಂಪುಟಗಳು ಪ್ರಕಟಗೊಂಡವು.

ಸಧ್ಯ ನಮಗೆ ಶರಣೆ ನೀಲಮ್ಮನವರ ೨೮೮ ವಚನಗಳು ಹಾಗೂ ೮ ಸ್ವರ ವಚನಗಳು ಅಧ್ಯಯನಕ್ಕೆ ದೊರೆಯುತ್ತವೆ.

'ಸಂಗಯ್ಯ' ಎಂಬ ವಚನಾಂಕಿತದಲ್ಲಿ ಪ್ರಕಟವಾಗಿರುವ ನೀಲಾಂಬಿಕೆ-ಯವರ ವಚನಗಳಲ್ಲಿ ಗುರು ಬಸವಣ್ಣನವರ ವ್ಯಕ್ತಿತ್ವ ದರ್ಶನ, ಶರಣ ಸಂಗದ ಮಹತ್ವ, ಅನುಭವ ಮಂಟಪ ನಿರ್ಮಾಣ, ಸ್ತ್ರೀ ಸ್ವಾತಂತ್ರ್ಯ, ಸ್ವಾಭಿಮಾನ, ವಿಚಾರ ಪತ್ನಿ, ಪ್ರಸಾದ ತತ್ವ, ಬಸವ ಮಹಾಮನೆ, ಅಕ್ಕನಾಗಮ್ಮ, ಅಲ್ಲಮಪ್ರಭು, ಚೆನ್ನಬಸವಣ್ಣ, ಸಿದ್ಧರಾಮೇಶ್ವರ, ಅಜಗಣ್ಣ, ಕಕ್ಕಯ್ಯ, ಚಿಕ್ಕಯ್ಯ, ಚಿಲ್ಲಾಳ, ಅನಿಮಿಷ, ಮಾದರ ಚೆನ್ನಯ್ಯ, ಹಡಪದ ಅಪ್ಪಣ್ಣ ಮುಂತಾದ ಶರಣರ ಹೆಸರುಗಳು ಉಲ್ಲೇಖಗೊಂಡಿವೆ.

ಶರಣೆ ನೀಲಾಂಬಿಕೆಯು ತನ್ನ ಪತಿ ಹಾಗೂ ತನಗೆ ಗುರುವೂ ಆಗಿದ್ದ ಬಸವಣ್ಣನವರ ವ್ಯಕ್ತಿತ್ವ ದರ್ಶನವನ್ನು ತಮ್ಮ ವಚನಗಳಲ್ಲಿ ಮಾಡಿಸಿದ್ದಾರೆ.

-೧-

ಅನುಭಾವದ ಸಾರವೇ ನಿಜಸಾರವಾಗಿ
ನಿಂದನೆಮ್ಮ ಬಸವಯ್ಯನು
ವಿವೇಕದ ಸಂಗವೇ ನಿಜಸಂಗವಾಗಿ
ನಿಂದನೆಮ್ಮ ಬಸವಯ್ಯನು
ಭಾವದ ಬಯಲಿಂಗೆ ಬಣ್ಣವಿಟ್ಟನೆಮ್ಮ
ಬಸವಯ್ಯನು
ಇತರೇತರ ಮಾರ್ಗವಳಿದು
ಗಮನನಾಸ್ತಿಯಾದನೆಮ್ಮ ಬಸವಯ್ಯನು
ಸಂಗಯ್ಯನಲ್ಲಿ ಉಭಯ ಕುಳನಾಸ್ತಿಯಾದನೆಮ್ಮ ಬಸವಯ್ಯನು

-೨-

ಏಕ ಏವ ದೇವನೊಬ್ಬನೆ ಶರಣ ಬಸವಯ್ಯನು
ಆ ಶರಣ ಬಸವಯ್ಯನಿರವೆ
ಪರಮ ಪ್ರಸಾದ ರೂಪವಾಯಿತ್ತು
ಆ ಪರಮಪ್ರಸಾದ ರೂಪಮೂರ್ತಿ
ನಮ್ಮ ಸಂಗಯ್ಯನಲ್ಲಿ ಸದ್ಗುರು ಬಸವಯ್ಯನು

ನೀಲಾಂಬಿಕೆ ತಾಯಿಯು ರಚಿಸಿದ ಎಂಟು ಸ್ವರ ವಚನಗಳು ಲಭ್ಯವಾಗಿವೆ.

೧) ರುದ್ರಾಕ್ಷಿ ಮಹಿಮೆ ೨) ಪೂರ್ವಾಶ್ರಮ ನಿರಸನ ೩) ಶೀಲ ಸಂಪಾದನೆ ೪) ಸಹ ಭೋಜನ ೫) ನಿರುಪಾಧಿ ಮಾಟ ೬) ಇಲ್ಲಿ ತಾವಿಲ್ಲವೆ ಸಂಗಯ್ಯ ೭) ಚೆನ್ನಬಸವಣ್ಣ ಶಿಶುವೆ ೮) ಕರುಣಿಸಿ ಸಲಹಿರೋ ಶರಣರು

ಶರಣೆ ನೀಲಾಂಬಿಕಾ ತಾಯಿಯು ನಮ್ಮ ನಾಡಿನ, ಪ್ರಪಂಚದ ಹೆಣ್ಣು ಮಕ್ಕಳಿಗೆಲ್ಲ ಆದರ್ಶ ಸದ್ಗೃಹಿಣಿಯಾಗಿದ್ದಾರೆ.

೨೭. ಗ್ರಂಥ ಋಣ :

೧) ಶಿವಶರಣೆಯರ ವಚನಸಂಪುಟ – ಸಂ. ಡಾ. ವೀರಣ್ಣ ರಾಜೂರ
೨) ಶಿವಶರಣೆಯರ ವಚನಗಳು – ಸಂ. ಡಾ. ಆರ್. ಸಿ. ಹಿರೇಮಠ
೩) ಬಸವಣ್ಣನವರ ವಚನ ಸಂಪುಟ – ಸಂ. ಡಾ. ಎಂ. ಎಂ. ಕಲಬುರ್ಗಿ
೪) ಮಹಾಶರಣೆ ನೀಲಾಂಬಿಕೆ – ಸಂ. ಪ್ರೊ. ಎಸ್. ಎಸ್. ಭೂಸರಡ್ಡಿ
೫) ಶರಣರು ಕಂಡ ಬಸವಣ್ಣ – ಸಂ. ಎಚ್. ಡಿ. ಚಂದನಗೌಡರು
೬) ಬಸವೇಶ್ವರರ ಸಮಕಾಲೀನರು – ಪ್ರ. ಬಸವ ಸಮಿತಿ ಬೆಂಗಳೂರು
೭) ಶರಣ ಚರಿತಾಮೃತ – ಡಾ. ಸಿದ್ಧಯ್ಯ ಪುರಾಣಿಕ

ಡಾ. ಕಲ್ಯಾಣಮ್ಮ ಲಂಗೋಟಿ ಅವರ ಸಾಹಿತ್ಯ ಕೃತಿಗಳು

೧.	ಮರಣವೇ ಮಹಾನವಮಿ	೧೯೭೯
೨.	ಗಣನಾಯಕ ಮಡಿವಾಳ ಮಾಚಿದೇವರು	೧೯೮೦
೩.	ಷಣ್ಮುಖ ಶಿವಯೋಗಿಗಳು ಕಂಡ ಬಸವಣ್ಣವವರು	೧೯೮೨
೪.	ಸಿದ್ಧಲಿಂಗೇಶ್ವರ ಕಂಡ ಬಸವಣ್ಣನವರು	೧೯೮೩
೫.	ಶರಣೆಯರ ವಚನಾಮೃತ (ಸಂಪಾದಿತ)	೧೯೮೫
೬.	ಅಕ್ಕಮಹಾದೇವಿ ವಚನಗಳು (ಸಂಪಾದಿತ)	೧೯೮೭
೭.	ಶರಣೆಯರ ವಚನಗಳು (ಸಂಪಾದಿತ)	೧೯೮೮
೮.	ದೇವದಾಸಿ ಪದ್ಧತಿ ವಿಮೋಚನೆ ಹಾಗೂ ಬಸವಣ್ಣನವರು	೧೯೮೯
೯.	ಸ್ವತಂತ್ರ ಸಿದ್ಧಲಿಂಗೇಶ್ವರ ವಚನಗಳು (ಸಂಪಾದಿತ)	೧೯೯೦
೧೦.	ನೀಲಾಂಬಿಕೆಯ ವಚನಗಳು (ಸಂಪಾದಿತ)	೧೯೯೩
೧೧.	ಸ್ತ್ರೀ ಸಂವೇದನೆಗಳು (ಕವನ ಸಂಗ್ರಹ)	೨೦೦೦
೧೨.	ಜಯದೇವಿತಾಯಿ ಲಿಗಾಡೆ	೨೦೦೨
೧೩.	ಕವಿಗಳು ಕಂಡ ಮಹಾಂತ ಶಿವಯೋಗಿಗಳು	೨೦೦೨
೧೪.	ಶರಣೆ ಹಡಪದ ಲಿಂಗಮ್ಮ	೨೦೦೫
೧೫.	ಬಸವಾದಿ ಶರಣರ ವಚನಾಂಕಿತಗಳು	೨೦೦೫
೧೬.	ರಾಷ್ಟ್ರಕವಿ ಜಿ. ಎಸ್. ಶಿವರುದ್ರಪ್ಪನವರು	೨೦೦೬
೧೭.	ವರಕವಿ–ಜಗದ ಕವಿ ಈಶ್ವರ ಸಣಕಲ್ಲರು	೨೦೦೮
೧೮.	ದಲಿತ ವಚನಕಾರ ಕುಮಾರ ಕಕ್ಕಯ್ಯಾ (ಮಹಾಪ್ರಬಂಧ)	೨೦೧೧
೧೯.	ವಿಚಾರಪತ್ನಿ ಶರಣೆ ನೀಲಾಂಬಿಕೆಯವರು	೨೦೧೬



ಡಾ. (ಶ್ರೀಮತಿ) ಎಸ್.ಎಸ್. ಲಂಗೋಟಿ ಅವರು 'ಕಲ್ಯಾಣಮ್ಮ ಲಂಗೋಟಿ' ಎಂಬ ಕಾವ್ಯನಾಮದಿಂದ ಕನ್ನಡ ಸಾರಸ್ವತ ಲೋಕಕ್ಕೆ ಕವಯಿತ್ರಿಯಾಗಿ, ಆಧುನಿಕ ವಚನಕಾರ್ತಿಯಾಗಿ, ಗದ್ಯಲೇಖಕಿಯಾಗಿ ಚಿರಪರಿಚಿತರಾಗಿದ್ದಾರೆ.

ಕಲ್ಯಾಣನಾಡಿನ ಬೀದರ ಜಿಲ್ಲೆಯ ಭಾಲ್ಕಿ ತಾಲೂಕಿನ ಬೀರಗಿ(ಬಿ) ಗ್ರಾಮದ ಶರಣದಂಪತಿಗಳಾದ ಶ್ರೀ ಹಾವಪ್ಪ ಮಾಸ್ತರ ಕೋಟೆಣ್ಣವರ ಹಾಗೂ ಶ್ರೀಮತಿ ಅನ್ನಪೂರ್ಣಮ್ಮನವರ ಉದರದಲ್ಲಿ (೧೯೫೬ರಲ್ಲಿ) ಜನಿಸಿ, ಬೀದರ ಜಿಲ್ಲೆಯಲ್ಲಿ ಕನ್ನಡ ಪ್ರಾಥಮಿಕ ಶಿಕ್ಷಣ, ಧಾರವಾಡದ ಬಾಸೆಲ್ ಮಿಶನ್ ಗರ್ಲ್ಸ ಹೈಸ್ಕೂಲಿನಲ್ಲಿ ಮಾಧ್ಯಮಿಕ ಶಿಕ್ಷಣ, ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಪದವಿ ಪೂರ್ವ ಹಾಗೂ ಪದವಿ ಶಿಕ್ಷಣ ಪಡೆದರು. ಅನಂತರ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದಲ್ಲಿ ಓದಿ ಎಂ.ಎ. ಕನ್ನಡ ಸ್ನಾತಕೋತ್ತರ ಪದವಿ (೧೯೭೯) ಪಡೆದು, ಬೆಳಗಾವಿ ಜಿಲ್ಲೆಯ ರಾಮದುರ್ಗದ ಸಿ.ಎಸ್. ಬೆಂಬಳಗಿ ಕಲಾ, ಶಾ. ಎಂ. ಆರ್.ಪಿ. ವಿಜ್ಞಾನ, ಜಿ.ಎಲ್.ರಾಠಿ ವಾಣಿಜ್ಯ ಮಹಾವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕಿಯಾಗಿ ಸೇವೆಗೆ ಸೇರಿದರು.

ಶ್ರೀಮತಿ ಎಸ್.ಎಸ್. ಲಂಗೋಟಿಯವರು ಕನ್ನಡ ಪ್ರಾಧ್ಯಾಪಕಿಯಾಗಿ ಸೇವೆ ಸಲ್ಲಿಸುತ್ತಲೇ ಡಾ.(ಶ್ರೀಮತಿ) ಸುಲೋಚನಾ ಸಂಗನಬಸವ ಮಟ್ಟಿ ಅವರ ಮಾರ್ಗದರ್ಶನದಲ್ಲಿ ಆಧುನಿಕ ದಲಿತ ವಚನಕಾರ 'ಕುಮಾರ ಕಕ್ಕಯ್ಯನ ವಚನಗಳು: ಒಂದು ಅಧ್ಯಯನ' ಎಂಬ ವಿಷಯದಲ್ಲಿ ಸಂಶೋಧನಾ ಮಹಾಪ್ರಬಂಧ ಬರೆದು ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಿಂದ ಪಿಎಚ್.ಡಿ ಪದವಿಯನ್ನು ಪಡೆದುಕೊಂಡಿದ್ದಾರೆ.

ರಾಮದುರ್ಗದ ಡಿಗ್ರಿ ಕಾಲೇಜಿನಲ್ಲಿ ಕಳೆದ ೩೬ ವರುಷಗಳಿಂದ ಕನ್ನಡ ಪ್ರಾಧ್ಯಾಪಕಿಯಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಶರಣ ಸಾಹಿತ್ಯ ಕೃಷಿ ಕೈಕೊಂಡು ೧೪ಕ್ಕೂ ಮಿಕ್ಕಿ ಪುಸ್ತಕಗಳ ರಚನೆ ಹಾಗೂ ಸಂಪಾದನೆ ಮಾಡಿದ್ದಾರೆ. ಕನ್ನಡ ಸಾಹಿತ್ಯದ ಜೀವಾಳ, ಹೃದಯವೆನಿಸಿರುವ ವಚನ ಸಾಹಿತ್ಯವು ಇವರ ವಿಶೇಷ ಆಸಕ್ತಿಯ ಸಾಹಿತ್ಯ ಪ್ರಕಾರವಾಗಿದೆ. 'ಎನ್ನಯ್ಯ ಬಚ್ಚಬರಿಯ ಬಸವಣ್ಣ' ಎಂಬ ವಚನಾಂಕಿತದಲ್ಲಿ ನೂರಾರು ವಚನಗಳನ್ನು ಬರೆದು ಆಧುನಿಕ ವಚನಕಾರರಲ್ಲಿ ಹೆಸರು ಸಂಪಾದಿಸಿದ್ದಾರೆ.

ಕ್ರಿ.ಶ. ೨೦೦೦ ಇಸ್ವಿಯಲ್ಲಿ ಜಗತ್ತಿನ ಪ್ರಮುಖ ದೇಶಗಳಾದ ಇಂಗ್ಲಂಡ, ಅಮೇರಿಕಾ, ವ್ಹಾಟಿಕನ್, ಫ್ರಾನ್ಸ್, ಇಟಲಿ, ಜರ್ಮನಿ, ಕೆನಡಾ, ಆಸ್ಟ್ರಿಯಾ, ಹಾಲಂಡ, ಸಿಂಗಾಪುರ ರಾಷ್ಟ್ರಗಳ ಪ್ರವಾಸ ಕೈಕೊಂಡು ಇಂಗ್ಲೆಂಡಿನಲ್ಲಿ ವಚನ ಸಾಹಿತ್ಯ ಹಾಗೂ ಸ್ತ್ರೀ ಸಮಾನತೆ ಕುರಿತು ಉಪನ್ಯಾಸ ನೀಡಿದ್ದಾರೆ. ತುಮಕೂರ ಹಾಗೂ ಶಿವಮೊಗ್ಗಗಳಲ್ಲಿ ಜರುಗಿದ ಅ.ಭಾ.ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ಭಾಷಣ, ವಚನ ವಾಚನ ಮಾಡಿದ್ದಾರೆ. ಗಡಿನಾಡು ಉತ್ಸವದಲ್ಲಿ ಲೇಖಕಿ ಪ್ರಶಸ್ತಿ, ರಾಜ್ಯಮಟ್ಟದ 'ಲಚ್ಚಿಯಬ್ಬರಸಿ ಪ್ರಶಸ್ತಿ' ಶರಣ ಅಂಬಿಗಚೌಡಯ್ಯ ಗಣಾಚಾರ ಪ್ರಶಸ್ತಿ, ಬಸವ ಗುರುಕಾರುಣ್ಯ ಪ್ರಶಸ್ತಿ, ಶರಣದಾಂಪತ್ಯ ಪ್ರಶಸ್ತಿಗಳೊಂದಿಗೆ ಗೌರವಿಸಲ್ಪಟ್ಟಿದ್ದಾರೆ. ಆಕಾಶವಾಣಿಯಲ್ಲಿ ಅನೇಕ ಚಿಂತನಗಳು ಪ್ರಸಾರವಾಗಿವೆ.

ಗದಗ–ಬೆಟಗೇರಿ

– ಅಂಬಿಗರ ಕುಮಾರ ಚೌಡಯ್ಯ
ಆಧುನಿಕ ವಚನಕಾರರು